# ಕನ್ನಡ ಭಾಷಾ ಪಠ್ಯ

## ಬಿ.ಎಸ್ಸಿ. (ಫ್ಯಾಡ್)

## (ಮೂರು ಮತ್ತು ನಾಲ್ಕನೇ ಸೆಮಿಸ್ಟರ್)

ಪ್ರಧಾನ ಸಂಪಾದಕರು

**ಡಾ. ಡೊಮಿನಿಕ್**

ಕಾರ್ಯನಿರ್ವಾಹಕ ಸಂಪಾದಕರು

**ಡಾ. ಕೆ. ವೈ ನಾರಾಯಣಸ್ವಾಮಿ**

ಪರೀಶಿಲಕರು

**ಡಾ. ಬೆಳಕೆರೆ ಲಿಂಗರಾಜಯ್ಯ**

ಸಂಪಾದಕರು

**ಪ್ರೊ. ರೇಣುಕಮ್ಮ ಜೆ.**

**ಡಾ. ಆರ್. ವಾದಿರಾಜು**

**ಪ್ರೊ. ನಾರಾಯಣಸ್ವಾಮಿ ಎಸ್.ಜಿ.**

---

**ಬೆಂಗಳೂರು ನಗರ ವಿಶ್ವವಿದ್ಯಾಲಯ**

**KANNADA BHASHA PATYA :**

B.Sc. (Fad) : Third and Fourth Semester Text Book


Chief Editor : **Dr. Dominic**

Chairperson, Kannada Board of Studies

Bangalore City University.

Edited by : **Prof. J. Renukamma**

**Dr. R. Vadiraju**

**Prof. Narayanaswamy S.G.**



© ಬೆಂಗಳೂರು ನಗರ ವಿಶ್ವವಿದ್ಯಾಲಯ



ಪ್ರಥಮ ಮುದ್ರಣ : **2022**

ಪುಟಗಳು **: 115**

ಬೆಲೆ :


ಅಧ್ಯಯನ ಮಂಡಳಿ ಸದಸ್ಯರು :

ಡಾ.ಹನುಮಂತರಾಯಪ್ಪ, ಶ್ರೀ ರವೀಂದ್ರನಾಥ ಪುಣ್ಯಶೆಟ್ಟಿ

ಡಾ.ಎಚ್.ಕೆ.ಮಳಲಿಗೌಡ, ಡಾ. ಡಿ. ಸಿದ್ದರಾಜು

ಡಾ.ಶೀಲಾದೇವಿ ಎಸ್.ಮಳೀಮಠ

ಡಾ. ಟಿ.ಮಂಜುನಾಥ, ಎಚ್. ಉಮಾವತಿ.


ಪ್ರಕಾಶಕರು:

ಕುಲಪತಿಗಳು

ಬೆಂಗಳೂರು ನಗರ ವಿಶ್ವವಿದ್ಯಾಲಯ

ಬೆಂಗಳೂರು – 560001

# ಕನ್ನಡ ಭಾಷಾ ಪಠ್ಯ

## ಬಿ.ಎಸ್ಸಿ. (ಫ್ಯಾಡ್) (ಮೂರು ಮತ್ತು ನಾಲ್ಕನೇ ಸೆಮಿಸ್ಟರ್)

## ೨೦೨೧–೨೨

## ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪರಿವಿಡಿ

## ಬಿ.ಎಸ್ಸಿ. (ಫ್ಯಾಡ್)
## ನಾಲ್ಕನೇ ಸೆಮಿಸ್ಟರ್


**ದಯೆ : ಆಶಯ** ೬

೧. ಕರ್ಣರಾಗ –ಎಲ್. ಹನುಮಂತಯ್ಯ ೭

೨. ಕೆಟ್ಟ ಅಮ್ಮಂದಿರಿಲ್ಲ ಜಗದೊಳಗೆ
– ಎ.ಆರ್. ಮಣಿಕಾಂತ್ ೮

೩. ದಯೆ – ಮೊಗಳ್ಳಿ ಗಣೇಶ್ ೧೨

ಓದು ಪಠ್ಯ : ಮಗು ಕಲಿಸಿದ ಪಾಠ
– ತಿರುಮಲೆ ರಾಜಮ್ಮ (ಭಾರತಿ) ೨೩

**ರಾಷ್ಟ್ರೀಯತೆ : ಆಶಯ** ೨೭

೧. ಓ ನನ್ನ ದೇಶಬಾಂಧವರೇ
– ಡಾ. ಚಂದ್ರಶೇಖರ ಪಾಟೀಲ ೨೮

೨. ರಾಷ್ಟ್ರೀಯತೆ ಒಂದು ಪರಿಕಲ್ಪನೆ: ಕೆಲವು ಟಿಪ್ಪಣಿಗಳು
– ಡಾ. ಡಿ.ಆರ್. ನಾಗರಾಜ್ ೩೦

೩. ರಂಜನಿ – ಶಾಂತಾದೇವಿ ಮಾಳವಾಡ ೩೭

ಓದು ಪಠ್ಯ : ರಾಷ್ಟ್ರೀಯತೆ : ಒಂದು ಮರುಚಿಂತನೆ
– ಕೆ.ವಿ. ತಿರುಮಲೇಶ್ ೪೬

**ಅಗಲಿಕೆ : ಆಶಯ** **೫೩**

೧. ವಿರಹೋತ್ಸವ – ಹೇಮ ಪಟ್ಟಣಶೆಟ್ಟಿ ೫೪

೨. ಮೃಗ ಮತ್ತು ಸುಂದರಿ – ಪಿ. ಲಂಕೇಶ್ ೫೫

೩. ವಿಯೋಗ – ಕರೀಗೌಡ ಬೀಚನಹಳ್ಳಿ ೬೫

ಓದು ಪಠ್ಯ : ಮರಳಿ ಬದುಕಿಗೆ ಈ ಪಯಣ – ನೇಮಿಚಂದ್ರ ೭೩

**ಮಳೆ : ಆಶಯ** **೮೮**

೧. ಧಾರವಾಡದಲ್ಲಿ ಮಳೆಗಾಲ
– ಚನ್ನವೀರ ಕಣವಿ ೮೯

೨. ಮಳೆ ಬಂದರೆ
– ಭುವನೇಶ್ವರಿ ಹೆಗಡೆ ೯೨

೩. ಹೊರಗೂ ಮಳೆ ಒಳಗೂ ಮಳೆ
– ಚ.ಹ. ರಘುನಾಥ್ ೧೦೦

ಓದು ಪಠ್ಯ : ಮಳೆ ದೇವೇಂದ್ರ
– ಸಂಗ್ರಹ : ಎಚ್.ಎಲ್. ನಾಗೇಗೌಡ ೧೧೦

# 1. ದಯೆ

## ಆಶಯ

ದಯೆ ವಿವಿಧ ನೈತಿಕ, ಧಾರ್ಮಿಕ, ಸಾಮಾಜಿಕ ಮತ್ತು ಕಾನೂನಾತ್ಮಕ ಸಂದರ್ಭಗಳಲ್ಲಿ ಪರೋಪಕಾರ ಮತ್ತು ಕರುಣೆಯನ್ನು ಸೂಚಿಸುವ ವಿಶಾಲವಾದ ಒಂದು ಪದ. ಕರುಣಾಮಯಿ ದೇವರ ಪರಿಕಲ್ಪನೆ ಹಿಂದೂ ಧರ್ಮ, ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮವನ್ನು ಒಳಗೊಂಡಂತೆ ವಿವಿಧ ಧರ್ಮಗಳಲ್ಲಿ ಕಂಡು ಬರುತ್ತದೆ. ಧಾರ್ಮಿಕ ನಂಬಿಕೆಗಳ ಅಂಶವಾಗಿ ದಯೆಯ ಕ್ರಿಯೆಗಳನ್ನು ನೆರವೇರಿಸುವುದು, ಭಿಕ್ಷೆ ನೀಡುವುದು, ರೋಗಿಗಳ ಆರೈಕೆಯಂತಹ ಕ್ರಿಯೆಗಳ ಮೂಲಕವೂ ಒತ್ತಿ ಹೇಳಲಾಗುತ್ತದೆ. ಸಾಮಾಜಿಕ ಮತ್ತು ಕಾನೂನಾತ್ಮಕ ಸಂದರ್ಭದಲ್ಲಿ ಹಾಗೂ ದಯೆಯು ಅಧಿಕಾರದಲ್ಲಿರುವ ಕಡೆಯಿಂದ ಸಹಾನುಭೂತಿಯ ವರ್ತನೆ ಕಂಡು ಬರುತ್ತದೆ.

ದಯೆ ಎಂದರೆ ಕ್ಷಮಿಸುವ ಸಾಮರ್ಥ್ಯ. ಕರುಣಾಮಯಿ ವ್ಯಕ್ತಿಗೆ ಸೇಡು ಎಂಬ ಪದ ತಿಳಿದಿಲ್ಲ. ಕರುಣಾಮಯಿ ವ್ಯಕ್ತಿಯು ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ದಯೆ ಮತ್ತು ಸಹಾನುಭೂತಿಯಿಂದ ಇರಲು ಪ್ರಯತ್ನಿಸುತ್ತಾನೆ.

# ಕರ್ಣರಾಗ

**– ಎಲ್. ಹನುಮಂತಯ್ಯ**

ಹೆತ್ತ ಕಂದನನು ನಿಮ್ಮ ಮಡಿಲಿಗೆ ಹಾಕಿ
ದೂರದಲಿ ನಿಂತಿರುವೆ ಗಗನಮುಖಿಯಾಗಿ
ಒಂಬತ್ತು ತಿಂಗಳು ಹೊತ್ತ ನೋವನು ಮರೆತು
ಎತ್ತರಕೆ ಏರುವುದ ಬಯಸುತಿರುವೆ

ಅನಾಥ ಮಗುವನು ಸಾಕಬೇಕೇ ಎಂಬ
ಬೇಸರದ ಕಿರಣವೊಂದಿರಬಹುದು ಕರುಳಲ್ಲಿ
ಕುಂತಿ ಕಷ್ಟದಿ ಹಡೆದು ಲೋಕನಿಂದೆಗೆ ಬೆದರಿ
ಹೊಳೆಗೆ ತೇಲ್ಬಿಡುವುದು ಸುಲಭವೇನವ್ವ?

ಮೀನಬಲೆಯಲಿ ತಂದು ಅಚ್ಚರಿಯ ಅಲೆಸರಿಸಿ
ಜೀವ ಉಳಿಸಿದೆಯವ್ವ ನೀನು ತಾಯಿ
ನಿನ್ನ ತಾಯ್ತನದಲ್ಲಿ ಒಂದಿನಿತು ನನದಲ್ಲ
ನಿದ್ರೆಯಿಲ್ಲದ ರಾತ್ರಿ ಲೆಕ್ಕವಿಲ್ಲ

ಲೋಕದರಿವಿಗೆ ತರದೆ ಹಿರಿಮೆಗರಿ ತೂಗಲು
ತೊರೆದ ಕಂದನ ಶೌರ್ಯ ಇನ್ನು ಬಲಿಗೊಡೆನು
ಕೃಷ್ಣತಂತ್ರಕೆ ಮಣಿದು ಧರ್ಮದರ್ಪಕೆ ಕುಣಿದು
ಮಾತೃಪ್ರೇಮದ ಭಿಕ್ಷೆ ಬೇಡಲಾರೆ

ಪರಶುಪರ್ವದಲಿ ಶಾಪವಿತ್ತ ಘಳಿಗೆ
ಅಬ್ಬರಿಸಿ ಆ ಕ್ಷಣವೆ ಕೂಗಬೇಕೆಂದಿದ್ದೆ
ಅಮ್ಮನಿರುವಾ ಕಂದ ತಬ್ಬಲಿ ಅಲ್ಲೆಂದು
ರಾಜಋಷಿ ಗರ್ವವನು ಮುರಿಯಬೇಕೆಂದಿದ್ದೆ

ಸ್ತ್ರೀಕುಲದ ಹೆಮ್ಮೆಗೆ ಕರುಳಕುಡಿ ಒಲುಮೆಗೆ
ನಿಜದ ಹಾಡನು ಒಮ್ಮೆ ಹಾಡಬೇಕೆಂದಿರುವೆ
ಗಂಟಲನು ಸುತ್ತಿರುವ ಬೆರಳುಗಳ ಕತ್ತರಿಸಿ
ದನಿ ಎತ್ತಿ ಹಾಡುವೆನು ಕರ್ಣರಾಗ

# ಕೆಟ್ಟ ಅಮ್ಮಂದಿರಿಲ್ಲ ಜಗದೊಳಗೆ

**– ಎ.ಆರ್. ಮಣಿಕಾಂತ್**

ಕಾವೇರಮ್ಮನ ಬಾಳಿನಲ್ಲಿ ಕಡೆಗೆ ಒಳ್ಳೆಯ ಕಾಲ ಬಂದೇ ಬಂತು. ಆಕೆಯ ನಾಲ್ವರು ಮಕ್ಕಳೂ ಸರಕಾರಿ ನೌಕರಿಗೆ ಸೇರಿಕೊಂಡರು ಆಗ ಮಾತ್ರ ಕಾವೇರಮ್ಮ ತಾ ಐವತ್ತೈದರ ಹೆಂಗಸು ಎಂಬುದನ್ನೂ ಮರೆತು ಕುಣಿದಾಡಿಬಿಟ್ಟಳು

ಗಿರೀಗೌಡ ತೀರಿಕೊಂಡ.

ನಾಲ್ಕು ದಿನಗಳ ಕಾಲ ಹೊಟ್ಟೆನೋವು ಎಂದು ಹೊರಳಾಡಿ ಕಡೆಗೊಮ್ಮೆ ಮಂಡ್ಯದ ನರ್ಸಿಂಗ್ ಹೋಂಗೆ ದಾಖಲಾದ ಗಿರೀ ಗೌಡ ವಾರದ ನಂತರ ಆಕಸ್ಮಿಕವಾಗಿ ತೀರಿಕೊಂಡದ್ದು ಕಾವೇ ರಮ್ಮನ ಪಾಲಿಗೆ ಬಹುದೊಡ್ಡ ಶಾಕ್. ಹೇಗೆ ನೋಡಿದರೂ ಅವರದು ಮಧುರ ದಾಂಪತ್ಯವಾಗಿತ್ತು ಅದರ ಕುರುಹಾಗಿ ನಾಲ್ಕು ಮಂದಿ ಮಕ್ಕಳಿದ್ದರು. ಮದುವೆಯ ಹತ್ತನೇ ವಾರ್ಷಿಕೋತ್ಸವ ಮುಗಿದ ಕೆಲವೇ ತಿಂಗಳಿಗೆ, ಗಿರೀಗೌಡ ದಿಢೀರನೆ ತೀರಿ ಕೊಂಡಿದ್ದ.

ಮನೇಲಿ ನೋಡಿದರೆ ನಾಲ್ಕು ಮಕ್ಕಳಿದ್ದಾರೆ. ದುಡಿಯುವ ಗಂಡಸೇ ಇಲ್ಲ. ಹೀಗಿರುವಾಗ ಬದುಕುವುದು ಹೇಗೆ? ಈ ಯೋಚನೆಯಲ್ಲಿಯೇ ಕಾವೇರಮ್ಮ ಇದ್ದಾಗ ಕೆಲವರು ಹೇಳಿದರು, "ನೋಡಮ್ಮಾ ಒಂಟಿ ಹೆಂಗಸು ನೆಮ್ಮದಿಯಿಂದ ಬದುಕುವುದು ಕಷ್ಟ ಇನ್ನೊಂದು ಮದುವೆ ಆಗು. ಇಲ್ಲಾಂದ್ರೆ ಕೂಡಿಕೆ ಮಾಡಿಕೊ...'

ಉಹುಂ, ಈ ಮಾತಿಗೆ ಕಾವೇರಮ್ಮ ಒಪ್ಪಲಿಲ್ಲ, ಏನಾದರೂ

ಸರಿ, ಹೀಗೇ ಒಂಟಿಯಾಗಿಯೇ ಬದುಕುತ್ತೇನೆ ಎಂದು ನಿರ್ಧರಿಸಿದಳು. ಹೇಗಿದ್ದರೂ, ಇರುವ ನಾಲ್ವರೂ ಗಂಡು ಮಕ್ಕಳೇ ತಾನೆ? ಅವರನ್ನು ಕಷ್ಟಪಟ್ಟು ಓದಿಸಿದರೆ ಸಾಕು ಎಂದುಕೊಂಡಳು. ನಂತರ ಆಕೆ ಹಿಂದಿರುಗಿ ನೋಡಲಿಲ್ಲ ಮಕ್ಕಳನ್ನು ಹೇಗಾದರೂ ಮುಂದೆ ತರಬೇಕು ಎಂಬ ಹಂಬಲದಿಂದ ಅವರಿವರ ಮನೆಯಲ್ಲಿ ಪಾತ್ರೆ ತೊಳೆದು, ಕೂಲಿ ಮಾಡಿ, ಒಂದೆರಡು ಸಂದರ್ಭದಲ್ಲಿ ಭಿಕ್ಷೆ ಬೇಡಿ ಓದಿಸಿದಳು. ಮಕ್ಕಳು ಒಂದೊಂದು ತರಗತಿಯಲ್ಲೂ ಅತ್ಯುತ್ತಮ ಅಂಕ ಪಡೆದು ಉತ್ತೀರ್ಣರಾದ ಸಂದರ್ಭದಲ್ಲಿ ಕಾವೇರಮ್ಮನ ಮೊಗದಲ್ಲಿ ಖುಷಿಯ ಹೂ ಅರಳುತ್ತಿತ್ತು.

ಕಡೆಗೂ ಕಾವೇರಮ್ಮನ ಬಾಳಿನಲ್ಲಿ ಒಳ್ಳೆಯ ಕಾಲ ಬಂದೇ ಬಂತು. ಆಕೆಯ ನಾಲ್ವರು ಮಕ್ಕಳೂ ಸರಕಾರಿ ನೌಕರಿಗೆ ಸೇರಿಕೊಂಡರು. ಆಗ ಮಾತ್ರ ಕಾವೇರಮ್ಮ ತಾನು ಐವತ್ತೈದರ ಹೆಂಗಸು ಎಂಬುದನ್ನೂ ಮರೆತು ಹದಿನೈದರ ಹುಡುಗಿಯಂತೆ ಕುಣಿದಾಡಿಬಿಟ್ಟಳು. ಮೊದಲು ತಾನೇ ಮುಂದಾಗಿ ನಿಂತು ದೊಡ್ಡ ಮಗನಿಗೆ ಮದುವೆ ಮಾಡಿದಳು. ಆ ಸಂದರ್ಭದಲ್ಲಿ ಗಂಡನ ನೆನಪಾಗಿ ಕಣ್ಣೀರಿಟ್ಟಳು. ಹೇಗಿದ್ದರೂ ಮಕ್ಕಳೆಲ್ಲ ಸರಕಾರಿ ನೌಕರಿಯಲ್ಲಿದ್ದರು ಎಲ್ಲರಿಗೂ ಶ್ರೀಮಂತ ಕುಟುಂಬದ ಕನ್ಯೆಯರೇ ದೊರಕಿದರು. ಕಾವೇರಮ್ಮನಿಗೆ ಹಿಗ್ಗೋ ಹಿಗ್ಗು ಅಬ್ಬಾ, ಕಡೆಗೂ ದೇವರು ಕರೆದ. ಬದುಕಿನ ಕಡೆಗಾಲದಲ್ಲಿ ಒಬ್ಬೊಬ್ಬ ಮಗನ ಮನೆಯಲ್ಲೂ ಒಂದಷ್ಟು ದಿನವಿದ್ದರೆ ಆಯ್ತು ಎಂದುಕೊಂಡಳು.

ಅದೊಮ್ಮೆ ಯುಗಾದಿಗೆಂದು ಊರಿಗೆ ಬಂದ ಮಕ್ಕಳ ಮುಂದೆ ಈ ವಿಷಯ ತೆಗೆದು "ನೋಡ್ರಪ್ಪಾ ನನಗೂ ವಯಸ್ಸಾಯ್ತು ಕಣ್ಣೂ ಸರಿಯಾಗಿ ಕಾಣಿಸ್ತಾ ಇಲ್ಲ ಕಡೆಗಾಲದಲ್ಲಿ ನಿಮ್ಮ ಜತೆ ಇರಬೇಕು ಅಂತ ಆಸೆ' ಎಂದಳು. ಈ ಮಾತು ಕೇಳಿದ್ದೇ ಹಾವು ತುಳಿದಂತೆ ಹೌಹಾರಿದ ನಾಲ್ವರು ಸೊಸೆಯರೂ ಒಂದೆಡೆ ಸೇರಿ ಗುಸುಗುಸು ಎಂದುಕೊಂಡರು. ಹಿಂದೆಯೇ ಗಂಡಂದಿರನ್ನೂ ಹತ್ತಿರ ಕರೆದು ಅವರಿಗೂ ಏನೋ ಹೇಳಿದರು. ನಂತರ ಕಾವೇರಮ್ಮನ ಹಿರೇಮಗ ಒಮ್ಮೆ ಕೆಮ್ಮಿ ಗಂಟಲು ಸರಿ ಮಾಡಿಕೊಂಡು ಹೀಗೆಂದ:

"ಅಮ್ಮಾ ನೀನು ಹೇಳಿದ್ದೇನೋ ಸರಿ, ನಿನ್ನನ್ನು ಕರೆದೊಯ್ಯಲು ನಮಗೂ ಇಷ್ಟ ಆದ್ರೆ ನಾವಿರೋದು ಬೆಂಗಳೂರು! ಅಲ್ಲಿನ ಕಷ್ಟಗಳು ಒಂದಾ, ಎರಡಾ? ನಮಗೇ ಸುಸ್ತಾಗಿ ಹೋಗುತ್ತೆ ಅಂಥ ಕಡೆಗೆ ನೀನು ಬಂದು ಹೇಗಿದ್ದೀಯ? ಬೇಡ. ಇಲ್ಲೇ ಆರಾಮಾಗಿದೀಯ. ಇಲ್ಲೇ ಇರು. ಬೇಕಾದ್ರೆ ನಿಂಗೆ ತಿಂಗಳು ತಿಂಗಳೂ ಒಂದಿಷ್ಟು ದುಡ್ಡು ಕೊಡ್ತೀವಂತೆ...' ಇಷ್ಟು ಹೇಳಿದವನು ಸುಮ್ಮನಾದ, ಮರುದಿನವೇ ಮಕ್ಕಳು, ಅವರ ಹೆಂಡತಿಯರೊಂದಿಗೆ ಹೋಗಿಯೇಬಿಟ್ಟರು.

ವಿಪರೀತ ದುಡಿದಿದ್ದರ ಪರಿಣಾಮವೇ ಇರಬೇಕು, ಒಂದೆರಡು ವರ್ಷದ ನಂತರ ಕಾವೇರಮ್ಮನಿಗೆ ಸಣ್ಣ ಪ್ರಮಾಣದಲ್ಲಿ ಎದೆನೋವು ಕಾಣಿಸಿಕೊಂಡಿತು. ಸಮೀಪದ ಆಸ್ಪತ್ರೆಯ ವೈದ್ಯರು– 'ಇಲ್ಲಿ ವಾಸಿಯಾಗಲ್ಲ ಬೆಂಗಳೂರಿಗೆ ಹೋಗಮ್ಮಾ' ಅಂದರು. ಈ ಕಾವೇರಮ್ಮ ಒಂದು ಪುಟ್ಟ ಬ್ಯಾಗ್ನೊಂದಿಗೆ ಬೆಂಗಳೂರಿಗೆ ಬಂದೇ ಬಿಟ್ಟಳು. ಕಾಯಿಲೆ ನಿಜಕ್ಕೂ ಅಪಾಯದ ಹಂತ ತಲುಪಿತ್ತು ಹಿರಿಮಗ ಜಯದೇವ

ಆಸ್ಪತ್ರೆಗೆ ಕರೆದೊಯ್ದು ಅಡ್ಮಿಟ್ ಮಾಡಿದಾಗ ಅಲ್ಲಿದ್ದ ವೈದ್ಯ ಹೇಳಿದ್ದು ಒಂದೇ ಮಾತು: 'ಹೃದಯದಲ್ಲಿ ರಂಧ್ರವಾಗಿದೆ. ನಾಳೆಯೇ ಆಪರೇಷನ್ ಮಾಡಬೇಕು. ಎರಡೂವರೆ ಲಕ್ಷ ಆಗುತ್ತೆ ಬೇಗ ಹಣ ಹೊಂದಿಸಿ'.

"ಸರಿ ಮೇಡಂ, ಒಂದರ್ಧ ಗಂಟೇಲಿ ಬರೀನಿ' ಎಂದ ಆಕೆಯ ಮಗರಾಯ ಆಸ್ಪತ್ರೆಯಿಂದ ಹೊರಗೆ ಬಂದ ಒಂದು ಗಂಟೆ ಕಳೆಯಿತು. ಎರಡಾಯಿತು. ಕಡೆಗೆ, ಇಡೀ ರಾತ್ರಿ ಕಳೆದರೂ ಆ ಪುಣ್ಯಾತ್ಮನ ಸುಳಿವಿಲ್ಲ ಓಹ್, ಇನ್ನೂ ತಡ ಮಾಡಿದರೆ, ಈ ವೃದ್ಧೆಯ ಜೀವ ಉಳಿಯುವುದೇ ಕಷ್ಟ ಅನ್ನಿಸಿದಾಗ ಆ ವೈದ್ಯೆ ತಾನೇ ಮಾನವೀಯ ನೆಲೆಯಲ್ಲಿ ಯೋಚಿಸಿ ಚಿಕಿತ್ಸೆಯ ವ್ಯವಸ್ಥೆ ಮಾಡಿದಳು. ಚಿಕಿತ್ಸೆ ಎಲ್ಲಾ ಮುಗಿಯಿತು. ವೈದ್ಯೆಯೇ ಹಣ ಕಟ್ಟಿದ್ದೂ ಆಯಿತು. ಈ ಕಾವೇರಮ್ಮನನ್ನು ಆಪರೇಷನ್ ಥಿಯೇಟರಿನಿಂದ ಸ್ಪೆಷಲ್ ವಾರ್ಡ್ಗೆ ಶಿಫ್ಟ್ ಮಾಡಿದ ನಂತರ, ಹಿಂದಿನ ದಿನದ ರಾತ್ರಿ ತಪ್ಪಿಸಿಕೊಂಡು ಹೋಗಿದ್ದ ಆ ಭೂಪತಿ ರಂಗ ಬಂದೇ ಬಂದ. ಜತೆಯಲ್ಲಿ ಅವನ ಸೋದರರೂ ಇದ್ದರು.

ವೈದ್ಯೆಗೆ ರೇಗಿತು: 'ಅಲ್ಲಪ್ಪಾ ನಿಂಗೇನು ಮನುಷ್ಯತ್ವ ಇಲ್ಲವಾ? ಜೀವದ ಬೆಲೆ ಗೊತ್ತಿಲ್ಲವಾ? ಆ ಮುದುಕೀನ ಹಾಗೇ ಬಿಟ್ಟು ಹೋಗಿಬಿಟ್ಟೆಯಲ್ಲಿ ನಾನು ನೋಡದೇ ಹೋಗಿದ್ರೆ ಗತಿ ಏನಾಗ್ತಾ ಇತ್ತು ಗೊತ್ತಾ? ಅದ್ಸರಿ, ಇಡೀ ರಾತ್ರಿ ನೀನು ಎಲ್ಲಿಗೆ ಹೋಗಿದ್ದೆ. ಆಕೆ ನಿಮ್ಮ ತಾಯಿ ಎಂಬುದನ್ನೂ ಮರೆತು ಅದೇಕೆ ಮತ್ತು ಹೇಗೆ ಉಳಿದಿದ್ದೆ' ಎಂದು ದಬಾಯಿಸಿದಳು.

ಅವಳ ಮಾತನ್ನೆಲ್ಲ ಕೇಳಿದ ನಂತರ, ಅಮ್ಮನಿಗೆ ಆಪರೇಷನ್ ಆಗಿದೆ ಮತ್ತು ಈ ವೈದ್ಯೆಯೇ ಅಷ್ಟೂ ಹಣ ಕೊಟ್ಟಿದ್ದಾಳೆ ಎಂಬುದು ಹಿರಿಯ ಮಗನಿಗೆ ಖಚಿತವಾಯಿತು. ಆತ ತಲೆತಗ್ಗಿಸಿ'ಕ್ಷಮಿಸಿ ಮೇಡಂ, ಎರಡು ಲಕ್ಷ ರೂ.ಗಳನ್ನು ಯಾರು ಕೊಡಬೇಕು ಎಂಬ ವಿಷಯವಾಗಿ ನಾವು ಅಣ್ಣ ತಮ್ಮಂದಿರಲ್ಲಿ ಜಗಳ ಶುರುವಾಯ್ತು ಆದಕ್ಕೇ ಲೇಟಾಗಿಬಿಡ್ತು' ಅಂದ. ಈ ಮಾತು ಕೇಳಿ ಇನ್ನಷ್ಟು ರೇಗಿದ ವೈದ್ಯೆ– 'ಥೂ, ನಿಮ್ಮದೂ ಒಂದು ಬದುಕಾ? ಆಕೆ ನಿಮ್ಮ ತಾಯಿ ತಾನೆ? ನೀವು ಹಣ ಕೊಡದೆ; ಆಕೇನ ನೀವು ಜತೆಗಿಟ್ಟುಕೊಳ್ಳದೆ ಮತ್ಯಾರು ಇಟ್ಕೋಬೇಕು?' ಎಂದಳು.

ಅಪರಿಚಿತ ವೈದ್ಯೆ ಹೀಗೆ ಎಗರಾಡಿದ್ದು ನೋಡಿ ಕಿರಿಯವನಿಗೆ ರೇಗಿತು.

ಆತ– 'ರೀ ಮೇಡಂ, ನಮ್ಮ ಕಷ್ಟ ನಮಗೆ, ನೀವು ಬುದ್ದಿ ಹೇಳೋಕೆ ನಿಂತಿದ್ದೀರ. ದುಡ್ಡು ಕೊಡ್ತಾ ಇದೀವಿ, ತಗೊಳ್ಳಿ, ನಮಗೆ ನಾಲ್ವರಿಗೂ ಹತ್ತು ಮಂದಿಗೆ ಹಂಚುವಷ್ಟು ಕಷ್ಟಗಳಿವೆ. ಆ ಮುದುಕೀನ ಬೇಕಿದ್ರೆ ನೀವೇ ಕರ್ಕೊಂಡು ಹೋಗಿ' ಅಂದೇಬಿಟ್ಟ

ಅವನ ಮಾತು ಮುಗಿದ ಎರಡೇ ನಿಮಿಷಕ್ಕೆ ಆ ಬದಿಯ ಮಂಚದಿಂದ 'ಹೋ...' ಎಂಬ ಸದ್ದಾಯಿತು. ಎಲ್ಲರೂ ಬೆಚ್ಚಿಬಿದ್ದು ನೋಡುತ್ತಾರೆ– ಕಾವೇರಮ್ಮ ಕಣ್ಣು ತೆರೆದಿದ್ದಳು. ಆಕೆ ಬಿಕ್ಕಳಿಸುತ್ತಿದ್ದಳು. ವೈದ್ಯೆಯೆಡೆಗೆ ದೀನಳಾಗಿ ನೋಡುತ್ತಿದ್ದಳು. ಈ ನಾಲ್ವರೂ ಮಕ್ಕಳು ಆಕೆಯನ್ನು ಬೆರಗಾಗಿ ನೋಡುತ್ತಿದ್ದಾಗಲೇ–ಒಮ್ಮೆ ಕೈ ಮುಗಿದು, 'ಬನ್ನಿ' ಎಂದು ವೈದ್ಯೆಗೆ ಸಂಜ್ಞೆ ಮಾಡಿದಳು. ಈಕೆ ದಡಬಡಿಸಿ ಹೋದರೆ, ತನ್ನ ಬೆವೆತುಹೋದ, ಒರಟು ಒರಟಾಗಿದ್ದ ಕೈಗಳಿಂದ ಆಕೆಯ ಕೈ ಹಿಡಿದು ಹೇಳಿದಳು: 'ನೀನು ಯಾವ ಜನ್ಮದಲ್ಲಿ ನನಗೆ ತಾಯಿಯಾಗಿದ್ದ ಮಗಳೇ? ಕಡೆಗೂ ನನ್ನನ್ನು ಬದುಕಿಸಿಬಿಟ್ಟೆ ನಿಂಗೆ ನಮಸ್ಕಾರ ಕಣವ್ವಾ. ಈ ನಾಲ್ಕೂ ಮಂದಿ ಮಕ್ಕಳನ್ನು ಸಾಕಲು, ಓದಿಸಲು, ಕೆಲಸಕ್ಕೆ ಸೇರಿಸಲು, ನಾನು ಭಿಕ್ಷೆ ಬೇಡಿದೆ. ಕಂಡವರ ಮುಂದೆ ಕೈ ಜೋಡಿಸಿದೆ. ಶ್ರೀಮಂತರ ಮನೇಲಿ ಪಾತ್ರೆ ತೊಳೆದೆ. ನಾನು ನೀರು ಕುಡಿದು ಮಕ್ಕಳಿಗೆ ಅನ್ನ ಕೊಟ್ಟೆ. ಆದರೆ ಇವತ್ತು ಮಕ್ಕಳು ನನಗೆ ಸರಿಯಾದ ಬಹುಮಾನ ಕೊಟ್ರು. ನಾನು ಬದುಕಬಾರ್ದು ಕಣಮ್ಮಾ...'

ಇಷ್ಟು ಹೇಳುವ ಹೊತ್ತಿಗೇ ಆಕೆ ಭಾವುಕಳಾದಳು. ಉಬ್ಬಸ ಶುರುವಾಯಿತು. ಈ ವೈದ್ಯ ಗಾಬರಿಯಾಗಿ ನರ್ಸ್ ಎಂದು ಕೂಗುವ ವೇಳೆಗೆ ಕಾವೇರಮ್ಮ ಚೇತರಿಸಿಕೊಂಡು ಹೀಗೆಂದಳು: 'ನಾನು ಬದುಕೋದಿಲ್ಲ ಡಾಕ್ಟ್ರೇ ಸತ್ತು ಹೋಗ್ತಿನಿ. ನನ್ನ ಹೆಣಾನ ಯಾವುದಾದ್ರೂ ಆಸ್ಪತ್ರೆಗೆ ಮಾರಿಬಿಡಿ. ಅದರಿಂದ ದುಡ್ಡು ಅಂತೇನಾದ್ರೂ ಬಂದ್ರೆ ಅದನ್ನ ನನ್ನ ನಾಲ್ಕೂ ಮಕ್ಕಳಿಗೂ ಸಮನಾಗಿ ಹಂಚಿಬಿಡಿ, ಅವರು ಸುಖವಾಗಿರಲಿ...'

ಇಷ್ಟು ಹೇಳಿದ ಮರುಕ್ಷಣವೇ ಕಾವೇರಮ್ಮನ ಉಸಿರು ನಿಂತು ಹೋಯಿತು...

ಹೌದು. ಯಾರೂ, ಯಾವತ್ತೂ ಅಮ್ಮಂದಿರನ್ನು ನೋಯಿಸಬೇಡಿ ಎಂದು ಹೇಳುವ ಮೊದಲು ಈ ಕಥೆ ಹೇಳಲೇಬೇಕು ಅನ್ನಿಸಿತು.

# ದಯೆ

**– ಮೊಗಳ್ಳಿ ಗಣೇಶ್**

ಗವ್‌ಗತ್ತಲೆಯಲ್ಲಿ ತಣ್ಣಗೆ ಗಾಳಿ ಬೀಸುತ್ತಿತ್ತು. ಕೊಟ್ಟಿಗೆಯ ಆ ಮೂಲೆಯಲ್ಲಿ ಕುರಿಗಳೆರಡು ಮೆಲಕು ಹಾಕುತ್ತ ಕೆಡೆದುಕೊಂಡಿದ್ದವು. ಅತ್ತೆ ಹಜಾರದಲ್ಲಿ ಚಾಪೆಯ ಅಂಚಿಗೆ ಬಟ್ಟೆ ಹೊಲೆಯುತ್ತಿದ್ದಳು. ಅಪ್ಪ ಯಾವುದೊ ವ್ಯವಹಾರಕ್ಕಾಗಿ ರೆಹಮಾನ್ ಖಾನರ ಬಳಿ ಹೋಗಿದ್ದವನು ಇನ್ನೂ ಹಿಂತಿರುಗಿ ಬಂದಿರಲಿಲ್ಲ. ಮಲಗುವ ಮೊದಲು ತಾತ ಅನಾದಿ ಪುರಾಣಗಳನ್ನು ಯಾರ ಜೊತೆಯಾದರೂ ಹಂಚಿಕೊಳ್ಳದಿದ್ದರೆ ಆತನಿಗೆ ನಿದ್ದೆಯೇ ಬರುತ್ತಿರಲಿಲ್ಲ. ಯಾವತ್ತಿನ ನಿಷ್ಠೆಯಲ್ಲಿ ಮನೆಯವರೆಲ್ಲ ಉಂಡು ಎಂಜಲಾದ ಪಾತ್ರೆಗಳನ್ನು ಚಿಕ್ಕಮ್ಮ ಬೂದಿ ತಿಕ್ಕಿ ಬೆಳಗುತಿದ್ದಳು. ಚಿಕ್ಕಪ್ಪ ಅವಳೊಡನೆ ಬೇಗ ಮಲಗಲು ಕಾತರಿಸುತ್ತಾ 'ತೊಳೆದಾಯ್ತನಮ್ಮಿ' ಎಂದು ಕೂಗುತ್ತಿದ್ದ. ಕುರಿಗಳಿಗೆ ಮತ್ತೊಮ್ಮೆ ಉರುಳಿ ತಿನ್ನಿಸಲೇ ಎಂಬ ಒತ್ತಡ ಉಂಟಾದರೂ ಕರಿಯ ತಡೆದುಕೊಂಡ. ಅವನ ಅಜ್ಜಿ ಮಡಕೆ ಗುಡಾಣಗಳ ಸಂದಿಯಲ್ಲಿ ಪುರಾತನರೇ ಬಳಸಿ ಬಿಟ್ಟುಹೋಗಿರುವಂತಹ ಚಾಪೆಯ ಮೇಲೆ ಮಲಗುವುದಿತ್ತು. ಅಂತಲ್ಲಿ ಹೋಗಿ ಮಡಕೆಗಳ ಇಳಿಸಿ ಹುರುಳಿ ತಂದು ಕುರಿಗೆ ತಿನಿಸುವುದು ಕಷ್ಟವಾಗುತ್ತಿತ್ತು. ಕರಿಯ ಕೊಡುವ ಕುರುಕು ಕಾಳುಗಳಿಗೆ ಕುರಿಗಳು ಪತರುಗುಟ್ಟಿ ಗುಂಟ ಕಿತ್ತುಕೊಂಡು ಬರುವಂತೆ ಆತ ಕಂಡಾಗಲೆಲ್ಲ ಅವು ಸದ್ದು ಮಾಡಿ ಕರೆಯುತ್ತಿದ್ದವು. ಶಾಲೆಯಿಂದ ಬಂದ ಕೂಡಲೆ ಅವುಗಳನ್ನು ಮುಟ್ಟಿ ಮುದ್ದಾಡದಿದ್ದರೆ ಏನನ್ನೂ ಕಳೆದುಕೊಂಡಂತಾಗುತ್ತಿತ್ತು. ರಜಾದಿನಗಳಲ್ಲಿ ಕುರಿಗಳನ್ನು ಹೊಲ ಮಾಳಕ್ಕೆ ಅಟ್ಟಿಕೊಂಡು ಹೋಗಿ ತನುವಾಗಿ ಮೇಯಿಸಿ ಕುಣಿದು ಕುಪ್ಪಳಿಸಿ ಗೋಧೂಳಿ ಹೊತ್ತಿಗೆ ಮನೆಗೆ ಬರುವುದೆಂದರೆ ಕರಿಯನಿಗೆ ಮಹದಾನಂದವಾಗುತ್ತಿತ್ತು. ಆ ಕುರಿಗಳೂ ಆ ಕರಿಯನಿಗೆ ಪ್ರಾಣಕ್ಕೆ ಸಮನಾಗಿ ಹೊಂದಿಕೊಂಡಿದ್ದವು. ಆತನ ಹಿಂದೆಯೆ ಅವು ಸುತ್ತಾಡಿ ಪಕ್ಕವೆ ಕೆಡೆದು ಏನೋ ಹೇಳುವಂತೆ ಸದ್ದು ಮಾಡಿ ಮಲಕು ಹಾಕುತ್ತ ತಮ್ಮ ಗೋಲಿಕಣ್ಣಗಳ ತುಂಬ ಅವನನ್ನೆ ತುಂಬಿಕೊಂಡು ವಿನೀತವಾಗಿ ತಲೆ ಆಡಿಸಿ ಆಗೀಗ ತುಂಟತನದಲ್ಲಿ ಜಿಗಿದಾಡಿ ಮಂಡಿಗಳ ಸಂದಿಗೆ ತಲೆ ಸಿಕ್ಕಿಸಿ ಕುಶಾಲಿನಿಂದ ಗುದ್ದಿ ನೋವಾಯಿತಾ ಎಂಬಂತೆ ಮತ್ತೆ ಮುಖ ನೋಡುತ್ತಿದ್ದವು.

ಕರಿಯ ಕುರಿಗಳ ಸಮೀಪವೆ ಮಲಗುತ್ತಿದ್ದುದು. ಇಡೀ ಕೇರಿ ಯಾವುದೊ ಕಾಲದ ಪಳೆಯುಳಿಕೆಯಂತೆ ಬಿದ್ದಿತ್ತು. ಆಕಾಶದ ನಕ್ಷತ್ರಗಳು ಕಾಲಗರ್ಭದಲ್ಲಿ ಅನಂತವಾಗಿ ಸುತ್ತುತ್ತಿದ್ದವು.

ಆ ಅನಾದಿ ಕಾಲದ ಊರು ಈ ಜನರನ್ನೂ ಅಂತಹ ಎಷ್ಟೋ ಕುರಿಗಳನ್ನೂ ಕಂಡಿದೆ. ಕರಿಯನ ಅಪ್ಪನಾದ ಶೇಷಪ್ಪನಿಗೆ ಒಂದು ಕಾಲಕ್ಕೆ ಟಗರುಗಳ ಗುದ್ದಾಟವೆಂದರೆ ದೊಡ್ಡ ಜೂಜಾಗಿತ್ತು. ಬೀರವ್ವ ಮಡದಿಯಾಗಿ ಬಂದ ಮೇಲೆ ಆ ಹುಚ್ಚು ಬದಲಾಗಿತ್ತು. ಹೋಟೆಲು ಇಟ್ಟುಕೊಂಡು ಆರಕ್ಕೇರದ ಮೂರಕ್ಕಿಳಿಯದೆ ಹಾಗೆ ದಿನೇ ದಿನೇ ಜೀವನದ ಹತ್ತಾರು ಆಸೆಗಳು ಕೈಗೂಡದೆ, ತಮ್ಮನ ಜೊತೆ ಪೈಪೋಟಿ ಮಾಡಲಾಗದೆ, ಕಲ್ಪನೆಯಲ್ಲೇ ಯಾರಾರ ಮೇಲೂ ಯಾವ್ಯಾವುದೋ ವಿಷಯಕ್ಕೆ ಜಂಗಿ ಕುಸ್ತಿಗಿಳಿದು ಒಂದೇ ಬಾರಿಗೆ ಹತ್ತಾಳಿಗೆ ಹೊಡೆದಂತೆ ಭ್ರಮಿಸಿ ಹೆಂಡತಿಯ ಮೇಲೆ ರೇಗಾಡುತ್ತಿದ್ದ. ಮನೆಯಲ್ಲಿದ್ದ ಆ ಕುರಿಗಳು ಅವನ ಜಂಜಡವನ್ನು ಕಂಡು ಏನನ್ನೂ ಹೇಳಲಾಗದೆ ಹೆಂಗಸರ ಕಡೆ ಸುಮ್ಮನೆ ಅಸಹಾಯಕವಾಗಿ ನೋಡುತ್ತಿದ್ದವು. ಇದ್ದಕ್ಕಿದ್ದಂತೆ ಯಾವುದಾವುದೊ ವೈಮನಸ್ಸಿಗೆ ಮನೆಯವರ ನಡುವೆಯೆ ಒಳಜಗಳಗಳು ಉಂಟಾಗಿ ಅಪ್ಪನೂ ಚಿಕ್ಕಪ್ಪನೂ ಬಡಿದಾಡಿ ಮನೆಯೇ ರಣರಂಗವಾಗಿ ಒಬ್ಬೊಬ್ಬರೂ ಅನಾಥರಂತೆ ದಿಕ್ಕೆಟ್ಟು ವಾರಗಟ್ಟಲೆ ಮನೆಯ ಸ್ಮಶಾನ ಮೌನದಲ್ಲಿ ಹೆಪ್ಪುಗಟ್ಟಿ ಮತ್ತೆ ಎಲ್ಲವೂ ಹದ್ದುಬಸ್ತಿಗೆ ಬರುವಷ್ಟರಲ್ಲಿ ಕರಿಯನ ಮನವು ನಲುಗಿ ಹೋಗುತಿತ್ತು. ಅಂತಹ ಸ್ಥಿತಿಯಲ್ಲಿ ಕರಿಯನಿಗೆ ಆ ಕುರಿಗಳೇ ಜಗತ್ತಿನ ದಿವ್ಯ ನೆಮ್ಮದಿಯ ಪ್ರತೀಕದಂತೆ ಕಾಣುತ್ತಿದ್ದವು. ಎಷ್ಟೋ ಬಾರಿ ಅವುಗಳ ಜೊತೆ ಮೂಕವಾಗಿ ಆತ ಮಾತನಾಡುವುದಿತ್ತು. ಆ ಕುರಿಗಳನ್ನು ಬೀರವ್ವ ಮರಿಯಾಗಿದ್ದಾಗಲೆ ತಂದೆ ಮನೆಯಿಂದ ಹಿಡಿದು ತಂದಿದ್ದಾಗ ಕರಿಯನೂ ಒಂದು ಕುರಿಮರಿಯಾಗಿಯೆ ಅವುಗಳ ಜೊತೆ ಸೇರಿಕೊಂಡು ಬಿಟ್ಟಿದ್ದ. ಶೇಷಪ್ಪ ಹೆಚ್ಚು ಕಡಿಮೆ ಕರಿಯನನ್ನು ಉಪಯೋಗಕ್ಕೆ ಬಾರದ ಒಂದು ಕುರಿಮರಿ ಎಂದೇ ತಿಳಿದಿದ್ದ. ಮರದ ಕೆಳಗೆ ಮಧ್ಯಾಹ್ನದ ಉರಿಬಿಸಿಲ ತಾಪವಾರಿಸಿ ಕೊಳ್ಳುತ್ತ, ಕುರಿಗಳ ಜೊತೆ ಕುಳಿತು ಚಾಚಿಕೊಂಡಿರುವ ಬೆಟ್ಟಗುಡ್ಡಗಳನ್ನು ನೋಡುತ್ತಿದ್ದರೆ ತಾನು ದೇವರ ಜೊತೆಯಲ್ಲಿ ಕುಳಿತಿದ್ದೇನೆ ಎಂಬ ದಿವ್ಯಾಭಿಮಾನವು ಅದೇಗೊ ಕರಿಯನಿಗೆ ಬಂದುಬಿಡುತ್ತಿತ್ತು.

ಕರಿಯ ಎಂದೂ ಕುರಿಗಳಿಗೆ ಒಂದು ಏಟನ್ನೂ ಹೊಡೆದವನಲ್ಲ, ಕುರಿಗಳು

ದೇವರಿಗೆ ಸಮ ಎಂದೇ ಅವನ ಗಾಢ ವಿಶ್ವಾಸ. ಅದೊಂದು ದಿನ ಶಾಲೆಗೆ ಮೈಸೂರಿನಿಂದ ಕ್ರೈಸ್ತ ಪಾದ್ರಿಯೊಬ್ಬರು ಬಂದಿದ್ದರು. ಎತ್ತರದ ನಿಲುವಿನ ದಿವ್ಯ ಕಳೆಯ ಕೆಂಪನೆಯ ಆ ದುಂಡು ಮುಖದ ಪಾದ್ರಿಯು ಕರುಣಾಮಯಿಯಾಗಿ ಅನಾಥರ ಬಗ್ಗೆ ದೇವರ ಕಳಕಳಿಯನ್ನು ಬೋಧಿಸಿದ್ದರು. ದೇವರ ಸೃಷ್ಟಿಯಲ್ಲಿ ಎಲ್ಲವಕ್ಕೂ ಸಮಾನ ಸ್ವಾತಂತ್ರ್ಯವಿದೆ. ಪ್ರತಿಯೊಂದು ಜೀವಿಗೂ ಯಾರ ಸಂಕೋಲೆಯೂ ಇಲ್ಲದೆ ಬದುಕುವ ಹಕ್ಕಿದೆ. ದೇವರು ಅನಾಥ ರಕ್ಷಕ, ಮನುಷ್ಯರ ಈ ಲೋಕ ನರಕ ನಿಜ. ಆದರೆ ನಾವು ಮನಸ್ಸು ಮಾಡಿದರೆ ಇದೇ ಈ ನರಕವನ್ನು ಆನಂದದ ದಿವ್ಯ ತಾಣವಾಗಿ ಮರು ಸೃಷ್ಟಿಸಬಹುದು. ದೇವರು ಎಲ್ಲ ಮನುಷ್ಯರಿಗೂ ಇಂತಹ ಶಕ್ತಿಯನ್ನು ಕೊಟ್ಟಿದ್ದಾನೆ ಎಂದು ವೇದಾಂತ ಹೇಳಿ ಮಕ್ಕಳ ಮನಸ್ಸಿನಲ್ಲಿ ನೀತಿ ತುಂಬಿದ್ದರು. ಕರಿಯನ ಮನಸ್ಸಿನಲ್ಲಿ ಹತ್ತಾರು ಪ್ರಶ್ನೆಗಳೆದ್ದಿದ್ದವು. ಮುಗ್ಧವಾದ ಕುರಿಗಳು ದೇವರಿಗೆ ತುಂಬ ಪ್ರಿಯ; ನಮ್ಮ ಜೊತೆಯೆ ಬದುಕುವ ಪ್ರಾಣಿ ಪಕ್ಷಿಗಳನ್ನು ಘನತೆಯಿಂದಲೆ ಪ್ರೀತಿಸಬೇಕು. ಹಾಗೆ ಪ್ರೀತಿಸುವುದು ದೇವರನ್ನು ಗೌರವಿಸಿದ್ದಕ್ಕೆ ಸಮ ಎಂದು ಪಾದ್ರಿ ತನ್ನ ನೀಲಿ ಕಣ್ಣುಗಳನ್ನು ಅರಳಿಸುತ್ತ ಹೇಳಿದಾಗಲಂತು ಕರಿಯನಿಗೆ ಅತ್ತುಬಿಡಬೇಕೆನಿಸಿತ್ತು. ಅದು ಸುಖದ ಕಣ್ಣೀರೊ ಸಂಕಟದ ಕಂಬನಿಯೊ ಆ ಕ್ಷಣಕ್ಕೆ ಕರಿಯನಿಗೆ ಏನನ್ನೂ ಹೇಳಲಾಗದೆ ಮೂಕನಂತಾಗಿ ಕುರಿಗಳನ್ನ ಮನದ ತುಂಬ ಅಪ್ಪಿಕೊಂಡಿದ್ದ.

ಇದರ ನಡುವೆಯ ಕರಿಯನ ಚಿಕ್ಕಪ್ಪನಾದ ಲಕ್ಕಪ್ಪನಿಗೆ ರಾಜಕೀಯದ ಹುಚ್ಚು, ಪುಡಾರಿಗಳ ಜೊತೆ ವಿಧಾನಸೌಧ ಸುತ್ತಿ ಬಂದಿರುವ ಅವನಿಗೆ ಯಾವುದಾದರೂ ಒಂದು ಸಣ್ಣ ಸಿಂಹಾಸನದ ಮೇಲಾದರೂ ಕುಳಿತು ಪ್ರಾಣ ಬಿಡಬೇಕೆಂಬ ಆಸೆಯು ಬೇರು ಬಿಟ್ಟಿದ್ದು, ಹೇಗಾದರೂ ಮಾಡಿ ಕೇರಿಯವರನ್ನು ಕೈವಶಮಾಡಿಕೊಳ್ಳಲು ತರಾವರಿ ಇಕಮತ್ತುಗಳನ್ನು ಹುಡುಕುತ್ತಲೆ ಇರುತ್ತಾನೆ. ಆ ಬಡಪಾಯಿ ಕುರಿಗಳು ಮನೆಯವರ ಪಡಿಪಾಟಲನ್ನು ದಿನವೂ ಕಂಡು ಊರ ಮಂದಿಯು ಬಾಳು ತಿಳಿದು ಆಕಾಶದ ಅನಂತಕ್ಕೆ ಏನನ್ನೂ ಮೊರೆಯಿಡುವಂತೆ ಬ್ಯಾಗುಟ್ಟುವುದಿದೆ. ಕೆಲವೊಮ್ಮೆ ನಡುರಾತ್ರಿಯಲ್ಲಿ ಕುರಿಗಳು ನಿಗೂಢವಾಗಿ ಸದ್ದು ಮಾಡಿ ಬ್ಯಾಗರೆದು ಆರ್ತವಾಗಿ ಛೀತ್ಕರಿಸುವುದೂ ಉಂಟು. ಅಂತಹ ಅವೇಳೆಯಲ್ಲಿ ಕರಿಯ ದಿಢೀರನೆ ಎದ್ದು ಕುರಿಗಳ ಕೊರಳ ತಬ್ಬಿ, ಏನಾಯ್ತು ಎಂದು ಬೆದರಿದುಸಿರಿನಲ್ಲಿ ಕೇಳುವುದಿದೆ. ಕತ್ತಲೆಯ ಕೂಪದಂತಿರುವ

ಆ ಮನೆಯಲ್ಲಿ ಎಲ್ಲೋ ತೋಳಗಳು ಬಂದು ಕುಳಿತಿರಬಹುದೇ ಎಂದು ಕರಿಯ ಕುರಿಗಳ ತಬ್ಬಿಕೊಂಡು ಕಣ್ಣು ಮುಚ್ಚಿದರೆ, ಆಚೆ ಬದಿಯ ಕಿರುಮನೆಯಲ್ಲಿ ಬಲಿಷ್ಠವಾದ ತೋಳವೊಂದು ಮಿದುವೆದೆಯ ಕಂಡವನ್ನೆ ಬಗೆದಗಿದು ನುಂಗಿ ರಕ್ತವರ್ಣದ ಕಣ್ಣುಗಳನ್ನು ಬೆಂಕಿಕೊಳ್ಳಿಯಂತೆ ಬಿಟ್ಟು ಹಲ್ಲು ಕಿರಿಯುತ್ತಾ ಏನೊ ದಾಟಿ ಹೋದಂತೆ ಕಂಡಂತಾಗಲು ಆತನಿಗೆ ಕಿರುಚಿಕೊಳ್ಳ ಬೇಕೆನಿಸುತ್ತದೆ. ಅಲ್ಲಿ ಅತ್ತೆಯೋ ಅಮ್ಮನೊ ಚಿಕ್ಕಮ್ಮನೊ ಹೊರಳಾಡಿ ನೆತ್ತರಲ್ಲಿ ತೊಯ್ದಂತಾಗಿ, ಕಗ್ಗತ್ತಲ ಈ ಅಟ್ಟಿಯಲ್ಲಿ ಈ ಕುರಿಗಳ ಕಾಯುವರು ಯಾರೊ ಎಂದು ಬೇಡಬೇಕೆನಿಸುತ್ತದೆ.

ಊರವರು ಲಕ್ಕಪ್ಪನ ಬಗ್ಗೆ ಗುಣಗಾನ ಮಾಡುವುದೂ, ಅದಕ್ಕವನು ಊರ ಸರ್ಕಲ್ಲಿನಲ್ಲಿ ಸಂಜೆ ವೇಳೆ ಪುಂಡರ ಜೊತೆಗೂಡಿ ಭವಿಷ್ಯ ಮಾತನಾಡಿ ಎಲ್ಲರ ತಲೆಗೊಂದೊಂದು ಕಿರೀಟ ತೊಡಿಸಿ ತಾನೊಂದು ಗದ್ದುಗೆ ಮೇಲೆ ಆಸೀನನಾದಂತೆ ನಗಾಡಿ ಕತ್ತಲೊಡನೆ ಕುಣಿದಾಡಿ ಮನೆಗೆ ಬರುವಷ್ಟರಲ್ಲಿ, ಶೇಷಪ್ಪನ ತಲೆಯಲ್ಲಿ ನೂರಾ ಎಂಟು ಗಂಟುಗಳು ಸಿಕ್ಕಿಕೊಂಡು ಹುಳಿ ಎಂಡಕ್ಕೆ ಮನಸ್ಸು ಕೊಟ್ಟು, ವಿನಾಕಾರಣ ನಳ ಚಕ್ರವರ್ತಿಯ ಪಾತ್ರವನ್ನು ಮೈಮೇಲೆ ತಂದುಕೊಂಡು ರಾಜ್ಯಭ್ರಷ್ಟನಾದಂತೆ ವಿರಹ ಪಡುತ್ತ ತಮ್ಮನ ಬೆಳವಣಿಗೆಯ ಬಗ್ಗೆ ಅಸೂಯೆ ಪಡುತ್ತ ಯಾವುದಾವುದೊ ತರಲೆ ಗಿರಾಕಿಗಳ ಸಾಲದ ಲೆಕ್ಕದ ಸಿಟ್ಟನ್ನು ಹರಿಯಬಿಡುತ್ತ ಮಗನಾದ ಕರಿಯನ ಮೇಲೂ ಅದನ್ನು ಚಲಾಯಿಸಿ ದಿಕ್ಕೆಡುವುದು ಎಷ್ಟನೇ ಬಾರಿಯೊ. ಬೆದೆಗೆ ಬಂದ ಕುರಿಗಳು ರಾತ್ರಿ ವೇಳೆಯೂ ಮುಲುಕುತ್ತಿದ್ದವು. ಅತ್ತೆ ಅವುಗಳನ್ನು ಅದರಿಸಿ ಸುಮ್ಮನೆ ಮಲಗೋದಿಕ್ಕೆ ಬರೋದಿಲ್ಲವೇ ಎಂದು ಸಿಡುಕುತ್ತಿದ್ದಳು. ಕರಿಯ ಆ ಕುರಿಗಳ ಸದ್ದಿಗೆ ಏನೇನೊ ಅರ್ಥ ಹುಡುಕುತ್ತಿದ್ದ. ದಿವ್ಯವಾದ ನಿದ್ದೆಯ ಸರೋವರದಲ್ಲಿ ಕುರಿ ಮೇಲೆ ಕುಳಿತು ಮರುಭೂಮಿಯ ಬೆಟ್ಟಗುಡ್ಡಗಳಲ್ಲಿ ಒಬ್ಬಂಟಿಯಾಗಿ ಅಲೆಯುತ್ತ ಹೊರಟಂತೆ ಕನಸಾಗಿ ಅದುರುತ್ತಿದ್ದ.

ಇವುಗಳ ಕಾಟ ಅತಿಯಾಯ್ತೆಂದು ನಾಳೆಯ ಟಗರುಗಳ ಜೊತೆ ಕುರಿಗಳನ್ನು ಮೇಯಲು ಬಿಡಬೇಕೆಂದು ನಿದ್ದೆಗಣ್ಣಲ್ಲ ಬೀರವ್ವ ನಿಶ್ಚಯಿಸಿದ್ದಳು. ಬೆಳಗಾಗಿ ಗಂಡನ ಜೊತೆ ಆ ಬಗ್ಗೆ ಪ್ರಸ್ತಾಪಿಸಿಯೂ ಆಯಿತು. ಶೇಷಪ್ಪನಿಗದು ಒಪ್ಪಿಗೆಯಾಗಲಿಲ್ಲ. ಹೊಂಗನೂರಿನ ರೆಹಮಾನ್ ಸಾಹೇಬರಿಗೆ ಕುರಿಗಳನ್ನು ಮಾರಲು ಆತ ಯೋಚಿಸಿದ್ದ. ದುಬೈಯಲ್ಲಿರುವ ಅಳಿಯಂದಿರು ತನ್ನ ಬಳಗದ

ಜೊತೆ ರೆಹಮಾನ್ ಸಾಹೇಬರ ಮನೆಗೆ ಬರುವುದಿದೆಯಾದ್ದರಿಂದ ಭರ್ಜರಿ ಬೇಟೆ ಮಾಡಿ ಕುರಿ ಕಡಿದು ಬಿರಿಯಾನಿ ಮಾಡಿ ಎಲ್ಲರಿಗೂ ಉಣಬಡಿಸಿ ಶಹಬ್ಬಾಸ್ ಎನಿಸಿಕೊಳ್ಳ ಬೇಕಿತ್ತು. ರೆಹಮಾನ್ ಸಾಹೇಬರು ಕಳೆದ ವಾರವೆ ಬಂದು ಕುರಿಗಳನ್ನು ನೋಡಿ ಬಾಯಿ ಚಪ್ಪರಿಸುತ್ತ ಹೊಗಳಿ ಕೇಳಿದ ದುಡ್ಡಿಗೆ ಚೌಕಾಸಿಯಿಲ್ಲದೆ ಕೊಳ್ಳುವೆ ಎಂದು ಹೇಳಿ ಹೋಗಿದ್ದರು. ಹೆಂಡತಿಗೆ ಶೇಷಪ್ಪ ಈ ವಿಷಯವನ್ನೆ ತಿಳಿಸಿರಲಿಲ್ಲ. ಲಕ್ಕಪ್ಪನ ಲೆಕ್ಕಾಚಾರ ಮತ್ತೊಂದು ಕಡೆಗಿತ್ತು. ಆಗಾಗ ರಾಜಕೀಯದ ಬಾಡೂಟ ಮಾಡಿದರೆ ಮಾತ್ರ ಆತನ ಸುತ್ತ ಜನ ನೆರೆಯುತ್ತಿದ್ದುದು. ಮೂರು ತಿಂಗಳಿಗೆ ಒಮ್ಮೆಯಾದರು ಊರ ಹೊರಗಿನ ಗುಡ್ಡದಲ್ಲಿ ಕುರಿಯೊ ಹಂದಿಯೊ ಯಾವುದನ್ನಾದರೂ ಕಡಿದು ಉಂಡು ತೇಗಿ ಹಳ್ಳಿಯಿಂದ ದಿಲ್ಲಿಯವರೆಗಿನ ಎಲ್ಲ ರಾಜಕೀಯವನ್ನು ಮೂಳೆಗಳ ಜೊತೆ ಕುಟ್ಟಿ ಪುಡಿಮಾಡಿ ಅಗಿದು ರಸ ಕುಡಿದರೆ ಮಾತ್ರ ಅವರಿಗೆ ನೆಮ್ಮದಿ. ಲಕ್ಕಪ್ಪನಿಗೂ ಹಾಗೆಯೇ. ಈ ಬಾರಿ ತನ್ನ ಅಣ್ಣನ ಕುರಿಯನ್ನೆ ಕಡಿದು ಕೂಟ ಮಾಡಿ ಮುಂದೆ ಬರುವ ಸ್ಥಳೀಯ ಚುನಾವಣೆಗೆ ಸಿದ್ಧವಾಗಬೇಕೆಂದು ಲೆಕ್ಕಿಸಿದ್ದ. ಕೊಳಕಣ್ಣ ಅದಕ್ಕೆ ತಕ್ಕ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದ.

ದುಬೈಯಿಂದ ಅಳಿಯ ಬರುವುದು ಮುಂದೂಡಿದ್ದರಿಂದ ರೆಹಮಾನ್ ಸಾಹೇಬರು ಬಿರಿಯಾನಿ ಕಾರ್ಯಕ್ರಮವನ್ನು ಸದ್ಯಕ್ಕೆ ಕೈಬಿಟ್ಟಿದ್ದರು. ಕೊಳಕಣ್ಣನಿಗೆ ಈ ಸುದ್ದಿ ತಡವಾಗಿ ತಿಳಿದದ್ದು ಆಶ್ಚರ್ಯವೇ ಸರಿ. ಅಂತಹ ಕುರಿ ಮಾಂಸದ ರುಚಿಯನ್ನು ಅವನ್ಯಾರೊ ಬೇರೆಯವರು ತಿನ್ನುವುದು ಯಾಕೆಂದು ಲಕ್ಕಪ್ಪನ ಕಿವಿ ಹಿಂಡಿದ್ದ. ಹೀಗೇ ಬಿಟ್ಟರೆ ಆತ ನಸುಕಿನಲ್ಲಿ ಬಂದು ಕುರಿ ಹಿಡಿದುಕೊಂಡು ಹೋಗಿರುತ್ತಾನಷ್ಟೆ ಎಂದು ಜರೂರಿನ ಆತಂಕವನ್ನು ಕೊಳಕಣ್ಣ ಹೇರಿದ. ಮತ್ತದೇ ರಾತ್ರಿಗಳು ಬಂದು ಹೋದವು. ಕುರಿಗಳ ಅರಚಾಟ ಹಾಗೇ ನಡೆದಿತ್ತು. ಒಂದು ಮುಂಜಾನೆ ಆ ಎರಡು ಕುರಿಗಳಲ್ಲಿ ಒಂದು ಮಾಯವಾಗಿತ್ತು. ಕರಿಯ ಏನಾಯ್ತಿಂದು ಹುಡುಕಾಡಿ ತನ್ನ ಅಪ್ಪ ಅವ್ವರಿಗೆ ತಿಳಿಸಿ ತಾತನ ಮುಂದೆ ಬಡಬಡಿಸಿ ಅತ್ತೆ ನೀನು ಕುರಿಯ ಕಂಡೆಯೊ ಎಂದು ಕೇಳಿ ಮುದಿ ಅಜ್ಜಿಯ ಮುಂದೆಯೂ ಕೇಳಿದ್ದ. ಶೇಷಪ್ಪ ಕುರಿ ಕದ್ದವರಾರೆಂದು ಗಿರಾಕಿಗಳ ಜೊತೆ ರೇಗುತ್ತ ವ್ಯಗ್ರನಾಗುತ್ತಿದ್ದ. ಬೀರವ್ವ ಗೋಳೋ ಎಂದಳುತ್ತಿದ್ದಳು. ಆ ಕುರಿ ಎಲ್ಲೋ ಬೆದೆ ತಡೆಯಲಾರದೆ ಗಂಡು ಹುಡುಕಿಕೊಂಡು ಗುಂಟ ಕಿತ್ತುಕೊಂಡು ಗುಡ್ಡದ

ಕಡೆ ಓಡಿ ಹೋಗಿರ ಬೇಕೆಂದು ಅತ್ತೆಯು ಊಹಿಸುತ್ತಿದ್ದಳು.

ಅಕಸ್ಮಾತ್ ತೊರೆಯ ಕಡೆ ಕುರಿ ಸಿಗಬಹುದೇ ಎಂದು ಕರಿಯ ಅಲ್ಲಿಗೂ ಹೋಗಿ ಬಂದು ಸಪ್ಪಗೆ ಕುಳಿತಿದ್ದ. ಹೋಟೆಲಿನ ತುಂಬ ಗಿರಾಕಿಗಳು ಅವರವರ ಸುಖದುಃಖದಲ್ಲಿ ತಲ್ಲೀನರಾಗಿದ್ದರು. ತೋಳ ಬಂದು ಕುರಿಯನ್ನು ಹೊತ್ತುಕೊಂಡು ಹೋಗಿರಬಹುದೇ ಎಂದು ಕರಿಯ ಅತ್ತೆಯನ್ನು ಕೇಳಿದ. ಬೀರವ್ವ ಕದ್ದವರ ಮನೆ ಸರ್ವನಾಶವಾಗಲಿ ಎಂದು ಶಾಪವಿಕ್ಕುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲೆ ವರ್ತಮಾನ ಬಂತು. ಚಿಕ್ಕಪ್ಪ ಕುರಿ ಕಡಿಸಿ ರಾಜಕೀಯ ಪರ ಆಚರಿಸುವ ಸಿದ್ಧತೆಯಲ್ಲಿ ಊರಾಚೆಯ ಗುಡ್ಡದಲ್ಲಿ ಸೇರಿದ್ದಾನೆ ಎಂದು ಯಾರೂ ಹೇಳುತ್ತಾ, ಈ ವಿಚಾರ ನಿಮಗೇ ಗೊತ್ತಿಲ್ಲ ಎಂದರೆ ಇದೇನು ಚೋಜಿಗ ಶೇಷಪ್ಪಾ ಎಂದು ಆಶ್ಚರ್ಯಪಡುತ್ತಿದ್ದ. ಹಾಗೆ ವಿಷಯ ತಿಳಿದ ಕೂಡಲೆ ಕರಿಯ ಗುಡ್ಡದ ಕಡೆ ಓಡಿಹೋಗಿದ್ದ. ಅಲ್ಲಿ ಪುಂಡರ ದಂಡು ನಗಾಡುತ್ತಿತ್ತು. ಚಿಕ್ಕಪ್ಪ ವೀರನಂತೆ ಯಾರೊಂದಿಗೂ ಆರ್ಭಟಿಸಿದಂತೆ ಕೂಗಾಡುತ್ತಿದ್ದ. ಕುರಿಯ ಚರ್ಮ ಸುಲಿದು ಮರಕ್ಕೆ ನೇತು ಹಾಕಿ ಅದರ ದೇಹವನ್ನು ಕಡಿದು ವಿಂಗಡಿಸಿ ಬೇಯಿಸಲು ಅಣಿಯಾಗುತ್ತಿದ್ದರು. ತಮ್ಮನ ವರ್ತನೆ ಹದ್ದು ಮೀರಿತೆಂದು ಬೀರವ್ವನನ್ನು ಹೋಟೆಲಲ್ಲಿ ಇರಿಸಿ ಗುಡ್ಡಕ್ಕೆ ಬಂದು ನೋಡಿದರೆ ಕೊಳಕಣ್ಣ ಕುರಿಯ ಕಿವಿ ಸುಟ್ಟುಕೊಂಡು ಬಾಯಿಗಿಟ್ಟು ಲೊಡಚುತ್ತಿದ್ದ. ಎಲ್ಲಾ ಇವನದೇ ಕಿತಾಪತಿ ಇರಬೇಕೆಂದೂ; ಇವನ ತಲೆ ಸೀಳಬೇಕೆಂದೂ ಕೈಗೆ ಸಿಕ್ಕಿದ ದಡಿಯನ್ನು ಎತ್ತಿಕೊಂಡು ನುಗ್ಗುವಷ್ಟರಲ್ಲಿ ಕುರಿಯ ತಲೆ ಸೀಯುತ್ತಿದ್ದವರು ಅಡ್ಡ ಬಂದು "ಬಿಡೋ ಶೇಷಣ್ಣಾ, ನಾವೇನು ಕದ್ದುಕೊಂಡು ಬಂದು ನಿನ್ನ ಕುರಿಯನ್ನು ಕಡಿದಿಲ್ಲ' ಎಂದು ಕೈ ಮಿಲಾಯಿಸಿದರು. ಕೊಳಕಣ್ಣ ಏಟು ತಪ್ಪಿಸಿಕೊಂಡು ಏದುಸಿರು ಬಿಡುತ್ತಾ ಬೆಂಬಲಿಗರ ನಡುವೆ ನಿಂತು 'ಶೇಸಾ ನಮ್ಮವ್ವ ನನ್ನೂ ಗಂಡು ಅಂತಾ ಎತ್ತವಳೆ ಕಲಾ, ನೀನೊಬ್ಬೆ ಅಲ್ಲಾ ಗಂಡು. ಬಾರಲೇ ಅದೇನ್ ಕಿಸ್ಥಿಯೆ ಅಂತಾ ನಾನೂ ನೋಡ್ತೀನಿ' ಎಂದು ಬುಸುಗುಟ್ಟಿದ. ಅಷ್ಟರಲ್ಲಿ ಲಕ್ಕಪ್ಪ ಅಡ್ಡ ಬಂದು ತನ್ನ ಅಣ್ಣನಾದ ಶೇಷಪ್ಪನಿಗೆ ಅಖೈರಾಗಿ ಹೇಳುವಂತೆ 'ನೋಡಪ್ಪಾ, ಕುರಿ ನಂದೊ ನಿಂದೊ ಅನ್ನುದು ಅಮ್ಯಾಕಿನ್ ಮಾತು. ಕಾರ್ಯ ಮಾಡುವಾಗ ನೀನಿಂಗೆ ಬಂದು ಕೆಡ್ಸುದ್ರೆ ಯವಾರ ಸರಿಯಾಗಿರುದಿಲ್ಲ. ಸುಮ್ಮೆ ವಂಟೋಗು' ಎಂದು ಪುಂಡರ ಮುಂದೆ ಠೇಂಕರಿಸಿ ನುಡಿದ. ಶೇಷಪ್ಪ ಬಡಪೆಟ್ಟಿಗೆ ಜಗ್ಗುವಂತಿರಲಿಲ್ಲ.

'ಲೇ ಅವಿವೇಕಿ, ನನ್ ಕುರಿನೆ ಕಾಣ್ಣಂಗೆ ಹಿಡ್ಕ ಬಂದು ಕಡ್ಡಿರುದು ಅಲ್ದೆ ಆ ಕುರಿ ನಮಗ್ ಸೇರ್‌ಬೇಕು ಅನ್ನುವಂಗಾಡ್ತಿಯಲಾ; ಎಂಗಿದ್ದದ್ಲ ನಿನ್ನಾಗಚಾರಾ, ನಾನೂ ಸಯಿಸ್ಕತನೇ ಬತ್ತಿವಿನಿ. ನಿನ್ ರಾಜ್‌ಕೀಯ್ಕೆ ನನ್ ಲವುಡಾ ವಡಿಯಾ' ಎಂದು ಕುತ್ತಿಗೆ ಹಿಡಿದು ಜಡಿದಾಡಿದ. ಲಕ್ಕಪ್ಪ ಅಣ್ಣನ ಮೇಲೆ ಕೈ ಮಿಲಾಯಿಸಿ ಕೆಳಕ್ಕೆ ಕೆಡವಿಕೊಂಡೇ ಬಿಟ್ಟ. ಪುಂಡರು ಗುಂಪಿನಲ್ಲಿ ಕೂಡಿ ಜಗಳ ಬಿಡಿಸುವ ನೆಪದಲ್ಲೆ ಶೇಷಪ್ಪನಿಗೆ ಬಡಿದು ಹಣ್ಣುಗಾಯಿ ನೀರುಗಾಯಿ ಮಾಡಿದರು. ಕೊಳಕಣ್ಣ ವೀರಾವೇಶ ದಿಂದ ನರಿಯಂತೆ ಅರಚುತ್ತಾ ಕುರಿಯ ಚರ್ಮ ಸುಲಿದಂತೆಯೆ ನಿನ್ನ ಚರ್ಮವನ್ನೂ ಸುಲಿದು ಬಿಡುವೆ ಎಂದು ಚಾಕು ಹಿಡಿದು ಎಚ್ಚರಿಸಿದ.

ಶೇಷಪ್ಪನ ಮೂತಿ ಆಂಜನೇಯನಂತಾಗಿತ್ತು. ಮಂಡಿ ಚಿಪ್ಪೇ ಮುರಿದಂತೆ ರಕ್ತ ಸೋರುತಿತ್ತು. ಅಣ್ಣತಮ್ಮಂದಿರು ಹೊಡೆದಾಡಿಕೊಂಡರು ಎಂಬಂತೆ ಪುಂಡರು ಜಾರಿಕೊಂಡರು. ಶೇಷಪ್ಪ ನೊಂದು ಅಪಮಾನದಿಂದ ಕುಂಟುತ್ತ ಹಿಂತಿರುಗಿದ. ಕುರಿಯ ಮಾಂಸವು ದೊಡ್ಡ ದಬರಿಯಲ್ಲಿ ಬೇಯುತ್ತಿತ್ತು. ಅದರ ಕಸರೆ, ಕಳ್ಳು ಇತ್ಯಾದಿಗಳು ತಗ್ಗಿನಲ್ಲಿ ವಿಕಾರವಾಗಿ ಬಿದ್ದಿದ್ದು ನಾಯಿಗಳು ಕಿತ್ತಾಡಿಕೊಂಡು ತಿನ್ನುತ್ತಿದ್ದವು. ರಕ್ತದ ವಾಸನೆ ಅವರ ಜಗಳದಲ್ಲಿ ಮಿಳಿತವಾಗಿ ಅಲ್ಲೆಲ್ಲ ಅವರ ತಲೆ ಮೇಲೆ ಸುತ್ತುತ್ತಿತ್ತು. ಕೊಳಕಣ್ಣ ಬಾಡು ಬೆಂದಿದೆಯೊ ಇಲ್ಲವೊ ಎಂದು ದವಡೆಗೆ ಒತ್ತರಿಸಿ ಎಳನಾಗರದಂತೆ ಮಿಳ್ಳಾಡುತ್ತಿದ್ದವು. ಹೊತ್ತು ಇಳಿಯುತ್ತಿತ್ತು. ಪುಂಡರ ದಂಡು ಕರಗಿತ್ತು. ಲಕ್ಕ ಮನೆಗೆ ಬರಲಿ, ಅವನನ್ನು ಕಡಿದು ಹಾಕುವೆ ಎಂದು ಶೇಷಪ್ಪ ಹೋಟೆಲಲ್ಲಿ ಸಾಲದ ಗಿರಾಕಿಗಳನ್ನು ಬೆಂಬಲಕ್ಕೆ ಇಟ್ಟುಕೊಂಡು ನರಳಾಡುತ್ತಿದ್ದ. ಎಷ್ಟೋ ಹೊತ್ತಾದ ಮೇಲೆ ಸೇಂದಿಯ ಅಮಲಿಂದ ಲಕ್ಕಪ್ಪ ಬಂದ. ಅಷ್ಟರಲ್ಲಿ ಮನೆಯಲ್ಲಿ ಹೆಂಗಸರ ನಡುವೆ ಮಾರಾಮಾರಿ ನಡೆದು ಲಕ್ಕಪ್ಪನ ಹೆಂಡತಿ ನೆರೆಮನೆಯಲ್ಲಿ ಅವಿತುಕೊಂಡಿದ್ದಳು. ತನ್ನ ಕುರಿಯನ್ನು ನಿನ್ನ ಗಂಡ ಹೀಗೆ ಮಾಡಿದನಲ್ಲಾ ಎಂದು ಬೀರವ್ವ ವಾರಗಿತ್ತಿಯ ಮೂಗುನತ್ತು ಮುರಿದು ಬೀಳುವಂತೆ ಹೊಡೆದು ಮೂಗಿನ ಸೋಲೆ ಒಡೆದು ರಕ್ತ ಬರುವಂತೆ ಮಾಡಿದ್ದಳು. ಅಂತಹ ರಂಪವನ್ನು ಕರಿಯ ಹಿಂದೆಂದೂ ಕಂಡಿರಲಿಲ್ಲ. ಒಬ್ಬೊಬ್ಬರ ಕೈಯಲ್ಲು ಮುಡಿಗೂದಲು ನುಲಿದುಕೊಂಡು ಸೀರೆಗಳನ್ನು ಕಿತ್ತುಕೊಂಡು ಅರೆಬೆತ್ತಲೆಯಾಗಿಯೆ ಹಜಾರದಲ್ಲಿ ಬಿದ್ದು ಹೊದ್ದಾಡಿ ಬಾಯಿ ಬಡಿದುಕೊಂಡು ಎದೆ ಚಚ್ಚಿಕೊಂಡು ಇಡೀ ಲೋಕವೆ ನ್ಯಾಯ ತೀರ್ಮಾನಕ್ಕೆ ಬರಲಿ ಎಂಬಂತೆ

ಕೂಗಿಕೊಂಡು ರೋದಿಸಿದ್ದರು. ಅಜ್ಜಿ ಅವರಿಬ್ಬರ ಜಗಳದ ಕಾಲುಸಂದಿಯಲ್ಲಿ ಸಿಕ್ಕಿಕೊಂಡು ಕಾಲ ತುಳಿತಕ್ಕೆ ಸಿಕ್ಕಿ ಅಯ್ಯೋ ಎಂದು ನರಳುತ್ತ ತನ್ನ ಗತ ಕಾಲದ ಮೂಳೆ ಚಕ್ಕಳಕ್ಕಾದ ಆಘಾತವನ್ನು ಸಹಿಸಲಾರದೆ ದೇವರನ್ನು ಕೂಗಿಕೊಳ್ಳುತ್ತಿದ್ದಳು. ತಾತ ಪಕ್ಕದ ಕೇರಿಯ ತೊಟ್ಟಿಲ ಮಗುವಿಗೆ ಬಾಲಗ್ರಹ ದೋಷ ತೆಗೆಯುವ ಮಂತ್ರ ಹಾಕಲು ಹೋಗಿದ್ದವನು ಅದರಲ್ಲಿ ಮುಳುಗಿ ಯಾವುದೊ ಭೂತ ಚೇಷ್ಟೆಯನ್ನು ಶಮನ ಮಾಡುವ ಪಣ ತೊಟ್ಟು ಆ ಭೂತದ ಗೊಂಬೆ ಮಾಡಿ ಅದನ್ನು ಹರಿವ ನೀರಿನ ದಡದಲ್ಲಿ ಕೂರಿಸಿ ಸಾವಿರದ ನೂರೊಂದು ಮಂತ್ರವನ್ನು ಹಾಕುತ್ತ ಕಾಲಾತೀತನಾಗಿ ಬಿಟ್ಟಿದ್ದ.

ಕರಿಯನ ಅತ್ತೆ ಎಲ್ಲವನ್ನೂ ನೋಡಿ ಸಾಕಾಗಿ ಒಂದೆಡೆ ಅನಾಥವಾಗಿ ಕೂತುಬಿಟ್ಟಿದ್ದಳು. ಶೇಷಪ್ಪ ತಮ್ಮನ ಮೇಲೆ ಕಂಪ್ಲೇಂಟ್ ಕೊಡುವಂತೆಯೂ ಇರಲಿಲ್ಲ. ಪುಡಾರಿಯಾದ ತಮ್ಮನ ಮಾತು ಪೋಲೀಸರ ನಡುವೆ ಸಲೀಸಾಗಿ ನಡೆಯುತ್ತಿದ್ದವು. ಇನ್ನು ಪಂಚಾಯ್ತಿಗೆ ಹೋದರಂತು ಶೇಷಪ್ಪನೇ ದಂಡ ತೆರಬೇಕಾದ ಪರಿಸ್ಥಿತಿಯನ್ನು ಕೊಳಕಣ್ಣನ ನೇತೃತ್ವದಲ್ಲಿ ಪಂಡರು ಸೃಷ್ಟಿಸುತ್ತಿದ್ದರು. ಮತ್ತಾವುದೆ ಅಡ್ಡ ದಾರಿಯಲ್ಲಿ ಶೇಷಪ್ಪ ಬಂದರೆ; ಆ ಪುಂಡರು ಆತನ ಹೋಟೆಲಿಗೆ ಯಾವುದೆ ಗಿರಾಕಿಗಳು ಹೋಗದಂತೆ ತಡೆಯಬಲ್ಲವರಾಗಿದ್ದರು. ಶೇಷಪ್ಪನ ತಲೆ ರೋಸಿ ಹೋಗಿತ್ತು. ಲಕ್ಕಪ್ಪ ಬಂದವನೆ ಪಡಸಾಲೆಯಲ್ಲಿ ಕುಳಿತು ಬೀಡಿ ಹಚ್ಚಿದ. ಶೇಷಪ್ಪ ಗಾಯಗೊಂಡ ಚಿರತೆಯಂತೆ ಅವನ ಮೇಲೆ ಎಗರಿ ಬಿದ್ದ. ಕರಿಯ ಲವ್ವೋ ಎಂದು ಬಾಯಿ ಬಡಿದುಕೊಂಡ. ಲಕ್ಕಪ್ಪನೂ ಶೇಷಪ್ಪನೂ ಒಂದೇ ತಾಯಿ ಎದೆಹಾಲು ಕುಡಿದವರು ಕಾಲಾಂತರದ ಶತ್ರುಗಳಂತೆ ಬಡಿದಾಡಿ ರಕ್ತ ಹೀರುವಂತೆ ಕೇಕೆ ಹಾಕಿದರು. ಇಡೀ ಕೇರಿ ಬಂದು ಜಮಾಯಿಸಿತು. ಅಣ್ಣತಮ್ಮಂದಿರ ಜಗಳ ಇದ್ದಿದ್ದೇ ಬಿಡು ಎಂದು ನೋಡುತ್ತ ನಿಂತರು. ಕೆಲವರು ಬಿಡಿಸಲು ನೋಡಿದರೂ ಪ್ರಯೋಜನವಾಗಲಿಲ್ಲ. ಶೇಷಪ್ಪ ತಮ್ಮನನ್ನು ಕುರಿಯನ್ನು ಕಡಿದಂತೆಯೇ ಕಡಿದು ಬದುಕಬೇಕೆಂದು ಮನೆಗೆ ಹೋಗಿ ದೊಡ್ಡ ಕತ್ತಿ ಹಿಡಿದು ನುಗ್ಗಿ ಬಂದ.

ಶೇಷಪ್ಪ ತಮ್ಮನ ಮೇಲೆ ಬಲವಾಗಿ ಕತ್ತಿ ಬೀಸಿದ. ಕೂದಲೆಳೆಯಲ್ಲಿ ಹೊಡೆತ ತಪ್ಪಿಸಿ ಕೊಂಡು ಬಚಾವಾದ. ಇನ್ನೇನು ಇಬ್ಬರಲ್ಲಿ ಒಬ್ಬರ ರುಂಡ ಉರುಳುತ್ತದೆ ಎನ್ನುವಷ್ಟರಲ್ಲಿ ಅತ್ತೆಯು ಚಂಡಿ ಚಾಮುಂಡಿಯಾಗಿ ಆರ್ಭಟಿಸಿ ನೆಗೆದು ಬಂದು

ತನ್ನ ಮೈಮೇಲೆ ಪೂರ್ವಿಕರು ಬಂದಿದ್ದಾರೆಂದು ತೋರಿಸಿಕೊಂಡು ಇಡೀ ಊರೇ ಒಂದು ಕ್ಷಣ ಬೆಚ್ಚಿ ಬೀಳುವಂತೆ ಕೇಕೆ ಹಾಕಿ ಹೂಂಕರಿಸಿ ಅಣ್ಣನ ಕೈಲಿದ್ದ ಕತ್ತಿಯನ್ನು ಕಿತ್ತು ಬಿಸಾಡಿ ಇಬ್ಬರನ್ನೂ ದೂರ ತಳ್ಳಿ ತರಗುಟ್ಟುತ್ತ ಹಲ್ಲು ಕಡಿಯುತ್ತ ಒಬ್ಬೊಬ್ಬರ ರಕ್ತವನ್ನೂ ಕುಡಿದು ಬಿಡುವೆ ಎಂದು ಕೇರಿಯ ಆ ಕಿರು ಓಣಿಯ ಉದ್ದಕ್ಕೂ ಓಡಾಡಿ ಇಡೀ ಊರಿಗೇ ಎಚ್ಚರಿಸುತ್ತಿದ್ದಳು. ಕರಿಯ ಅತ್ತೆಯ ಆ ಅವತಾರ ಕಂಡು ನಡುಗಿದ್ದರೂ ಒಳಗೆಂತದೊ ಹೆಮ್ಮೆ ಉಂಟಾಗಿತ್ತು. ಎಷ್ಟೋ ಹೊತ್ತಿನ ತನಕ ಕೇರಿಯ ಯಾರೂ ಅವಳನ್ನು ತಡೆಯಲು ಆಗಿರಲಿಲ್ಲ. ಬಿಸಾಡಿದ್ದ ಉದ್ದದ ಆ ಕತ್ತಿ ಹಿಡಿದು ಅಣ್ಣಂದಿರ ಬಾಯಿ ಮುಚ್ಚಿಸಿದ್ದಳು. ಊರು ಇದೆಲ್ಲ ಮಾಮೂಲು ಎಂಬಂತೆ ಮಲಗಿತು. ತಾತ ಭಾಗಶಃ ನದಿಯ ಮಡುವಿನಲ್ಲಿ ಮುಳುಗಿ ಈಗ ಮಂತ್ರ ಜಪಿಸುತ್ತಿರಬೇಕು. ಅಜ್ಜಿ ತನ್ನ ನಿತ್ರಾಣದ ದೇಹವನ್ನು ಅದೇ ಅನಾದಿಕಾಲದ ಚಾಪೆ ಮೇಲೆ ಹಾಕಿ ಕೊನೆ ಕಾಲದ ಉಸಿರಾಟವನ್ನು ಆಡುತ್ತಿದ್ದಳು. ಚಿಕ್ಕಪ್ಪ ತನ್ನ ಹೆಂಡತಿಯ ಜೊತೆ ಕಿರು ಮನೆಯ ಬಾಗಿಲು ಜಡಿದುಕೊಂಡು ಹೊರಳಾಡುತ್ತಿದ್ದ. ಅದೇ ಅಪ್ಪ ಹಜಾರದ ಮೂಲೆಯಲ್ಲಿ ಬಾದೆಯಿಂದ ನರಳುತ್ತಿದ್ದ. ಬೀರವ್ವ ಗಂಡನ ಪಾಡಿಗೆ ತನ್ನ ಪಾಡಿಗೆ ಅಥವಾ ಕುರಿಯ ಪಾಡಿಗೊ ಮರುಗಿ ದುಕ್ಕಳಿಸುತ್ತ ಬರಲಾರದ ನಿದ್ದೆಯನ್ನು ಕರೆಯುತ್ತಿದ್ದಳು.

ಕ್ರೂರ ಕತ್ತಲ ಕೂಪದಲ್ಲಿ ಮನೆಯ ಅವರೆಲ್ಲರೂ ಅಷ್ಟೆಲ್ಲ ಬಡಿದಾಡಿ ರಣರಂಗ ಮಾಡಿಕೊಂಡಿದ್ದವರು ಗಾಯಾಳುಗಳಾಗಿ ಅಲ್ಲಲ್ಲಿ ಬಿದ್ದಿದ್ದರು. ಕರಿಯನ ಕಣ್ಣಿಗೆ ನಿದ್ದೆ ಬಂದಿರಲಿಲ್ಲ. ಮನೆಯ ಹಿತ್ತಿಲ ಬಾಗಿಲನ್ನು ಏನೊ ಕೆರೆಯುತ್ತಿರುವ ಸದ್ದು ಕೇಳಿಸಿತು. ತೋಳ ಏನಾದರೂ ಬಂದಿರಬೇಕೆಂದು ಅವನ ಆತಂಕವು ಪಿಸುನುಡಿಯುತ್ತಿತ್ತು. ಅಲ್ಲಿ ತನಕ ಸುಮ್ಮನಿದ್ದ ಆ ಒಂಟಿ ಕುರಿಯು ಸಂಗಾತಿ ಇನ್ನೂ ಯಾಕೆ ಬಂದಿಲ್ಲವೆಂದು ಗೊಳೋ ಎಂದು ರೋದಿಸುವಂತೆ ನಟ್ಟಿರುಳ ಗಾಢತೆಯಲ್ಲಿ ಬ್ಯಾಬ್ಯಾ ಎಂದು ಕೂಗಿಕೊಳ್ಳುತ್ತಿತ್ತು. ಅದರ ಒಂದೊಂದು ಬಾರಿಯ ಸದ್ದೂ ಏಳು ಸಮುದ್ರಗಳ ಆಚೆಗಿನ ಏಳು ಬೆಟ್ಟ ಕಣಿವೆಗಳ ದಾಟಿ ಅನಂತ ದಿಗಂತಗಳ ಮೇರೆ ಮೀರಿ ಹೋಗುವಂತೆ ದೀನವಾಗಿ ಯಾರನ್ನೋ ಕರೆಯುತ್ತಿತ್ತು. ಇಡೀ ಮನೆ ಸೇರಿ ಊರು ಸೀಮೆ ಬಟಾಬಯಲು ಎಲ್ಲವೂ ಆ ಕರೆಯನ್ನು ಕೇಳಿಸಿಕೊಳ್ಳಲಾರದೆ ಅವುಗಳ ಪಾಡಿಗೆ ಅವು ತಮ್ಮ ಕರ್ಮದಲ್ಲಿ ಕರಗುತ್ತಿದ್ದವು. ಪ್ರಾಣವನ್ನೆ ಉಸಿರಿಗೆ ತುಂಬಿ ಆಕಾಶದ ಆಚೆ ತುದಿತನಕ ಮೊರೆಯಿಡುವಂತೆ

ಕುರಿಯು ಬಡಿದುಕೊಳ್ಳುತ್ತಲೆ ಇತ್ತು. ಕರಿಯ ಎದ್ದು ಹೋಗಿ ಅದರ ಕೊರಳ ತಬ್ಬಿ ಅಳತೊಡಗಿದ. ಇಡೀ ಮನೆ ನರಳಿಕೆಯ ಗೊರಕೆಯಲ್ಲಿ ಸಮಾಧಿಯಂತೆ ಮಲಗಿತ್ತು.

ಇನ್ನು ಈ ಕುರಿಯನ್ನು ಹೀಗೇ ಬಿಟ್ಟರೆ ನಾಳೆ ಇದಕ್ಕೂ ಅದೇ ಗತಿ ಎಂದು ಕರಿಯ ನಿರ್ಧರಿಸಿದ. ಒಟ್ಟಿಗೇ ಇದ್ದ ಕುಟುಂಬದಲ್ಲಿ ಯಾವುದೂ ಯಾರಿಗೂ ಸಂಬಂಧಿಸಿದ್ದೇ ಆಗುತ್ತದೆಂದು ಚಿಕ್ಕಪ್ಪ ಜಗಳದಲ್ಲಿ ಹಕ್ಕು ಚಲಾಯಿಸಿದ್ದ. ದೇವರ ಸೃಷ್ಟಿಯಲ್ಲಿ ಎಲ್ಲ ಪ್ರಾಣಿಗಳಿಗೂ ಜೀವಿಸುವ ಸಮಾನ ಹಕ್ಕಿದೆ ಎಂದು ಪಾದ್ರಿಯು ಹೇಳಿದ್ದು ಕರಿಯನ ಪ್ರಜ್ಞೆಯ ಪಾತಾಳದಲ್ಲಿ ಒಮ್ಮೆ ಕೇಳಿಸಿ ಮರೆಯಾಯಿತು. ಕುರಿ ಅನಾಥವಾಗಿ ರೋದಿಸುತ್ತಲೆ ಇತ್ತು. ಮೆಲ್ಲಗೆ ಕುರಿಗೆ ಕಟ್ಟಿದ್ದ ಹಗ್ಗ ಬಿಚ್ಚಿಕೊಂಡು ಬೀದಿಯ ಸಂಪುದಾರಿಯ ದಾಟಿ ಊರ ಮುಂದಿನ ದ್ವಾರ ಬಾಗಿಲ ಆಚೆ ಬಂದು ದೂರದ ಕೆರೆ ಬಯಲು ತಲುಪಿ ಅಲ್ಲಿದ್ದ ಹಳ್ಳವನ್ನು ಅಂತಹ ಅಮವಾಸ್ಯೆಯ ಕತ್ತಲಲ್ಲೂ ಕ್ರಮಿಸಿ ಬೆಟ್ಟದ ಬುಡಕ್ಕೆ ಹೋಗಿ ಪೊದೆಗಾಡಿನ ಒಳಕ್ಕೆ ಕುರಿಯನ್ನು ಬಿಟ್ಟು, ಮತ್ತೆಂದೂ ನಮ್ಮ ಮನೆಗೆ ಬರಬೇಡ, ಎಲ್ಲಿಯಾದರೂ ಹೋಗಿ ಬದುಕಿಕೊ ಎಂದು ಹಗ್ಗ ಬಿಚ್ಚಿ ಹಿಂತಿರುಗಿ ನೋಡದೆ ದೌಡಾಯಿಸಿ ಬಂದು ಅದೇ ಕತ್ತಲ ಕೂಪದ ಬಾಗಿಲು ಸರಿಸಿ ಕೊಟ್ಟಿಗೆಯ ಮೂಲೆಯಲ್ಲಿ ಮಲಗಿಬಿಟ್ಟ. ನಿದ್ದೆಯು ಹೆಬ್ಬಾವಿನಂತೆ ಮನೆಯನ್ನು ಸುತ್ತಿಕೊಂಡಿತ್ತು.

ನಿದ್ದೆಯಲ್ಲೂ ಕರಿಯನ ಮನಸ್ಸು ತತ್ತರಿಸುತ್ತಿತ್ತು. ಅದೇ ಅಪ್ಪ ಅದೆ ಚಿಕ್ಕಪ್ಪ ಇಬ್ಬರೂ ಒಂದೊಂದು ಕೊಂಬಿನ ಟಗರಾಗಿ ಗುದ್ದಾಡಿಕೊಳ್ಳುತ್ತಿದ್ದರು. ಒಬ್ಬೊಬ್ಬರ ಪಕ್ಕೆಲುಬುಗಳು ಮುರಿದರೂ ಜಿದ್ದು ಎದ್ದೆದ್ದು ಗುದ್ದಾಡುತ್ತಿದ್ದರು. ಕೊಳಕಣ್ಣಿ ಪುಂಡರ ಸಂತೆಯಲ್ಲಿ ಹಲ್ಲು ಗಿಂಜುತ್ತಿದ್ದ. ಚಿಕ್ಕಪ್ಪ ಅಪ್ಪನನ್ನು ಮುಗಿಸಿ ಅದೇ ಭೀಭತ್ಸ ಕೊಂಬುಗಳನ್ನು ಚೂಪು ಮಾಡಿಕೊಂಡು ಕೆನೆಯುತ್ತಿದ್ದ. ರಾತ್ರಿಯ ನಿದ್ದೆ ತುಂಬ ಅದೇ ದುಸ್ವಪ್ನ ಬಿರಿಯುತ್ತಿತ್ತು. ಮುಂಗೋಳಿ ಕೂಗಿ ಮೂಡಲಲ್ಲಿ ಚಿನ್ನದ ಬೆಳಕು ತೇಲಿ ಬರುತ್ತಿತ್ತು. ಅಂತೂ ಆ ಒಂದು ಕುರಿಯಾದರೂ ತಪ್ಪಿಸಿಕೊಂಡಿತಲ್ಲಾ ಎಂದು ಕರಿಯ ಭಾರವಾದ ಮನಸ್ಸಿಂದ ಎದ್ದ. ಅವನ ತಾಯಿ ಬೀರವ್ವ ಮನೆ ಮುಂದಿನ ಕಸಗುಡಿಸಿ ಹಿತ್ತಿಲಿಗೆ ಬಂದು ಎಂದಿನಂತೆಯೆ ಸೂರ್ಯದೇವನಿಗೆ ನಮಸ್ಕರಿಸಲು ಕೈಮುಗಿದು ನಿಂತಳು. ಇಡೀ ಮೂಡಲು ಸೂರ್ಯ ಪ್ರಭೆಯಲ್ಲಿ ರೇಷ್ಮೆ ಸೀರೆಯನ್ನು ಒಣ ಹಾಕಿರುವಂತೆ ಗೋಚರಿಸಿ

ಆಕೆಯ ಮನಸ್ಸು ಅರಳಿತು. ಹಜಾರ ದಾಟಿ ಪಡಸಾಲೆಗೆ ಬಂದು ನೋಡಿದರೆ ಅದೇ ಚಿಕ್ಕಪ್ಪ ಕಾಲಿನ ಮೇಲೆ ಕಾಲು ಹಾಕಿಕೊಂಡು ಬೀಡಿ ಸೇದುತ್ತ ಆಕಾಶ ನೋಡುತ್ತಿದ್ದ. ಅವನ ಕಾಲ ಬಳಿ ದೀನವಾಗಿ ಯಾರೋ ಕುಳಿತಿರುವಂತೆ ಕಂಡಿತು. ನೋಡಿದರೆ ಅದೇ ಆ ರಾತ್ರಿ ತಾನೆ ದೂರ ಹೋಗೆಂದು ಬಿಟ್ಟು ಬಂದಿದ್ದ ಕುರಿಯೇ ಈಗ ಮತ್ತೆ ಹಿಂತಿರುಗಿ ಬಂದು ನೀನೇ ನನ್ನ ಕರುಣಾಳು ಎಂಬಂತೆ ಚಿಕ್ಕಪ್ಪನ ಕಾಲನ್ನು ಮೂಸುತ್ತ ನಿನ್ನ ದಯೆಯೇ ನನ್ನ ಜೀವವಯ್ಯಾ ಎಂದು ಬೇಡುತ್ತ, ನೆಲ ನೋಡುತ್ತ ದಣಿದು ಕುಳಿತಿತ್ತು. ಕರಿಯನ ಕಣ್ಣ ತುಂಬ ಕಂಬನಿ ಬಟ್ಟಾಡುತ್ತಿದ್ದವು. ಅಪ್ಪ ನಿದ್ದೆಯಿಂದ ಇನ್ನೂ ಮೇಲೆದ್ದಿರಲಿಲ್ಲ. ಬಾಲಗ್ರಹದ ಎಲ್ಲ ಕ್ರಿಯಾವಿಧಿಗಳನ್ನು ಮುಗಿಸಿ ಯಾವುದೊ ಕೇಡನ್ನು ಗೆದ್ದು ಬಂದಂತೆ ಅದೇ ತಾತನು ಮನೆ ಮುಂದೆ ನಿಂತು ಅಜ್ಜಿಯನ್ನು ಕರೆದು ನೀರು ಕೊಡೇ ಎನ್ನುತ್ತಿದ್ದ. ಆ ಕುರಿ ಸುಮ್ಮನೆ ಎಲ್ಲರನ್ನು ಅಮಾಯಕವಾಗಿ ನೋಡುತ್ತಿತ್ತು.

## ಓದು ಪತ್ಯ

# ಮಗು ಕಲಿಸಿದ ಪಾಠ

**– ತಿರುಮಲೆ ರಾಜಮ್ಮ (ಭಾರತಿ)**

ಕೇವಲ ಅನಾಗರಿಕರಾಗಿ ತಾವು ಮನುಷ್ಯರೆಂಬ ಅರಿವೇ ಇಲ್ಲದೆ ಮೃಗಗಳಂತೆ ಕಾಡುಮೇಡುಗಳಲ್ಲಿ, ಬೆಟ್ಟಗುಡ್ಡ, ಗುಹೆಗಳಲ್ಲಿರುತ್ತ ಬದುಕುತ್ತಿದ್ದ ಕಾಡುಜನರ ಗುಂಪೊಂದಿತ್ತು, ಈಗಲೂ ಇರಬಹುದು. ಆ ಜನರಿಗೆ 'ಹಾಲೆಕ್ಕ' ರೆಂದು ಹೆಸರು. ಅವರೂ ಹಾಗೆಯೇ ಕೂಗುತ್ತಾ ನಿಂತಲ್ಲಿ ನಿಲ್ಲದೆ ತಿರುಗುವುದು, ಎಲ್ಲಿ ಏನು ಸಿಕ್ಕಿದರದನ್ನು ಜೀವಧಾರಣ ಮಾಡುವುದು. ಇದು ಅವರ ಪದ್ಧತಿ. ಅವರು ಮಾಂಸಾಹಾರಿಗಳು, ನರಭಕ್ಷಕರು. ಸಮಯ ಹೊಂಚಿದ್ದು ಯಾರನ್ನಾದರೂ ಎತ್ತಿಕೊಂಡು ಹೋಗಿ ಒಬ್ಬೊಬ್ಬರಾಗಿ ಹಾಗೆಯೇ ಆ ದೇಹವನ್ನು ಕಚ್ಚಿ ತಿನ್ನುವಂತಹ ಪಿಶಾಚ ಪ್ರಕೃತಿಯ ಆ ಜನಕ್ಕೆ ಮನುಷ್ಯರಿಗೂ ಮೃಗಗಳಿಗೂ ವ್ಯತ್ಯಾಸವೇನೋಅದೂ ಸಹ ತಿಳಿಯದು, ನೋವು ಅಂದರೇನೊ ಆ ಕಲ್ಪನೆಗೆ ಆಸ್ಪದವೇ ಇಲ್ಲ. ಒಂದೊಂದು ಸಲ ಅವರು ಊರುಗಳ ಕಡೆಗೂ ಬರುವುದು ಉಂಟು. ಒಂದೆರಡು ದಿನಕ್ಕಿಂತ ಹೆಚ್ಚಾಗಿ ಎಲ್ಲಿಯೂ ನಿಲ್ಲು ವುದಿಲ್ಲ. ಆ ಗುಂಪಿಗೆ ಸುಬ್ಬ ಯಜಮಾನ. ಅವನು ಹೇಳಿದಂತೆ ಇನ್ನೆಲ್ಲರೂ ನಡೆದುಕೊಳ್ಳಬೇಕು.

ಒಂದು ಸಲ ನಾಲ್ಕೈದು ಜನ ಒಟ್ಟಿಗೆ ಸಣ್ಣದೊಂದೂರಿಗೆ ಬಂದರು. "ಹಾಲೆಕ್ ಎಂದು ಕೂಗಿಕೊಳ್ಳುತ್ತಾ ಒಬ್ಬೊಬ್ಬರು ಒಂದೊಂದು ಹಾದಿ ಹಿಡಿದು ಹೋದರು, ಅದರಲ್ಲಿ ಒಬ್ಬನು ಹಿಡಿದು ಹೊರಟ ದಾರಿ ನೇರವಾಗಿ ಊರೊಳಕ್ಕೆ ಸಾಗಿತ್ತು. ಅವನು ಊರೊಳಗೆ ಅಲ್ಲಲ್ಲಿ ಸುತ್ತಾಡಿ ಒಂದು ಸಂದಿಗೆ ತಿರುಗಿದ. ಅಲ್ಲಿ ಎರಡು ಕಡೆಗೂ ಕೆಲವು ಮನೆಗಳಿದ್ದವು, ಬಡವರ ಮನೆಗಳು

ಒಂದು ಮನೆಯ ಬಾಗಿಲು ಸ್ವಲ್ಪ ಓರೆಮಾಡಿತ್ತು. ಒಬ್ಬ ಹೆಣ್ಣುಮಗಳು, ಮಗುವನ್ನು ಮಡಿಲಲ್ಲಿಟ್ಟುಕೊಂಡು ಹಾಲುಣಿಸುತ್ತಿದ್ದಳು. ಮಗು ಹಾಗೇ ನಿದ್ದೆ ಮಾಡಿತು. ಅದು ಪಡಸಾಲೆ, ಅಲ್ಲಿಯೇ ಒಂದು ಪಕ್ಕಕ್ಕೆ ತೊಟ್ಟಿಲು. ಮಗುವನ್ನು ಆಕೆ ತೊಟ್ಟಿಲಲ್ಲಿ ಮಲಗಿಸಿ, ಹೊದಿಸಿ, ಏನೋ ನೆನಸಿಕೊಂಡು ಒಳಗೆ ಹೋದಳು.

ದೂರದಿಂದ ಹೊಂಚಿನೋಡುತ್ತಿದ್ದ ಹಾಲೆಕ್ಕನು ಕೂಡಲೇ ಒಳಗೆ ನುಗ್ಗಿ, ಆ ಮಗುವನ್ನು ಬಟ್ಟೆಯಲ್ಲಿ ಸುತ್ತಿ ಎತ್ತಿಕೊಂಡು ಓಡಿದ, ಬಾಗಿಲನ್ನಿಕ್ಕಲು ಬಂದ ತಾಯಿ, ಮಗು ನಿದ್ದೆ ಮಾಡುತ್ತಿದೆ ಎಂಬ ನಂಬಿಕೆಯಿಂದ ತೊಟ್ಟಿಲು ಕಡೆ ನೋಡದೆ, ಮನೆಗೆಲಸಗಳಿಗೆ ಒಳಕ್ಕೆ ಹೋದಳು.

ಊರ ಹೊರಗೆ, ಮನುಷ್ಯ ಸಂಚಾರ ಇಲ್ಲದ ಒಂದು ಕಡೆ, ಆ ಗುಂಪಿನ ಯಜಮಾನ ತನ್ನವರಿಗಾಗಿ ಕಾಯುತ್ತ ಇದ್ದಾನೆ. ಮೂರು ಕಡೆ ಹೋಗಿದ್ದವರು ಬರಿಗೈಯ್ಯಲ್ಲಿ ಬಂದರು. ನಾಲ್ಕನೆಯವನು ಒಂದು ಬಟ್ಟೆ ಸುತ್ತಿದ ವಸ್ತುವಿನೊಂದಿಗೆ ಬಂದು ಅದನ್ನು ಯಜಮಾನನ ಮುಂದೆ ಒಪ್ಪಿಸಿದ ಯಜಮಾನ ಅದನ್ನು ಬಿಚ್ಚಿ ನೋಡಿದ–ಎಳೆ ಮಗು, ಅವರಿಗಾದ ಸಂತೋಷಕ್ಕೆ ಪಾರವೇ ಇಲ್ಲ. ಅದು ಅಂದಿನ ಅವರ ಸಮಾರಾಧನೆಯ ಸಂತೋಷ, ಎಂತಹ ಒಳ್ಳೆ ತಿನಿಸನ್ನು ತಂದೆಯೋ ಎಂದು ಅದನ್ನು ತಂದವ ನನ್ನು ಎಲ್ಲರೂ ಹೊಗಳಿದರು. ಮೊದಲು ಯಜಮಾನ ಅವನಿಗಿಷ್ಟವಾದ ಭಾಗವನ್ನು ಕಚ್ಚಬೇಕು. ಕಿವಿಯೋ, ಮೂಗೋ, ಕೈಯೋ, ಏನೊ ಒಂದು ಅವನು ತೀರ್ಮಾನಿಸಿ ಅವನಿಷ್ಟ ಪೂರ್ತಿಯಾದ ಮೇಲೆ ಇತರರ ಸರದಿ. ಅದರಂತೆ ಅವನು ಆ ಮಗುವನ್ನು ಎರಡು ಕೈಗಳಲ್ಲೂ ಎತ್ತಿಕೊಂಡು ದಿಟ್ಟಿಸಿ ನೋಡಿದ. ಆ ಮಗು ಮುದ್ದಾಗಿತ್ತು. ಆಗತಾನೇ ಅವನ ಕೈ ಸೋಕಿ ಎಚ್ಚರಗೊಂಡಿತು. ಕಣ್ಣು ಬಿಟ್ಟಿತು. ವಿಶಾಲವಾದ ನೀಲನೇತ್ರಗಳು ಪಳಪಳ ಹೊಳೆಯತ್ತಾ ಇದ್ದವು. ಮೋಹಕವಾದ ಆ ಮಗುವಿನ ಮುಖವನ್ನು ಅವನು ಹಾಗೆಯೇ ದಿಟ್ಟಿಸಿ ನೋಡುತ್ತಿದ್ದ, ಮಗು ಅವನ ಮುಖವನ್ನು ಹಾಗೆಯೇ ನೋಡಿತು. ಆ ಕ್ರೂರ ಮುಖವನ್ನು ನೋಡಿ ಗಾಬರಿಯಿಂದ ಚೀತ್ಕಾರ ಮಾಡುವ ಬದಲು ಆ ಮಗು ಕಿಲಕಿಲ ನಕ್ಕಿತು, ಅದನ್ನು ಕಂಡು ಅವನಿಗಾಶ್ಚರ್ಯವಾಯಿತು. ಹಿಂದಿನ ಎಷ್ಟೋ ಸಂದರ್ಭಗಳ ಅನುಭವಕ್ಕೆ ಈ ಸಂದರ್ಭ ತೀರ ವಿರುದ್ಧವಾಗಿ ಕಂಡಿತು. ಎಲಾ! ಇದೇನು? ಎಂದು ಅವನು ಭ್ರಮಿತನಾಗಿ ನುಡಿದು ಮಗುವನ್ನು ಅರಿಯಲಾಗದ ತವಕದಿಂದ ನೋಡತೊಡಗಿದ. ಅವನಿಗೆ ತಡೆಯಲಾಗದ ಏನೋ ಒಂದು ಬಗೆಯ ಸಂಕಟವಾಯಿತು. ಮಗುವು ಅದನ್ನು ಕಂಡು ಎವೆಯಿಕ್ಕದೆ ಅವನನ್ನು ನೋಡಿ ಪುನಃ ಪಕಪಕ ನಕ್ಕಿತು. ಆ ಕಣ್ಣುಗಳನ್ನ ಮುದ್ದು ಮುಖವನ್ನೂ ನಿರ್ಮಲವಾದ ಆ ಎಳೆ ನಗೆಯನ್ನೂ ಎಷ್ಟೇ ನೋಡಿದರೂ ಸಾಲದು ಎಂದು ಅನಿಸಿತು. ಅವನು ತನ್ನ ಕೆಲಸ ವಷ್ಟೇ ಅಲ್ಲದೆ ತನ್ನನ್ನೇ ಮರೆತ ಆ ಸ್ಥಿತಿಯಲ್ಲಿ

ಅವನ ಪ್ರಯತ್ನ ಇಲ್ಲ ದೆಯೇ ಅವನ ಕೈ ಮಗುವಿನ ಗಲ್ಲವನ್ನು ಮುಟ್ಟಿತು. ಆ ಸ್ಪರ್ಶದಿಂದ ಅವನಿಗೆ ಎಂದೂ ಇಲ್ಲದ ಸುಖಾನುಭವ ಆಯಿತು. ಮಗು ನಗುತ್ತಲೇ ಇತ್ತು. ಆ ನಗೆ ಏನೋ ಒಂದು ಸೂಚನೆ ಮಾಡಿದಂತೆ ತೋರಿತು. ಅವನು 'ಇದೇನಪ್ಪಾ! ನನಗೆ ಏನೇನೋ ಆಗುತ್ತಾ ಇದೆಯಲ್ಲಾ! ಅಬ್ಬಾ! ಇದು ಎಂತಾ ಮಗು ನಗುನಗುತ್ತಾ ನನಗೆ ಏನೇನೋ ತಿಳಿಸುತ್ತಿದೆ. ಕಣ್ಣಿಂದ ಏನೇನೊ ತೋರಿಸುತ್ತಿದೆ–ಅಬ್ಬಬ್ಬಾ! ನನ್ನ ಕೈಲಾಗದು. ಇದನ್ನು ಮುಟ್ಟಿದರೆ ಹಾಳಾಗಿಹೋದೇನು' ಎಂದು ಸುಬ್ಬ ಹೇಳಿದ. ದುಃಖ ತಡೀಲಾರದೆ "ಎಲೋ! ಈ ಮಗೂನ ಎಲ್ಲಿಂದ ತಂದೆ"? ಎಂದು ಕೇಳಿದ. ಮಗುವನ್ನು ತಂದವನು "ಅಲ್ಲೊಂದು ಮನೇಲಿ" ಎಂದ. ಯಜಮಾನ "ಮಗು ಒಂದೇ ಇತ್ತೇನೋ" ಎಂದು ಕೇಳಿದ. ಅದಕ್ಕವನು "ಅದರಮ್ಮ " ಎದೆಯುಣಿಸಿ ತೊಟ್ಟಿಲಲ್ಲಿಟ್ಟು ಒಳಕ್ಕೆ ಹೋದಾಗ ಎತ್ತಿಕೊಂಡು ಓಡಿಬಂದೆ" ಅಂದ ಮಾತಿಗೆ ಯಜಮಾನನ ಕಣ್ಣಲ್ಲಿ ನೀರು ತುಂಬಿತು. "ಅಯ್ಯೋ! ಆ ತಾಯಿ ಕಣ್ಣಲ್ಲೂ ನೀರು ಸುರೀತಿದೆಯೇನೊ! ಅದಕ್ಕೆ ನನಗೂ ಗೊತ್ತಾ ಗಲಿ ಅಂತ ಹೀಗೆ ಕಣ್ಣೀರು ಬರುತ್ತಿದೆ. ಅಪ್ಪಾ! ಈ ಮಗೂನ ಎಲ್ಲಿಂದ ತಂದೆಯೋ ಅಲ್ಲೇ ಬಿಟ್ಟುಬಾ" ಎನ್ನುತ್ತಾ ಅವನು ನಡುಗುವ ಕೈಯಿಂದ ಪುನಃ ಆ ಮಗುವಿನ ಕೆನ್ನೆಗಳನ್ನು ಸವರಿ "ಹೋಗಮ್ಮಕಂದಾ! ನಿನ್ನ ಅಮ್ಮನ ಹತ್ತಿರ" ಎಂದು ಬಟ್ಟೆಯಲ್ಲಿ ಭದ್ರವಾಗಿ ಮಗುವನ್ನು ಸುತ್ತಿ ಅವನ ಕೈಗೆ ಕೊಟ್ಟು ಕಳುಹಿಸಿದ,

ಮಗುವನ್ನೆತ್ತಿಕೊಂಡು ಅದರ ಮನೆಯ ಹತ್ತಿರ ಬಂದವನು ಮತ್ತೆಯೊಳಗೆ ಬಹಳ ಜನ ತುಂಬಿ ಏನೋ ಗಲಭೆಯಾಗುತ್ತಿದ್ದುದನ್ನು ಗಮನಿಸಿದ, ಯಾರೂ ಕಾಣದಂತೆ ಅವನು ಮಗುವನ್ನು ಮನೆಯ ಮುಂದಿನ ಜಗಲಿಯ ಮೇಲೆ ಮಲಗಿಸಿ ಅಲ್ಲಿಂದ ಮಾಯವಾದ ಅಷ್ಟು ಹೊತ್ತೂ ನಗುತ್ತಿದ್ದ ಮಗು ಅಳುವುದಕ್ಕೆ ಮೊದಲುಮಾಡಿತು. ಆ ಅಳುವಿನ ದನಿ ಕೇಳಿ ಮನೆಯಿಂದೆಲ್ಲರೂ ಹೊರಗೆ ಬಂದರು. ಎಲ್ಲರಿಗೂ ಪರಮಾಶ್ಚರವಾಯಿತು, ಆ ತಾಯಿ ಮಗುವನ್ನೆತ್ತಿ ಎದೆಗವಚಿಕೊಂಡು ಆನಂದಬಾಷ್ಪಗಳನ್ನು ಹರಿಸಿದಳು,

ಜಗಲಿಯ ಮೇಲೆ ಮಗುವನ್ನಿಟ್ಟು ಓಡಿದವನು ತನ್ನವರ ಬಳಿಗೆ ಬಂದ, ಯಜಮಾನನ ಮೈ ನಡುಗುತ್ತಿತ್ತು, ದನಿಯೂ ನಡುಗುತ್ತಿತ್ತು. ಅವನು ಎಲ್ಲರನ್ನೂ ಹತ್ತಿರ ಕೂಡಿಸಿಕೊಂಡು ಕೆಲವು ಮಾತುಗಳನ್ನಾಡಿದ. ಅವನ ಮುಖ ಎಂದೂ

ಕಾಣದ ಹೊಸ ಕಳೆಯನ್ನು ತಳೆದಿತ್ತು. ಹೀಗೆಂದು ಹೇಳಲಾಗದ ಒಂದು ಬಗೆಯ ಸಂಕಟ, ಯಾವದೋ ಭಯ ಅವನನ್ನು ಮುತ್ತಿಕೊಂಡಿತ್ತು. ಅವನಿಗೇನಾಯಿತೋ, ಹೀಗೇಕೆ ನಡುಗುವನೋ ಅದನ್ನು ತಿಳಿಯಲಾರದೆ ಬೆರಗಾಗಿ ಅವರೆಲ್ಲಾ ಸುಮ್ಮನೆ ಅವನನ್ನು ನೋಡುತ್ತಾ ಆ ಮಾತುಗಳನ್ನು ಕೇಳುತ್ತಿದ್ದರು, "ಏನ್ರೋ! ಎಂದಾದರೂ ನಮಗೆ ಮೈ ನಡುಗೋದು ಕಣ್ಣಲ್ಲಿ ನೀರು ಬರೋದು ಗೊತ್ತಿತ್ತೆ?" ಎಂದು ಪ್ರಶ್ನೆ ಮಾಡಿದ ಯಜಮಾನ. "ಇಲ್ಲ ಇಲ್ಲ" ಎಂದು ಅವರಿಂದ ಉತ್ತರ ಬಂತು. ಅವನು " ನೋಡೀಪ್ಪಾ! ಒಂದು ಸಲ ನೀವು ಒಬ್ಬ ಮುದುಕನನ್ನು ಹಿಡಿದು ತಂದಿರಿ. ಅದನ್ನು ಮರೆತಿಲ್ಲ ತಾನೇ" ಅಂದ. ಅವರು "ಹೌದೌದು, ಆತ ಹೆಗಲಮೇಲಿಂದ ದಾರ ಇಳಿಬಿಟ್ಟು ಕೊಂಡಿದ್ದ ಅಂದರು. "ಅತ ಏನೇನಂದ ಅದೆಲ್ಲಾ ಈಗ ನಿಜವೇ ಆಯಿತಲ್ಲಾ! ಮನುಷ್ಯರಾಗಿ ಇಂತಾ ಪಾಪ ಮಾಡೋದೇ" ಅಂದ, ಆಮೇಲೆ "ಅಯ್ಯೋ ದೇವರೆ! ನಿನ್ನ ದಯೆ ಏನಾಯ್ತು?" ಅಂತ ಗೋಳಾಡಿದ. 'ಹಾಳಾದ ನಮ್ಮ ಕೈಗಳು ಹಾಗೇ ಮುರಿದುಹೋಗಬಾರದಾಗಿತ್ತೇ? ಅಯ್ಯೋ ಏನೇನೆಲ್ಲಾ ಮಾಡಿದೆವೋ! ಮಾಡಬಾರದ್ದನ್ನೆಲ್ಲಾ ಮಾಡಿದೆವಪ್ಪಾ! ನಮ್ಮ ಕಣ್ಣು ಆಗ ಹಾಗೇ ಇಂಗಿ ಹೋಗಬಾರದಾಗಿತ್ತೇ!" ಆತ ಆಡಿದ್ದು ಆಗ, ಅದೆಲ್ಲಾ ಈಗ ಮಗು ನಕ್ಕಾಗ ಕಿವಿಗೆ ಕೇಳಿಸಿತು. ಆ ಮಗು "ಎಲೋ ನೀನು ಮನುಷ್ಯ ಅಂತ ಹೇಳಿತು, ಆವತ್ತು ಪಾಪ ಅಂತ ಕೇಳಿದ ಮಾತು ಈಗ ಈ ಪಾಪ ಕಿವಿ ಯೊಳಗೆ "ನಿನ್ನದು ಪಾಪ" ಅಂತ ಊದಿ ಹೋಯಿತಲ್ಲಾ! ಹೌದಪ್ಪಾ! ಆ ದೇವರು ಆಗ ಬರಲಿಲ್ಲ. ಈಗ ಈ ಮಗುವಾಗಿ ಬಂದಂತಾಯಿತು. ಮನುಷ್ಯರಿಗೆ ಒಂದು ಭಯ ಬೇಕು, ಹಾಗೆ ದಯೇನೂ ಬೇಕು ಅಂತ ಈಗ ಗೊತ್ತಾಗುತ್ತಿದೆ. ನಾವು ಮನುಷ್ಯರು. ನಮ್ಮನ್ನು ನಾವೇ ಕಿತ್ತು ತಿನ್ನುವುದೇ? ಬೇಡಪ್ಪಾ ಬೇಡ. ಈ ಬದುಕು ಇನ್ನು ಸಾಕು. ಇನ್ನು ಮೇಲೆ ಯಾರ ಜೀವ ತೆಗೆಯೋದೂ ಬೇಡ, ಏನಾರೆ ಸಿಕ್ಕರೆ ತಿನ್ನೋಣ, ಹರಿಯೋ ನೀರು ಕುಡಿಯೋಣ. ಏನೂ ಸಿಕ್ಕಲಿಲ್ಲ ಹಾಗೇ ಹಸಿವನ್ನು ತಡೆಯೋಣ. ನಿಮ್ಮಿಷ್ಟ, ನೀವೆಲ್ಲಿ ಬೇಕಾದರೂ ಹೋಗಿ, ಮನುಷ್ಯರನ್ನು ಮಾತ್ರ ಕಿತ್ತುತಿನ್ನಬೇಡಿ, ನನ್ನ ಜೊತೆಯಲ್ಲಿ. ಬೇಕಾದರೆ ನಾನಿರುವಂತೆಯೇ ನೀವೂ ಇರಬೇಕು ಎಂದು ಯಜಮಾನ ಎದ್ದು ಮುಂದೆ ಹೊರಡಲನುವಾದ. ಅವನ ಅನುಚರರೆಲ್ಲಾ ಮಾತಿಲ್ಲದೆ ಅವನನ್ನೇ ಹಿಂಬಾಲಿಸಿದರು.

# ರಾಷ್ಟ್ರೀಯತೆ

## ಆಶಯ

ಭಾರತದಂತಹ ಬಹುಭಾಷಾ ಸಾಹಿತ್ಯಗಳಲ್ಲಿರುವ ದೇಶದಲ್ಲಿ ಒಂದೊಂದು ಭಾಷಾ ಸಾಹಿತ್ಯವು ತನ್ನದೇ ಆದ ಸಾಂಸ್ಕೃತಿಕ ವಿಲಕ್ಷಣಗಳನ್ನು ಪ್ರಕಟಿಸುವುದರ ಮೂಲಕ ತನ್ನ ರಾಷ್ಟ್ರೀಯತೆಯನ್ನು ಕಾಯ್ದುಕೊಂಡಿದೆ.

ರಾಜಕೀಯ ಅಸ್ತಿತ್ವವುಳ್ಳ ವ್ಯಕ್ತಿಗಳ ಸಮೂಹದ ಒಂದು ದೃಢ ಗುರುತಿಸುವಿಕೆಯನ್ನು ರಾಷ್ಟ್ರೀಯತೆಯು ಒಳಗೊಂಡಿದೆ. ಇದನ್ನು ರಾಷ್ಟ್ರೀಯತೆಯ ವಿಧಾನಗಳಲ್ಲಿ ಒಂದು ರಾಷ್ಟ್ರ ಎಂದು ವ್ಯಾಖ್ಯಾನಿಸಲಾಗಿದೆ. ಹಲವು ಬಾರಿ ಒಂದು ಜನಾಂಗೀಯ ಗುಂಪಿಗೆ ರಾಜ್ಯ ತತ್ವದ ಅಧಿಕಾರವಿದೆ ಎಂಬ ನಂಬಿಕೆ ಇದೆ ಒಂದು ರಾಜ್ಯ ಪೌರತ್ವ ಬರೀ ಒಂದೇ ಜನಾಂಗೀಯ ಗುಂಪಿಗೆ ಸೀಮಿತವಾಗಿರಬೇಕು ಎನ್ನುತ್ತಾರೆ ಒಂದೇ ರಾಜ್ಯದಲ್ಲಿ ಇರಬಹುದಾದ ಬಹು ರಾಷ್ಟ್ರೀಯತೆಯು ಅವಶ್ಯಕವಾಗಿ ವ್ಯಕ್ತಪಡಿಸುವ ಹಕ್ಕನ್ನು ಒಳಗೊಂಡಿರಬೇಕು. ಅಲ್ಪಸಂಖ್ಯಾತರುಗಳಿಂದ ಕೂಡ ರಾಷ್ಟ್ರದ ಗುರುತಿಸುವಿಕೆಯನ್ನು ಕಾರ್ಯಗತ ಮಾಡಬಹುದು.

# 1. ಓ ನನ್ನ ದೇಶಬಾಂಧವರೇ

**–ಡಾ. ಚಂದ್ರಶೇಖರ ಪಾಟೀಲ**

ಓ ಎನ್ನ ದೇಶಬಾಂಧವರೇ, ಅದೋ
ತಲೆ ಎತ್ತಿ ನೋಡಿರಿ. ತಲೆ
ಇಲ್ಲದಿದ್ದರೆ, ಗೋಣೆತ್ತಿ ನೋಡಿರಿ

ಈ ವಿಶಾಲ ರಾಷ್ಟ್ರದ ವಿಶಾಲ ನಭದಲ್ಲಿ
ಭಂವೆಂದು ಬರುತ್ತಿದೆ ಪುಷ್ಪಕ ವಿಮಾನ
ಬಡಿದಿಲ್ಲವೇ ನಿಮ್ಮ ಕರ್ಣಪಟಲಕ್ಕೆ ಇನ್ನೂ
ನಭೋವಾಣಿಯ ಸಂದೇಶ ಗಾನ?

ಬರಲಿದ್ದಾರೆ ಪುಷ್ಪಕ ವಿಮಾನದಲ್ಲಿ ನಮ್ಮ
ಅದೇ ಅದೇ ರಾಮಾಯಣದ ವಿಶ್ವಾಮಿತ್ರ – ಮೇನಕೆಯರು
ಅದೇ ಅದೇ ನಮ್ಮ ಜಗದಂಬೆಯರು
ಕಪ್ಪು ಕನ್ನಡಕ ಹಾಕ್ಕೊಳ್ಳಿರಿ ಬಾಂಧವರೇ,
ಅವರ ಸೂರ್ಯಪ್ರಭೆಯಿಂದ ಕಣ್ಣು ಕಳಕೊಂಡೀರಿ

ಅನ್ನ ಅನ್ನ ಅಂತ ಬಾಯಿ ಬಡಕೊಳ್ಳುತ್ತೀರಲ್ಲ ನೀವು
ನಿಮ್ಮ ತಲೆ ಮೇಲೆ ಅನ್ನದ ಪಾಕೀಟು ಸುರುವುತ್ತಾರೆ
ಸಿಕ್ಕವರು ಸಿಕ್ಕಷ್ಟು ಹೊಡಕೊಳ್ಳಿರಿ ಬಾಂಧವರೇ,
ಹೊಟ್ಟೆಯ ಮುಂದೆ ಜಾತಿ–ಗೀತಿ ಎಲ್ಲ ಮರೆಯುತ್ತದೆ
ಗಡಿಬಿಡಿಯಲ್ಲಿ ಪರಸ್ಪರ ಢಿಕ್ಕಿ ಹೊಡೆವ ಗಂಡು–ಹೆಣ್ಣುಗಳೇ
ಯಾವ ದಕ್ಷಿಣೆಯೂ ಇಲ್ಲದೆ ಪ್ರಜೋತ್ಪತ್ತಿ ಸುರುಮಾಡಿರಿ

ರಣಬಿಸಿಲಿನ ಬಟಾಬಯಲಲ್ಲಿ ನಿಂತ ಜನತಾ ಬಾಂಧವರೇ,
ಪುಷ್ಪಕ ವಿಮಾನದ ಆಕಾಶ ಜೀವಿಗಳು ಅಲ್ಲಿಂದಲೇ
ಬಂಜೆನೆಲಕ್ಕೆ ಬೀಜ ಸುರಿಯಲಿದ್ದಾರೆ.
ಬೀಜ ಮೊಳತು ಸಸಿಯಾಗಿ ಮರವಾಗಿ ಹೆಮ್ಮರವಾಗಿ

ಮುಗಿಲಲ್ಲಿ ಮೋಡ ಕವಿದು ಧೋಧೋ ಮಳೆ ಸುರಿಯುತ್ತದೆ
ನಿಮ್ಮ ಹರಕು ಮುರಕು ಗುಡಿಸಲೆಲ್ಲ ನೆಲಸಮವಾಗುತ್ತವೆ
ಮತ್ತೆ ಅವರೇ ಪುಟ್ಟ ಪುಟ್ಟ ರೆಡಿಮೇಡ್ ಮನೆಗಳನ್ನು
ಪುಷ್ಪಕ ವಿಮಾನದಿಂದಲೇ ಕೆಳಗೆ ಒಗೆಯುತ್ತಾರೆ.

ತಲೆ ಮೇಲೆ ಬಿದ್ದಾವು. ತಲೆ ಉಳಿಸಿಕೊಳ್ಳಿರಿ
ಒಮ್ಮೊಮ್ಮೆ, ಭಾರೀ ಜನಾಗ್ರಹದ ಮೂಲಕ,
ಈ ವಿಮಾನಿಗಳು ಭೂಮಿಗಿಳಿಯುತ್ತಾರೆ.
ಒಂದು ಮಿನಿಟು ನೆಲ ಮುಟ್ಟಿ, ಎರಡೇ ಮಿನಿಟು ಭಾಷಣ ಕುಟ್ಟಿ,
ನಾಲ್ಕನೇ ಮಿನಿಟು ಮತ್ತೆ ನೆಲಬಿಟ್ಟು ಹಾರುತ್ತಾರೆ

ನಿಮ್ಮ ಮಾಮೂಲಿ ಜನ ನಾಯಕರು ನೆಲದಗುಂಟ ಕಾರುಗಳಲ್ಲಿ
ಇರುವೆಗಳಂತೆ ಅವರ ಹೆಜ್ಜೆ ಮೂಡದ ಹಾದಿಯ
ಜಾಡು ಹಿಡಿಯುತ್ತಾರೆ. ಅದರ ಸಿಂಹಾವಲೋಕನ ಮಾಡಿದ
ಖೇಚರರು ತಮ್ಮ ತಮ್ಮೊಳಗೆ ಕಿಚಿಪಿಚಿ ನಗುತ್ತಾರೆ

ಗೋಣೆತ್ತಿದ ಎನ್ನ ದೇಶಬಾಂಧವರೇ, ಇನ್ನು
ಈ ಗೋಣು ಬಗ್ಗಿಸಿರಿ
ಟಾರು ರಸ್ತೆಯ ಮೇಲೆ ನಮ್ಮ ಜನನಾಯಕರ ಕಾರುಗಳ
ಟಾಯರುಗಳ ಗುರುತು ಹೇಗೆ ಪ್ರಿಂಟಾಗಿವೆ, ನೋಡಿರಿ

ಕಪ್ಪು ಕನ್ನಡಕ ಕಳಚಿ, ಬಗ್ಗಿ, ನೋಡಿರಪ್ಪಾ
ಇದೇ ನಿಮ್ಮ ಪ್ರಗತಿಯ ಹೆಜ್ಜೆ
ಇದೇ ನಮ್ಮ ಮೋಕ್ಷದ ಹಾದಿ
ಅಯ್ಯೋ, ಎನ್ನ ದೇಶ ಬಾಂಧವರೇ...

# ರಾಷ್ಟ್ರೀಯತೆ ಒಂದು ಪರಿಕಲ್ಪನೆ:ಕೆಲವು ಟಿಪ್ಪಣಿಗಳು

**–ಡಾ. ಡಿ.ಆರ್. ನಾಗರಾಜ್**

**–1–**

ನಾಲ್ಕೈದು ದಶಕಗಳ ಹಿಂದೆ ಭಾರತದಲ್ಲಿ ಈ ವಿಷಯದ ಬಗ್ಗೆ ಮಾತನಾಡಿದ್ದರೆ ಅದು ಸಹಜವಾಗಿ ವೀರಾವೇಶದ ದನಿಯಲ್ಲಿ ಇರುತ್ತಿತ್ತು. ಹಾಗೆಯೇ ಅದು ಪಶ್ಚಿಮದಲ್ಲಾಗಿದ್ದರೆ ವಿಷಾದ, ನಾಚಿಕೆ ಗಳಿಗೆ ದಾರಿಯಾಗುತ್ತಿತ್ತು. ಎರಡೂ ಕಡೆಯ ಸಾಹಿತ್ಯಗಳಲ್ಲಿ ಇದು ಪ್ರತಿಫಲಿಸಿದ ಕ್ರಮವೂ ಹಾಗೆಯೇ. ಭಾರತದಲ್ಲಿ ರಾಷ್ಟ್ರೀಯತೆ ಸಾಹಿತ್ಯದ ನರನಾಡಿಗಳಲ್ಲಿ ಬೆರೆತು ಹೋಗಿದ್ದರೆ, ಪಶ್ಚಿಮದಲ್ಲಿ ರಾಷ್ಟ್ರೀಯತೆಯನ್ನು ಕಂಡು ಬೆದರಿದವರೇ ಹೆಚ್ಚು. ಇಂಥವರಲ್ಲಿ ಈ ಗಳಿಗೆಯಲ್ಲಿ ನನಗೆ ತಕ್ಷಣ ನೆನಪಾಗುವವರು ಆರ್ವೆಲ್ ಮತ್ತು ಬರ್ನಾಡ್ ಶಾ. ಇನ್ನು ತತ್ವಜ್ಞಾನಿಗಳಲ್ಲಿ ರಸೆಲ್ ಅಂತೂ ರಾಷ್ಟ್ರೀಯತೆಯ ಬಗ್ಗೆ ಅತ್ಯಂತ ಉತ್ಕಟವಾಗಿ ವಿರೋಧಿಸಿದ್ದು ಇವತ್ತಿಗೂ ಅನೇಕ ವಿಷಯಗಳಲ್ಲಿ ಪ್ರಸ್ತುತ. ಆತ ವ್ಯಂಗ್ಯವಾಗಿ ರಾಷ್ಟ್ರೀಯತೆಯ ಪರಿಕಲ್ಪನೆಯ ಹಿಂದಿರುವ ಗೋಸುಂಬೆತನವನ್ನು ಚುಚ್ಚುತ್ತಾ ಹೇಳಿದ: ದೇಶಭಕ್ತರು ನಾಡಿಗಾಗಿ ಬಲಿದಾನದ ಮಾತನಾಡುತ್ತಾರೆ, ಆದರೆ ಕೊಲ್ಲುವ ಮಾತನ್ನಲ್ಲ. (ಎರಡೂ ಒಂದೇ ತಾನೆ?)

ಈ ರಾಷ್ಟ್ರೀಯತೆ ಎನ್ನುವ ಪರಿಕಲ್ಪನೆ ಆಧುನಿಕ ಜಗತ್ತಿನಲ್ಲಿ ಎತ್ತರದ "ತ್ಯಾಗ ಬಲಿದಾನಗಳಿಗೆ', ಹಾಗೆಯೇ ಹಿಂದೆಂದೂ ಕಾಣದಿದ್ದ ರಕ್ತಪಾತ, ನರ ಹತ್ಯಾಕಾಂಡಕ್ಕೆ ಕಾರಣವಾಗಿದೆ. ಹೀಗಾಗಿ, ಇದರ ಬಗ್ಗೆ ಮಾತನಾಡುವಾಗ ಅತ್ಯಂತ ಎಚ್ಚರಿಕೆಯಿಂದಲೇ ಮುಂದುವರಿಯಬೇಕಾಗಿದೆ. ರಾಷ್ಟ್ರೀಯತೆ ಅಂತಿಮವಾಗಿ ಅಪ್ರಸ್ತುತ ಹಾಗೂ ಹಾನಿಕಾರಕ; ಅಂತರರಾಷ್ಟ್ರೀಯವಾದ, ವಿಶ್ವೈಕ್ಯವೇ ಮನುಕುಲದ ಮಹತ್ವದ ಆದರ್ಶ ಎಂಬುದನ್ನು ಬೇರೆ ಬೇರೆ ರೂಪಗಳಲ್ಲಿ ಇಡೀ ಜಗತ್ತು ಈ ಶತಮಾನದಲ್ಲಿ ಒಪ್ಪಿಕೊಂಡಿತ್ತು. ಆದರೆ, ಭಾರತದಲ್ಲಿ ಅಂತರರಾಷ್ಟ್ರೀಯತೆಯ, ವಿಶ್ವನಾಗರಿಕತೆಯ ಮೌಲ್ಯಗಳೇ ಅನಾಕರ್ಷಕವಾಗಿಬಿಟ್ಟಿವೆ ಎಂಬ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಬಗ್ಗೆ ಮಾತನಾಡುವುದು ತಾತ್ವಿಕವಾಗಿ ಇನ್ನಷ್ಟು ಜಟಿಲವಾದ ಸಮಸ್ಯೆ.

ಈ ರಾಷ್ಟ್ರೀಯತೆ ಎನ್ನುವ ಪರಿಕಲ್ಪನೆಯನ್ನು ಮಾರ್ಕ್ಸ್‌ವಾದ ಗ್ರಹಿಸುವ, ವಿವರಿಸುವ ಕ್ರಮ ಬೇರೆ, ಪೌರಾತ್ಯ ಚಿಂತನಾ ಕ್ರಮಗಳು ವಿವರಿಸುವ ನೆಲೆ ಬೇರೆ. ರಾಷ್ಟ್ರೀಯತೆಯ ಶಕ್ತಿ ಮತ್ತು ಮಿತಿಗಳನ್ನು ಮಾರ್ಕ್ಸ್‌ವಾದ ಸಮರ್ಥವಾಗಿ ವಿವರಿಸುತ್ತದೆಯಾದ್ದರಿಂದ, ಆ ಗ್ರಹಿಕೆಯ ವಿಧಾನವನ್ನು ಅಳವಡಿಸಿಕೊಂಡು ಇಲ್ಲಿ ಮುಂದುವರೆಯುವುದು ಸೂಕ್ತವಾಗಿ ನನಗೆ ಕಂಡಿದೆ.

ರಾಷ್ಟ್ರೀಯತೆ ಎನ್ನುವುದು ಮುಖ್ಯವಾಗಿ ಬಂಡವಾಳಶಾಹಿ ಚಾರಿತ್ರಿಕ ಘಟ್ಟದ ಸೃಷ್ಟಿ, ಲೆನಿನ್ ಇದನ್ನು ಪೌರಾತ್ಯ ನಾಡುಗಳಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ' ಎಂಬ ಬರಹದಲ್ಲಿ ವಿವರವಾಗಿ ಚರ್ಚಿಸುತ್ತಾನೆ. ಅದರಲ್ಲಿಯೂ ಫ್ಯೂಡಲ್ ಶಕ್ತಿಗಳ ಆ ಚಾರಿತ್ರಿಕ ಘಟ್ಟದ ವಿರುದ್ಧ ಸಂಪೂರ್ಣ ಜಯವನ್ನು ಬಂಡವಾಳಶಾಹಿ ಸಾಧಿಸುವುದು ಈ ಸೈದ್ಧಾಂತಿಕ ನೆಲೆಗಟ್ಟಿನಲ್ಲಿಯೇ, ಮಾರ್ಕ್ಸ್ ಕೂಡಾ ಈ ರಾಷ್ಟ್ರೀಯ ಪ್ರಶ್ನೆಯನ್ನು ತನ್ನ ಕೃತಿಗಳಲ್ಲಿ ಚರ್ಚಿಸಿದ್ದರೂ ಅದು ತನ್ನ ತಾತ್ವಿಕ, ರಾಜಕೀಯ ಪರಿಣತಿಯನ್ನು ಸಾಧಿಸಿದ್ದು ಲೆನಿನ್‌ನಲ್ಲಿಯೇ.

ರಾಷ್ಟ್ರೀಯತೆಯ ಪ್ರಮುಖ ಲಕ್ಷಣವಾಗಿ ಈ ಕೆಳಗಿನವುಗಳನ್ನು ಪಟ್ಟಿ ಮಾಡಬಹುದು. ಈ ಲಕ್ಷಣಗಳು ವಾಸ್ತವದ ರೂಪದಲ್ಲೇ ಇರಬೇಕೆಂದೇನಿಲ್ಲ. ಸೈದ್ಧಾಂತಿಕ ಆದರ್ಶದ ರೂಪಗಳಲ್ಲೇ ಇವು ವಾಸ್ತವವಾಗುವ ಚಾರಿತ್ರಿಕ ಪ್ರಕ್ರಿಯೆ ಪ್ರಾರಂಭವಾಗುವುದು.

1. ಸಮಾನ ಪ್ರಾದೇಶಿಕತೆ [ಕಾಮನ್ ಟೆರಿಟೆರಿ]

2. ಸಮಾನ ಮಾರುಕಟ್ಟೆ

3. ಸಮಾನ ಭಾಷೆ [ಹಲವಾರು ಭಾಷೆಗಳಿದ್ದರೂ ಸರಿ ಎಂಬ ನಿಲುವು ಕೂಡಾ ಸಮರ್ಥನೀಯವೇ, ಉದಾ: ಭಾರತ, ರಷ್ಯ ಮುಂತಾದೆಡೆಗಳಲ್ಲಿ]

4, ರಾಷ್ಟ್ರೀಯ ಪ್ರಭುತ್ವ [ನೇಷನ್ ಸ್ಟೇಟ್ ಎಂದರ್ಥದಲ್ಲಿ)

5. ಸಮಾನ ಮಾನಸಿಕ ಸ್ವರೂಪ [ಇದನ್ನೇ ಕೆಲವರು ಹಿಗ್ಗಿಸಿ ಸಂಸ್ಕೃತಿ ಎಂಬರ್ಥದಲ್ಲಿ ಬಳಸುವುದುಂಟು].

ಸಾಹಿತ್ಯ ಚರ್ಚೆಯಲ್ಲಿ ನಮಗೆ ಅತ್ಯಂತ ಹೆಚ್ಚು ಪ್ರಸ್ತುತವಾದ ಕ್ಷೇತ್ರ ಲಕ್ಷಣ ಎಂದರೆ ಪಟ್ಟಿಯಲ್ಲಿರುವ ಕಡೆಯ ಸಂಗತಿ.

**–3–**

ವಸಾಹತುಗಳ ಸನ್ನಿವೇಶದಲ್ಲಿ ಈ ರಾಷ್ಟ್ರೀಯತೆಯ ಉಗಮಕ್ಕೆ ಅನೇಕ ಸಂಕೀರ್ಣ ಮುಖಗಳಿವೆ. ಭಾರತದಲ್ಲಂತೂ ರಾಷ್ಟ್ರೀಯತೆಯ ಉಗಮದ ಹಿಂದಿನ ಪ್ರಧಾನ ಪ್ರೇರಣೆ ಪಾಶ್ಚಾತ್ಯ ಸಂಸ್ಕೃತಿಯ, ರಾಷ್ಟ್ರೀಯ ಪ್ರಭುತ್ವದ ಸಂಪರ್ಕ. ಹೀಗಾಗಿ, ಶತ್ರುವಿನ ಜತೆಗೆ ಹೋರಾಡುವಾಗ ಕೂಡಾ ಅವರಿಂದಲೇ ಕಲಿತ, ಬಗ್ಗೆ ಇನ್ನೂ ಹೆಚ್ಚು ಸೂಕ್ಷ್ಮವಾದ, ಸಂಕೀರ್ಣವಾದ ಚರ್ಚೆ ನಡೆಯಬೇಕಾಗಿದೆ. ಏಕೆಂದರೆ, ಭಾರತೀಯ ನವೋದಯದ ಸನ್ನಿವೇಶದಲ್ಲಿ ನಾವು ಕಲ್ಪಿಸಿಕೊಂಡ ರಾಷ್ಟ್ರದ ಪರಿಕಲ್ಪನೆಯಲ್ಲಿ ದೇಸೀಸತ್ವ, ದೇಸೀರೂಪಗಳೆಷ್ಟು, ನಮ್ಮ ಶತ್ರುವಿನ ವಿಚಾರಗಳೆಷ್ಟು ಎಂದು ವಿಂಗಡಿಸಿದಾಗ ಬಹುಶಃ ಗಾಬರಿಯಾಗುವಷ್ಟು ಪರಕೀಯ ಆದರ್ಶಗಳು, ಮತ್ತು ಮೌಲ್ಯಗಳು ಇವೆ. ಈ ಹಿನ್ನೆಲೆಯಿಂದ ಭಾರತೀಯ ನವೋದಯದಲ್ಲಿ ರೂಪುಗೊಂಡ ಭಾರತ ರಾಷ್ಟ್ರದ ಪರಿಕಲ್ಪನೆಯಲ್ಲಿ ಅನೇಕ ಮಹತ್ವದ ವ್ಯತ್ಯಾಸಗಳು ಇವೆ. ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಗಾಂಧಿ ಚಿಂತಿಸಿದ, ಕಲ್ಪಿಸಿದ ಭಾರತದ ಸತ್ವ ಮತ್ತು ರೂಪ ಬೇರೆ; ಹಿಂದೂ ರಾಷ್ಟ್ರೀಯವಾದಿಗಳು ಕಲ್ಪಿಸಿದ ರಾಷ್ಟ್ರದ ಸತ್ವ ಮತ್ತು ರೂಪ ಬೇರೆ. ಈ ಎರಡೂ ರಾಷ್ಟ್ರದರ್ಶನಗಳು ಹೊರಡುವ ನೆಲೆಗಳೂ ಬೇರೆ, ತಲುಪ ಬಯಸುವ ಗುರಿಗಳೂ ಬೇರೆ. ಒಂದೇ ಚಾರಿತ್ರಿಕ ಘಟ್ಟದಲ್ಲಿ ಹೀಗೆ ಭಿನ್ನ ರೀತಿಯ, ಪರಸ್ಪರ ವಿರುದ್ಧ ನೆಲೆಗಳ ರಾಷ್ಟ್ರೀಯತೆಯ ಪರಿಕಲ್ಪನೆಗಳು ಹುಟ್ಟಿದವು ಎಂಬುದು ತುಂಬ ಕುತೂಹಲಕಾರಿ ಸಂಗತಿ. ಮೇಲೆ ಸೂಚಿಸಿದ ಎರಡು ರೀತಿಗಳ ರಾಷ್ಟ್ರಕಲ್ಪನೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಬಹುದು.

ಮೊದಲಿಗೆ ಹಿಂದೂ ರಾಷ್ಟ್ರೀಯವಾದಿಗಳ ರಾಷ್ಟ್ರದ ಪರಿಕಲ್ಪನೆಯನ್ನು ನೋಡಬಹುದು. ಇವರೊಳಗೆ ಆಂತರಿಕ ವ್ಯತ್ಯಾಸಗಳು ಅಲ್ಲಲ್ಲಿ ಇದ್ದರೂ ಒಟ್ಟು ಒತ್ತಾಯದಲ್ಲಿ ಮಾತ್ರ ಸಾಮ್ಯವಿದೆ. ವಿವೇಕಾನಂದ, ತಿಲಕ್ ಮುಂತಾದವರು ಮೂಲಪುರುಷರಾಗಿರುವ ಈ ಆಲೋಚನಾಕ್ರಮ ಭಾರತೀಯ ಬದುಕಿನಲ್ಲಿ ಕ್ಲೈಬ್ಯ ಕ್ಲೀಬತ್ವ ಆಳವಾಗಿ ಬೇರೂರಿದೆ ಎಂದು ನಂಬುತ್ತದೆ. ಇವರಿಗೆ ಅದನ್ನು ಕಂಡರೆ ಭಯ, ತಿರಸ್ಕಾರ. 'ವೀರ್ಯವತ್ತಾದ ಭಾರತವನ್ನು ಅದು ಪೂರ್ಣವಾಗಿ

ನಿರಾಕರಿಸುತ್ತದೆ ಎಂಬ ಕಾರಣಕ್ಕೆ ಅವರಿಗೆ ಭಯ. ಅನೇಕ ಪಾಶ್ಚಾತ್ಯರಿಗೂ ಭಾರತದ ಬಗ್ಗೆ ಇದೇ ಬಗೆಯ ಭಯ ಇತ್ತು ಎಂಬುದು ಇನ್ನಷ್ಟು ಹೊಸ ಪ್ರಶ್ನೆಗಳನ್ನು ತೆರೆಯುತ್ತದೆ. ಆಗಿನ ಪಶ್ಚಿಮಕ್ಕೆ ಅರ್ಥವಾಗುತ್ತಿದ್ದದ್ದು "ವೀರ್ಯವತ್ತಾದ' ರಾಜಕಾರಣದ, ಶೌರ್ಯಾಧಾರಿತ ರಾಜಕಾರಣದ ಪರಿಭಾಷೆ, ರಕ್ತಚೆಲ್ಲುವುದು, ಕೊಲ್ಲುವುದು, ಕೊಲ್ಲಿಸಿಕೊಳ್ಳುವುದು ಸಾಮ್ರಾಜ್ಯ ನಿರ್ಮಾಣದ ಪ್ರಕ್ರಿಯೆಯಲ್ಲಿ ಅನಿವಾರ್ಯ್ಯ ಎಂದು ಅವರು ನಂಬಿದ್ದರು. ಈ ಬಗೆಯ ಕ್ಷಾತ್ರ ಭಾರತವನ್ನು ಕಂಡರೆ ಅವರಿಗೆ ಭಯವಿಲ್ಲ. ಕ್ಷಾತ್ರವನ್ನು ಕಂಡು ಹೆದರದ ಅವರು ಬೆಚ್ಚಿದ್ದು 'ಹೆಣ್ಣಿಗ' ಭಾರತ ಕಂಡು, ಜಡತ್ವದ ಸಾರರೂಪೀ ಭಾರತ ಕಂಡು ಅವರು ವಿವಂಚನೆಗೊಳಗಾದರು. ಗೆಲ್ಲಲಾಗದ – ಅಸಾಧ್ಯ ಶಕ್ತಿಯಾಗಿ ಅವರಿಗೆ ' ಕ್ಲೀಬತ್ವ' ಕಂಡಿತ್ತು. ಇವರಿಗೆ ಬೇಕಾದದ್ದು ಆಧುನಿಕವಾದ ಬಲಿಷ್ಠ ಪ್ರಭುತ್ವ.

ಭಾರತದ ಸಮಕಾಲೀನ ಸ್ಥಿತಿಯ ಬಗೆಗೆ ವಿವೇಕಾನಂದ, ತಿಲಕ್ ಮುಂತಾದವರಿಗೆ ಇರುವ ಅಪಾರ ತಿರಸ್ಕಾರದ ಮೂಲ ಇದೇ, ಮುಂದೆ ಹಿಂದೂ ರಾಷ್ಟ್ರೀಯವಾದಿ ರಾಜಕಾರಣದಲ್ಲಿ ಇದಕ್ಕೆ ಬೇರೆ ಬೇರೆ . ಆಯಾಮಗಳು ಕೂಡಿಕೊಂಡವು. ಅಹಿಂಸೆ ಭಾರತೀಯ ಸಂಸ್ಕೃತಿಯ ಪರಮ ಮೌಲ್ಯ ಎನ್ನುವುದನ್ನು ಈ ಧಾರೆ 'ಒಪ್ಪುವುದಿಲ್ಲ. (ಆರ್.ಎಸ್.ಎಸ್., ಹಿಂದೂ ಮಹಾಸಭೆ ಈ ಧಾರೆಯ ನಂತರದ ರೂಪಗಳು).

ಆದರೆ, ಗಾಂಧಿಯ ರಾಷ್ಟ್ರಕಲ್ಪನೆ ಮೇಲಿನದಕ್ಕಿಂತ ಪೂರ್ಣ ವಿರುದ್ಧ ದಿಕ್ಕಿನಿಂದ ಹೊರಟಿದೆ. ಗಾಂಧಿ ತನ್ನನ್ನು ಅರ್ಧನಾರೀಶ್ವರ ತತ್ವ ಪ್ರತೀಕದ ಜತೆಗೆ ಗುರುತಿಸಿಕೊಂಡದ್ದು ಒಟ್ಟು ಜೀವನ ಕ್ರಮಕ್ಕೆ, ನಾಗರಿಕತೆಯ ನಿರ್ಮಿತಿಗೂ ಹಬ್ಬುವಷ್ಟು ಸಾಂಕೇತಿಕತೆ ಪಡೆದಿದೆ. ಇಲ್ಲಿ 'ಹೆಣ್ಣಿಗತನ' ಎನ್ನುವುದು ಅಪಮಾನಕಾರೀ ಸಂಗತಿಯಲ್ಲ. ಬದಲಾಗಿ, ಮಾನವತೆಯ ಸಾರರೂಪ ಅದು ಹಾಗೆಯೇ, ಅಹಿಂಸೆ ಎನ್ನುವುದು ಇಲ್ಲಿ ಶ್ರೇಷ್ಠಮೌಲ್ಯ. ಈ ನಾಡನ್ನು ಮತೀಯ ಹಿಂಸೆಯಿಂದ ನಾಶವಾಗದಂತೆ ಕಾಪಾಡಿರುವುದು ಈ ಮೌಲ್ಯಗಳೇ ಎನ್ನುವುದು ತುಂಬ ಮುಖ್ಯ ಬಲಿಷ್ಠ ಪ್ರಭುತ್ವವನ್ನು ಇದು ಒಪ್ಪುವುದಿಲ್ಲ.

ಆಧುನಿಕ ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡುವಾಗ ಕೂಡಾ ಈ ಎರಡು ರಾಷ್ಟ್ರಗಳ ಪರಿಕಲ್ಪನೆ – ಹಿಂದೂ ರಾಷ್ಟ್ರವಾದಿಗಳ ನಾಡು ಮತ್ತು ಗಾಂಧಿಯ ನಾಡು – ತುಂಬ ಸಹಾಯಕ. ಅದನ್ನು ಮುಂದೆ ನೋಡಬಹುದು. ಅದಕ್ಕೆ

ಮುಂಚೆ ಚರ್ಚಿಸಬೇಕಾದ ಮೂಲಭೂತ ಸಂಗತಿಯೆಂದರೆ, ಕನ್ನಡ ಸಾಹಿತ್ಯದ ಮೇಲೆ ರಾಷ್ಟ್ರೀಯತೆಯ ಪರಿಕಲ್ಪನೆಯ ಪರಿಣಾಮ ಏನು ಎಂಬುದು,

**–4–**

ಆಧುನಿಕ ಕನ್ನಡ ಸಾಹಿತ್ಯದ ಹಿಂದೆ ಇರುವ ಸೈದ್ಧಾಂತಿಕ ವಿಸ್ತಾರಗಳಲ್ಲಿ ರಾಷ್ಟ್ರೀಯತೆ ಕೂಡಾ ಒಂದು. ಅದು ನಿರ್ದಿಷ್ಟ ಸಾಹಿತ್ಯ ಸ್ವರೂಪದಲ್ಲಿ ಕ್ರಿಯಾಶೀಲವಾಗುವ ಬಗೆಗೆ ವಿಶಾಲವಾದ ಚರ್ಚೆ ಇಲ್ಲಿ ಸಾಧ್ಯವಿಲ್ಲವಾದರೂ, ಸ್ಥೂಲವಾಗಿ ಎರಡು ಅಂಶಗಳನ್ನು ಇಲ್ಲಿ ಗಮನಿಸಬಹುದು. ಇದನ್ನು ಬೇರೆ ಕಡೆಗೂ ಸಲ್ಲುವ ಹಾಗೆ ಸಾಮಾನ್ಯೀಕರಿಸಿ ಕೂಡಾ ಹೇಳಲು ಸಾಧ್ಯವಿದೆ ಅನ್ನಿಸುತ್ತದೆ. ಸಾಹಿತ್ಯದೊಳಗೆ ಅಥವಾ ಅದರ ಹಿನ್ನೆಲೆಯ ರೂಪಿಸುವಿಕೆಯ ಶಕ್ತಿಗಳಲ್ಲಿ ರಾಷ್ಟ್ರೀಯತೆ ಒಂದು ಆಯಾಮವಾದಾಗ ಸಾಹಿತ್ಯದಲ್ಲಿ ಈ ಎರಡು ಆಶಯಗಳು ಪ್ರಧಾನವಾಗುತ್ತದೆ.

1. ಸಾಮಾಜಿಕ ವಿಧಿಯ ಗ್ರಹಿಕೆ (ಸೋಷಿಯಲ್ ಡೆಸ್ಟಿನಿ)

2. ರಾಷ್ಟ್ರೀಯ ವ್ಯಕ್ತಿತ್ವದ ಗ್ರಹಿಕೆ ಮತ್ತು ಶೋಧನೆ

ಇದನ್ನು ವಿವರಿಸುವುದಾದರೆ ಆಧುನಿಕ ಘಟ್ಟಕ್ಕಿಂತ ಹಿಂದೆ ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಅನುಭವ ಎಂದರೆ ವ್ಯಕ್ತಿಯ ಆಧ್ಯಾತ್ಮಿಕ ವಿಧಿ ಅಥವಾ ಗತಿ. ಈ ಪರಿಭಾಷೆಯೊಳಗೇ ಉಳಿದ ವಲಯಗಳು–ಸಾಮಾಜಿಕ, ರಾಜಕೀಯ, ವೈಯಕ್ತಿಕ ಬೆರೆತು ಹೋಗುತ್ತಿದ್ದವು. ಆದರೆ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಟ್ಟು ನಾಡಿನ ಗತಿಯ ಸಾಮಾಜಿಕತೆಯ ಪ್ರಶ್ನೆ ಅತ್ಯಂತ ದೊಡ್ಡ ಆಶಯವಾಗಿ ಬೆಳೆಯಿತು. ಇದರೊಳಗೆ ವ್ಯಕ್ತಿಯ ಗತಿಯ, ವಿಧಿಯ ಪ್ರಶ್ನೆಗಳೂ ಬೆರೆತು ಹೋದವು. 'ಕಾನೂರು ಹೆಗ್ಗಡಿತಿ', ಕಾದಂಬರಿಯನ್ನು ವಿಶ್ಲೇಷಿಸಿದರೆ ಈ ಮಾತಿಗೆ ಅಗತ್ಯವಾದ ಸಮರ್ಥನೆಗಳು ದೊರೆಯುತ್ತವೆ. ಈ ಸಾಮಾಜಿಕ ಗತಿಯ ವಸ್ತು ಪ್ರಕಟವಾಗುವುದು ಒಂದು ಸಂಸ್ಕೃತಿಯ ಅಂತರ್ ಶೋಧದಲ್ಲಿ. (ಯಾವುದೇ ರಾಷ್ಟ್ರದ, ರಾಷ್ಟ್ರೀಯತೆಯ ಪರಿಕಲ್ಪನೆಗಳ ಅಂತರ್ಗತ ಅಂಶ ಎಂದರೆ ಸಂಸ್ಕೃತಿಯ ಅಂತರ್ ಶೋಧದ ಆಯಾಮ).

ಆಧುನಿಕ ಕನ್ನಡ ಸಾಹಿತ್ಯದಲ್ಲೂ ಈ ಕ್ಷಾತ್ರ–ಕ್ಲಿಬತ್ವಗಳ ಮುಖಾಮುಖಿ ಈ ಅನೇಕ ರೀತಿಗಳಲ್ಲಿ ಆಗಿದೆ. ವಿಶೇಷದ ಸಂಗತಿ ಎಂದರೆ, 'ಕ್ಷಾತ್ರ'ವನ್ನು ಎತ್ತಿ

ಹಿಡಿಯುವ ಅಥವಾ ಆ ದೃಷ್ಟಿಕೋನದಲ್ಲಿ ಸಂಸ್ಕೃತಿಯ ಅಂತರ್‌ಶೋಧವನ್ನು ಮಾಡುವ ಕೃತಿಗಳು ಕನ್ನಡದಲ್ಲಿ ಅಂಥ ದೊಡ್ಡ ಯಶಸ್ಸನ್ನು ಕಂಡಿಲ್ಲ. ಆ ರೀತಿಯ ಪಾತ್ರಗಳಿಗೆ ಇರುವ ಮಹತ್ವ ಕೂಡಾ ಸಾಂದರ್ಭಿಕವಾದದ್ದೇ ಹೊರತು ಮೂಲಭೂತವಾದದ್ದಲ್ಲ. ಆದರೆ ಇದರರ್ಥ ರಾಷ್ಟ್ರೀಯತೆಯ ಈ ಧಾರೆಗೆ ಕನ್ನಡ ಸಾಹಿತ್ಯದಲ್ಲಿ ಪ್ರತಿಫಲನ ಇಲ್ಲವೇ ಇಲ್ಲ ಎಂದಲ್ಲ. ಆಧುನಿಕ ಕನ್ನಡ ಸಾಹಿತ್ಯದ ಅಧಿಕೃತತೆಗೆ ಮೂಲ ಕಾರಣವೇ ಮೇಲೆ ಸೂಚಿಸಿದ ಎರಡು ಭಿನ್ನಗ್ರಹಿಕೆಯ ಕ್ರಮಗಳ ಮುಖಾಮುಖಿ.

ಗಳಗನಾಥರ ಕೃತಿಗಳನ್ನು ಆಳವಾಗಿ ವಿಶ್ಲೇಷಿಸಿದರೆ ಹೊರಡುವುದು ಈ ಬಗೆಯ ಕ್ಷಾತ್ರಕೇಂದ್ರಿತ ರಾಷ್ಟದ ಕಲ್ಪನೆಯೇ. ಆಲೂರು ವೆಂಕಟರಾಯರ ಬಗ್ಗೆ ಈ ಮಾತು ಪೂರ್ಣವಾಗಿ ನಿಜ. ಆದರೆ, ಸಮಾಧಾನದ ಸಂಗತಿ ಎಂದರೆ, ಈ ಸಾಮ್ರಾಜ್ಯ ನಿರ್ಮಿತಿಯ, ಸಾಮ್ರಾಜ್ಯಧರ್ಮದ ಮಾದರಿಗಳನ್ನು ಅಲ್ಲಲ್ಲಿ ಮಾರ್ಮಿಕವಾಗಿ ಕೆಣಕಿದ ದಾಖಲೆಗಳು ಸಾಕಷ್ಟು ಸಿಗುತ್ತವೆ. ಇಲ್ಲಿ ನನಗೆ ತಕ್ಷಣ ನೆನಪಾಗುತ್ತಿರುವುದು ಪಂಡಿತ ತಾರಾನಾಥರ ಚಿಂತನೆಗಳು. ವಿಜಯನಗರ ವೈಭವವನ್ನು ಎಲ್ಲರೂ ಹಾಡಿ ಹೊಗಳುತ್ತಿದ್ದಾಗ ತಾರಾನಾಥರು ಅದರ ಮಾನವೀಯ ದಕ್ಷತೆಯ ಮೂಲಗಳನ್ನು ಪ್ರಶ್ನಿಸಿದರು. ಜನ ಸಾಮಾನ್ಯರ. ದೀನದಲಿತರ ಬದುಕನ್ನು ಹಸನುಮಾಡುವ ಎಷ್ಟು ಸಂಸ್ಥೆಗಳಿದ್ದವು, ಎಷ್ಟು ಆಸ್ಪತ್ರೆಗಳಿದ್ದವು ಎಂಬ ರೀತಿಯ ಪ್ರಶ್ನೆಗಳನ್ನು ಹಾಕಿ ಹೊಸ ಬಗೆಯ ಮೌಲ್ಯ ಪ್ರಜ್ಞೆಯನ್ನು ಪ್ರಕಟಿಸಿದರು.

ಈ ಹಿನ್ನೆಲೆಯಿಂದ ನೋಡಿದರೆ, ಕನ್ನಡ ನವೋದಯದ ಸನ್ನಿವೇಶದಲ್ಲಿ ರೂಪುಗೊಂಡ ಸಂಸ್ಕೃತಿಯನ್ನು ಕುರಿತ ಪರಿಕಲ್ಪನೆಗಳು ಒಂದೊಂದು ಬಗೆಯ ನಿರ್ದಿಷ್ಟ ರಾಜಕೀಯ ನಿಲುವುಗಳನ್ನು ಪ್ರಕಟಿಸುತ್ತವೆ. ಹಾಗೆಯೇ ರಾಜಕಾರಣದ ಪರಿಕಲ್ಪನೆಗಳು ನಿರ್ದಿಷ್ಟ ಸಂಸ್ಕೃತಿಯ ಪರಿಕಲ್ಪನೆಗಳನ್ನು ಪ್ರತೀಕಗೊಳಿಸುತ್ತದೆ. ಡಿ.ವಿ.ಜಿ., ವೆಂಕಟಕೃಷ್ಣಯ್ಯ ಮತ್ತು ಅಲಕ್ಷ್ಯಕ್ಕೆ ಒಳಗಾದ ಅನೇಕ ಜನ ಪ್ರಭಾವಶಾಲೀ ಪತ್ರಕರ್ತರ, ಚಿಂತಕರ ವಿಚಾರಗಳನ್ನು ಈ ನೆಲೆಯಲ್ಲಿ ಪರೀಕ್ಷಿಸಬೇಕಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಈಗಾಗಲೇ ಗುರುತಿಸಲಾಗಿರುವ ಕೆಲವು ವೈಚಾರಿಕ ಆಕೃತಿಗಳು ಇಲ್ಲಿಯೂ ಕೆಲಸ ಮಾಡಿರುವುದನ್ನು ಗುರುತಿಸಬಹುದು. ಒಂದು, ರಾಜಕೀಯ ಪ್ರಗತಿಪರತೆ ಆಗಿನ ವಸಾಹತುಗಳ ಸನ್ನಿವೇಶದಲ್ಲಿ ಮತ್ತು ಸಾಮಾಜಿಕ

ಸಂಪ್ರದಾಯ ಶರಣತೆಯ ಹೊಂದಾಣಿಕೆ. (ಅಖಿಲ ಭಾರತೀಯ ಮಟ್ಟದಲ್ಲಿ ತಿಲಕವಾದದ ಪ್ರಮುಖ ಗುಣ ಇದು). ಎರಡು, ಸಾಮಾಜಿಕ ಪ್ರಗತಿಪರತೆ ಮತ್ತು ವಸಾಹತುಶಾಹಿ ಬೆಂಬಲಿಗ ಧೋರಣೆ. ಈ ಎರಡನೆಯ ಧಾರೆಯ ವ್ಯಾಪಕತೆ ಮತ್ತು ಇದು ಒಳಗೊಳ್ಳುವ ಬ್ರಾಹ್ಮಣೇತರ ಚಳುವಳಿಗಳ ಸಾಮಾಜಿಕ ಮೌಲ್ಯಗಳ ಸ್ವರೂಪದ ಬಗ್ಗೆ ಇನ್ನಷ್ಟು ಸಂಶೋಧನೆ, ಚರ್ಚೆ ನಡೆಯಬೇಕಾಗಿದೆ. ಪ್ರಗತಿಪರತೆ ಸಾಮಾಜಿಕ, ರಾಜಕೀಯ ವಲಯಗಳೆರಡರಲ್ಲೂ ಪ್ರಖರವಾಗಿ ಹಬ್ಬಿರುವ ಪ್ರಕರಣಗಳು ಕನ್ನಡ ನವೋದಯದ ಸಾಹಿತ್ಯಕ ಸಂಸ್ಕೃತಿಯಲ್ಲಿ ಅಷ್ಟು ವ್ಯಾಪಕ ಸಂಖ್ಯೆಯಲ್ಲಿಲ್ಲ ಎಂದೇ ಹೇಳಬೇಕು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆಂತರಿಕ ಶ್ರೇಣೀಕರಣಗಳ ವಿರುದ್ಧದ ಮೌಲ್ಯ ಪ್ರಜ್ಞೆ ಇರದ ರಾಷ್ಟ್ರದ ಕಲ್ಪನೆ ಒಂದು. ಆಂತರಿಕ ಶ್ರೇಣೀಕರಣಗಳೇ ಅಂತಿಮ ವಾಸ್ತವ ಎಂದು ಭಾವಿಸಿ ಉಳಿದ ರಾಜಕೀಯ ಮೌಲ್ಯಗಳನ್ನು ನಿರಾಕರಿಸುವ ರಾಷ್ಟ್ರದ ಕಲ್ಪನೆ ಇನ್ನೊಂದು. ಮೊದಲನೆಯದು ಕನ್ನಡ ಸಾಹಿತ್ಯದಲ್ಲಿ ಆನಂದಕಂದ, ಗೊರೂರು ಮತ್ತು ಒಟ್ಟು ದೇಶಪ್ರೇಮಿ ಸಿದ್ಧಾಂತದ, ರಾಷ್ಟ್ರೀಯ ಆದರ್ಶಗಳನ್ನು ಪ್ರತಿಪಾದಿಸುವ ನವೋದಯ ಕಾದಂಬರಿಗಳಲ್ಲಿ ಪ್ರತಿಫಲನಗೊಂಡಿದೆ. ಕುತೂಹಲದ ಸಂಗತಿ ಎಂದರೆ, ಎರಡನೆಯ ದೃಷ್ಟಿಕೋನದ ಶುದ್ಧ ಶೂದ್ರವಾದೀ ಕೃತಿಗಳು ಕನ್ನಡದಲ್ಲಿ ನನಗೆ ಗೊತ್ತಿರುವ ಮಟ್ಟಿಗೆ ಇಲ್ಲ. ಆದರೆ ಈ ಎರಡೂ ದೃಷ್ಟಿಕೋನಗಳ ಶಕ್ತಿಗಳನ್ನು ಕನ್ನಡದ ವಾಸ್ತವವಾದೀ ಪರಂಪರೆ ಮೇಳವಿಸಿಕೊಂಡು ತನ್ನ ಅತ್ಯುತ್ತಮ ಕೃತಿಗಳನ್ನು ಸೃಷ್ಟಿಸಿದೆ. ಇದರ ಜೊತೆಗೆ ಕನ್ನಡ ಕಾವ್ಯ ತನ್ನ ಅತ್ಯುತ್ತಮ ಕ್ಷಣಗಳಲ್ಲಿ ರಾಷ್ಟ್ರೀಯತೆಯ ಮಿತಿಗಳನ್ನು ದಾಟಿ ಅಂತರರಾಷ್ಟ್ರೀಯ ಮೌಲ್ಯ ಪ್ರಜ್ಞೆಯನ್ನು ಪ್ರಕಟಿಸಿದೆ. ಕುವೆಂಪುರವರ 'ಅನಿಕೇತನ' ಅದರ ಒಂದು ಮುಖ. ಬೇಂದ್ರೆಯವರ 'ನರಬಲಿ' ಇನ್ನೊಂದು ಮುಖ.

ಒಟ್ಟಾರೆಯಾಗಿ ಹೇಳುವುದಾದರೆ, ರಾಷ್ಟ್ರೀಯತೆ ಎನ್ನುವ ಹೊಸ ಸೈದ್ಧಾಂತಿಕ ವಿಸ್ತಾರ ಸಾಹಿತ್ಯ ಸಂಸ್ಕೃತಿಯೊಂದರಲ್ಲಿ ಸೃಷ್ಟಿಸುವ ವೈವಿಧ್ಯಮಯ ಗ್ರಹಿಕೆಗಳ, ವೈರುಧ್ಯಗಳ ಅಧ್ಯಯನಕ್ಕೆ ಆಧುನಿಕ ಕನ್ನಡ ಸಾಹಿತ್ಯ ಫಲವತ್ತಾದ ಕ್ಷೇತ್ರವನ್ನು ಒದಗಿಸುತ್ತದೆ. ಆ ಪ್ರಯತ್ನದ ಕಡೆಗೆ ಇದೊಂದು ಚಿಕ್ಕ ಹಾಗೂ ಶಾಸ್ತ್ರೀಯ ಶಿಸ್ತು ಇರದ ಲಹರಿಯ ಬರವಣಿಗೆ.

# ರಂಜನಿ

**ಶಾಂತಾದೇವಿ ಮಾಳವಾಡ**

ಕಿತ್ತೂರಿನ ಮುತ್ತಿನ ಪಾಲಕಿ
ಹತ್ತಿ ಮೆರೆಯುತ್ತಿರುವ ರಾಣಿ
ಮುತ್ತಿನ ವೇಣಿ ಕೋಕಿಲ ವಾಣಿ
ಹತ್ತು ದಿಕ್ಕಿನೊಳು ಕಲ್ಯಾಣಿ

ಹೀಗೊಂದು ಪ್ರಸಿದ್ಧಿ ಪಡೆದ ಕಿತ್ತೂರ ಚೆನ್ನಮ್ಮನ ಕೋಟೆಯ ಕೊತ್ತಳದ ತುಂಬ ಹಣತೆಗಳ ಬೆಳಕು ಕಂಗೊಳಿಸಿತು. 1824 ಅಕ್ಟೋಬರ್ 23ರಂದು ಚೆನ್ನಮ್ಮ ಬ್ರಿಟಿಷರನ್ನು ಸೋಲಿಸಿ ವಿಜಯೋತ್ಸವವನ್ನು ಆಚರಿಸಿದಳು. ಬಲಾಢ್ಯ ಬ್ರಿಟಿಷ್ ಪ್ರಭುತ್ವದ ವಿರುದ್ಧ, ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಿದ ಕ್ರಾಂತಿಯ ಕಿಡಿ ಚೆನ್ನಮ್ಮನ ಸವಿನೆನಪಿಗಾಗಿ, ಆ ಯುದ್ಧದಲ್ಲಿ ಮಡಿದ ಸಾವಿರಾರು ಸೈನಿಕರ ಆತ್ಮ ಶಾಂತಿಗಾಗಿ, ಕಿತ್ತೂರ ನಾಗರಿಕರು ಈಗ ಪ್ರತಿ ವರುಷ ದೀಪೋತ್ಸವವನ್ನು ವಿಜಯೋತ್ಸವವನ್ನು ಆಚರಿಸುತ್ತಾರೆ.

ಅದನ್ನು ಕಂಡು ನಾವೆಲ್ಲ ಆನಂದಪಟ್ಟೆವು.ಕೊಳದ ಮೇಲ್ಗಡೆ ನಿಂತು ರಾತ್ರಿಯ ಹೊತ್ತಿನಲ್ಲಿ ನೋಡಿದಾಗ, ಮೇಲೆ ಆಕಾಶದಲ್ಲಿ ಮಿನುಗುವ ನಕ್ಷತ್ರಗಳು, ಕೆಳಗೆ ನೋಡಿದಲ್ಲೆಲ್ಲ ಕಣ್ಣಿಗೆ ಹಬ್ಬವನ್ನುಂಟುಮಾಡುವ ಮಣ್ಣ ಹಣತೆಗಳ ಮಂದಬೆಳಕು, ಸುತ್ತಲೂ ಬಣ್ಣ ಬಣ್ಣದ ದ್ವೀಪಗಳು ಸರಮಾಲೆಗಳನ್ನು ಕಂಡಾಗ ನಮ್ಮ ಮನ ಕಿತ್ತೂರಿನ ಗತ ಇತಿಹಾಸದತ್ತ ಹೊರಳಿತು. ರಾತ್ರಿ, ಕಿತ್ತೂರಿನ ಪ್ರತಿಷ್ಠಿತರ ಮನೆಯಲ್ಲಿ ಸವಿಯೂಟವನ್ನುಂಡು ಮಲಗಿದೆವು.

ಆ ದಿನ ಕಿತ್ತೂರ ಕೋಟೆಯ ಅವಶೇಷಗಳನ್ನು ನೋಡಲು ತಿರುಗಾಡಿ ದೇಹ ದಣಿದಿತ್ತು. ವಿಜಯೋತ್ಸವದ ಸಂಗೀತ, ಭಾಷಣಗಳಿಂದ ಮನ ದಣಿದಿತ್ತು. ಊಟವಾದೊಡನೆ ಗಾಢನಿದ್ರೆ, ಆವರಿಸಿತ್ತು. ಆಗ ಎಲ್ಲಿಂದಲೋ ಗೆಜ್ಜೆಯ ಘಿಲ್, ಘಿಲ್ ನಾದ ಕೇಳಬಂದಿತು. ತಾಳ, ಮದ್ದಲೆ, ವೀಣೆ, ಮೃದಂಗಗಳ ನಾದ ಹೊರಹೊಮ್ಮಿತು. ನಾಟ್ಯ ಸರಸ್ವತಿಯಂತೆ ತೋರುವ ಸುಂದರ ಯುವತಿ ನರ್ತಿಸಹತ್ತಿದಳು. ಆಕೆಯ ವೇಷ ಭೂಷಣ ಹಿಂದೂ ರಮಣಿಯಂತಿದ್ದರೂ,

ಕಿವಿತುಂಬ ಧರಿಸಿದ ಆಭರಣಗಳು, ಆಕೆಯ ನಾಗಾಭರಣಗಳು ಅರಳಿದ ಗುಲಾಭಿಯಂಥ ಮುಖ, ಮುಸ್ಲಿಂ ತರುಣಿಯಂತಿದ್ದವು. ಆ ನೃತ್ಯಗಾತಿ ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ್ತ, ನೃತ್ಯದ ವಿವಿಧ ಭಂಗಿಗಳನ್ನು ತೋರುತ್ತ ನನ್ನ ಬಳಿ ಬಂದು ಕುಳಿತಳು. ಆಗ ನನ್ನ ದೇಹ ಪುಳುಕಿತಗೊಂಡಿತು. ಆಕೆಯನ್ನು ನೋಡುತ್ತಲಿದ್ದೆ. ನೀನಾರು? ಇಲ್ಲಿಗೇಕೆ ಬಂದೆ? ಎಂದು ಕೇಳಿದೊಡನೆ ಆಕೆ ಗಹಗಹಿಸಿ ನಗಹತ್ತಿದಳು.

ನಾನು ಯಾರೆಂಬುದು ನಿಮಗೆ ಗೊತ್ತಿಲ್ಲವೇ? ಒಂದು ಕಾಲದಲ್ಲಿ ನಾನೂ ಚೆನ್ನಮ್ಮನ ಕಿತ್ತೂರಿನಲ್ಲಿದ್ದೆ. ವೀರರಾಣಿ, ಶೂರ ಚೆನ್ನಮ್ಮನ ನೆನಪು ನಾಡಿನ ಪ್ರಜೆಗಳ ಮನದಲ್ಲಿ ನೆಲೆಯೂರಿ ನಿಂತಿದೆ ; ಆದರೆ ನನ್ನ ನೆನಪು ಒಬ್ಬರಿಗೂ ಇಲ್ಲವಲ್ಲ ! ಚೆನ್ನಮ್ಮ ರಾಜ್ಯಕ್ಕಾಗಿ ಸರ್ವಸ್ವ ತ್ಯಾಗಮಾಡಿ ಹೋರಾಡಿದಳು. ಆ ತಾಯಿ ಮೃತ್ಯುವನ್ನಪ್ಪಿದರೂ ಎಲ್ಲರ ನೆನಪಿನಲ್ಲಿ ಚಿರಂಜೀವಿಯಾದಳು. ನಾನು ಕಿತ್ತೂರಿನ ರಾಜನಿಗಾಗಿ ಸರ್ವಸ್ವ ತ್ಯಾಗ ಮಾಡಿದೆ. ಬಂಧು ಬಳಗದ ವಿರೋಧ ಕಟ್ಟಿಕೊಂಡೆ. ಸಮಾಜದಿಂದ ತಿರಸ್ಕೃತಳಾದೆ. ಸ್ವಧರ್ಮದಿಂದ ವಂಚಿತಳಾದೆ. ಆದರೆ ಪ್ರೇಮಿಯಾದೆ. ನನ್ನ ನೆನಪು ಯಾರಿಗೂ ಇದ್ದಂತಿಲ್ಲ.

"ಯಾರವ್ವ ನೀನು ! ನಿನ್ನ ಅಮರ ಪ್ರೇಮದ ಕಥೆ ರಮ್ಯ ವಾಗಿರಬೇಕು. ನಿನ್ನ ಈ ಸೌಂದರ್ಯವನ್ನು ಕಂಡರೆ ದೇವಲೋಕದ ಅಪ್ಸರೆ ಧರೆಗಿಳಿದು ಬಂದಂತಿದೆ."

ಈ ಸೌಂದರ್ಯವೇ ನನ್ನನ್ನು ಪ್ರೆಮಬಂಧನದಲ್ಲಿ ಸಿಲುಕಿಸಿತು. ಅದರಿಂದ ಕಿತ್ತೂರ ದೊರೆ ಫಕೀಗರುದ್ರಸರ್ಜರು ರಾಜ್ಯತ್ಯಾಗ ಮಾಡುವಂತೆ ಆಯಿತು.

"ಏನಂದಿ ? ಫಕೀರ ರುದ್ರಸರ್ಜರೇ! ಯಾರವರು ?

"ಕಿತ್ತೂರಿನ ಒಂಭತ್ತನೆಯ ದೊರೆಯಾಗಲಿದ್ದರು ಫಕೀರ ರುದ್ರ, ಸರ್ಜರು, ಅವರ ದರ್ಬಾರಿಗೆ ನೃತ್ಯ ಮಾಡಲು ನಾನೊಂದು ಸಲ ಬಂದೆ. ನನ್ನ ತಾಯಿ ಹಾಗೂ ನೃತ್ಯದ ಪರಿವಾರದೊಂದಿಗೆ ಉತ್ತರ ಭಾರತದಿಂದ ದಕ್ಷಿಣದ ನವಾಬರೋಬ್ಬರ ರಾಜನರ್ತಕಿಯಾಗಲು ಹೊರಟಿದ್ದೆ. ಮಾರ್ಗದಲ್ಲಿ ಈ ಕಿತ್ತೂರಿನ ರಾಜವೈಭವವನ್ನು ಕೇಳಿ, ಸೃಷ್ಟಿ ಸೌಂದರ್ಯವನ್ನು ನೋಡಿ. ಗಿಳಿ ಕೋಗಿಲೆಗಳ ಇಂಚರ ಗಾನಕ್ಕೆ ಮನಸೋತು ಕೆಲದಿನ, ಮಾರ್ಗಾಯಾಸ ಪರಿಹರಿಸಿಕೊಳ್ಳಲು

ಇಲ್ಲಿ ತಂಗಿದ್ದೆವು. ಆಗ ಈ ಊರ ಮಂತ್ರಿಯೊಬ್ಬರು ಬಂದರು ನಮ್ಮ ತಂಡದ ಮುಖ್ಯಸ್ಥನನ್ನು ಕಂಡರು, ಕಿತ್ತೂರಿನ ರಾಜದರ್ಬಾರದಲ್ಲಿ ಒಂದು ರಾತ್ರಿ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಿದರು' ಆ ರಾಜ ದರ್ಬಾರದಲ್ಲಿ ಮೇಲಿಂದ ಮೇಲೆ ನೃತ್ಯ, ಸಂಗೀತಗಳು ನಡೆಯುತ್ತಿದ್ದವು."

'ನಾನು ಆ ಬೆಡುಗಾತಿಯ ಮುಖವನ್ನೇ ದಿಟ್ಟಿಸಿ ನೋಡುತ್ತಲಿದ್ದೆ ,

"ನನಗಾಗ ಹದಿನಾರು ವರುಷ, ಗುಲಾಬಿ ಹೂವಿನ ಮೈಬಣ್ಣ ಅಂಗಾಂಗಗಳು ಎದ್ದು ತೋರುವಂತೆ ನವಿಲು ಬಣ್ಣದ ಸೀರೆಯನ್ನುಟ್ಟಿದೆ. ಪಾರದರ್ಶಕವಾದ ಮೇಲು ಹೊದಿಕೆಯನ್ನು ಹೊತ್ತಿದ್ದೆ, ವಿವಿಧ ಪಕ್ಕ ವಾದ್ಯವದರು ಸಜ್ಜಾಗಿ ಕುಳಿತಿದ್ದರು. ವಂದಿಮಾಗಧರು ಕಿತ್ತೂರಿನ ಬಿರುದಾವಳಿಗಳನ್ನು ಉಗ್ಘಡಿಸುತ್ತಿರುವಾಗ ತರುಣ ಯುವ ರಾಜರು ರಾಜಗಾಂಭೀರ್ಯದಿಂದ ಬಂದು ತಮ್ಮ ಸಿಂಹಾಸನದ ಮೇಲೆ ಕುಳಿತರು. ಮಂತ್ರಿಗಳ ಆಜ್ಞೆಯಂತೆ ನಾನು ನೃತ್ಯ ಪ್ರಾರಂಭಿಸಿದೆ. ಮೊದಲಿಗೆ ಪೂಜಾ ನೃತ್ಯ, ನಂತರ ನವಿಲಿನ ನೃತ್ಯವನ್ನಾಡಿದೆ. ಆ ವೈಭವಪೂರ್ಣ ಅರಮನೆ, ರಾಜರ ಚೆಲುವಿಕೆ ನನ್ನ ಮನವನ್ನಾಕರ್ಷಿಸಿದವು. ನನ್ನನು ನಾನೇ ಮರೆತೆ. ಪಕ್ಕ ವಾದ್ಯದ ಗತಿಗೆ, ಹಿನ್ನೆಲೆ ಸಂಗೀತಕ್ಕೆ ತಕ್ಕಂತೆ ಗರಿಗೆದರಿದ ನವಿಲಿನಂತೆ ನೃತ್ಯಗೈದೆ. ಆ ನೃತ್ಯವನ್ನು ಕಂಡು ಎಲ್ಲರೂ ಸಂತಸಪಟ್ಟರು. ಮಹಾರಾಜರು ಕಾಣಿಕೆಯ ತಟ್ಟೆಯೊಂದಿಗೆ ತಮ್ಮ ನನ್ನ ಕೊರಳಹಾರವನ್ನೂ ಬಹುಮಾನವಾಗಿ ನನಗೆ ಕೊಟ್ಟರು. ಅವರ ಚೆಲುವಿಕೆಗೆ ಮನಸೋತ ನಾನು ಅವರ ಪ್ರೇಮದ ನೋಟಕ್ಕೆ ಮಾರು ಹೋದೆ. ಅವರ ಮಿಂಚುವ ಕಣ್ಣೋಟಕ್ಕೆ ಸೆರೆಯಾದರು. ಮರುದಿನವೂ ನೃತ್ಯಕ್ಕೆ ಆಮಂತ್ರಣ ಬಂದಿತು. ಮೊದಲ ದಿನ ದೊರೆತ ಕನಕಾಭರಣಗಳಿಂದ ಸಂತುಷ್ಟಳಾದ ನನ್ನ ತಾಯಿ ಸಂತಸದಿಂದ ನನ್ನನ್ನು ಅಲಂಕರಿಸಿ ನೃತ್ಯಕ್ಕೆ ಕರೆದೊಯ್ದರು. ಅಂದಿನ ಮಣಿಪುರಿ ನೃತ್ಯ ಮಹಾರಾಜರನ್ನು ಮೋಹ ಪರವಶಗೊಳಿಸಿತು. ಒಂದು ವಿಶ್ರಾಂತಿ ಪಡೆದು ಮುಂದೆ ಪಯಣ ಕೈಗೊಳ್ಳಬೇಕಾದ ನಾವು ಕಿತ್ತೂರ ಅರಸರ ಔದರ್ಯಕ್ಕೆ ಮನಸೋತು ಒಂದೆರಡು ತಿಂಗಳು ಇಲ್ಲಿಯೇ ಉಳಿದೆವು ಅರಮನೆಯಿಂದ ನಮಗೆ ಸಕಲ ಸೌಕರ್ಯ ದೊರೆಯಿತು. ಮಂತ್ರಿಗಳು ಇನ್ನೂ ಕೆಲಕಾಲ ಅಲ್ಲಿರಲು ಒತ್ತಾಯಮಾಡಿದರು. ಪಕೀರಸರ್ಜರಿಗೆ ಮನಸೋತ ನನಗೂ ಅದೇ ಬೇಕಾಗಿತ್ತು. ನನ್ನ ತಾಯಿ ಸಾಕಷ್ಟು ಧನ ಸಂಗ್ರಹವಾದ ಮೇಲೆ ಮುಂದಿನ ಪಯಣ ಕೈಗೊಳ್ಳಬೇಕೆಂದಿದ್ದರು.

ಆದರೆ ಏನಾಯಿತು?"

ದಿನಗಳೆದಂತೆ ನನ್ನ ಹಾಗೂ ಫಕೀರರುದ್ರಸರ್ಜರ ಪ್ರೇಮ ಬಂಧನ ಬಲವಾಯಿತು. ಅವರನ್ನಗಲಿ ನಾನಿರಲಾರೆ ಎಂದು ನನಗೆನಿಸಿತು. ನನ್ನನ್ನು ಬಿಟ್ಟು ಬದುಕಿರಲಾರೆ ಎಂದು ಅವರಿಗನಿಸಿತು. ದಿನದ ಬಹು ವೇಳೆಯನ್ನು ನನ್ನೊಂದಿಗೆ ಕಳೆಯಹತ್ತಿದರು. ಅವರ ಪ್ರೀತಿಯ ಹವ್ಯಾಸ ಬೇಟೆ, ರಾಜಕಾರಣ, ಪ್ರಜೆಗಳ ಸುಖ ದುಃಖ ವಿಚಾರಣೆಗಳೆಲ್ಲ ಅವರಿಗೆ ನೀರಸವೆನಿಸಯತ್ತಿದವು ಒಮ್ಮೊಮ್ಮೆ ನಮ್ಮ ವಸತಿಗೃಹಕ್ಕೂ ಬರುತ್ತಿದ್ದರು. ಆಗ ನಮ್ಮಿಬ್ಬರಿಗೆ ಜಗದ ಆಗು–ಹೋಗುಗಳ ಪರಿವೆಯೇ ಇರಲಿಲ್ಲ. ಸದಾ ಜಕ್ಕವಕ್ಕಿಗಳಂತೆ ಜೊತೆಯಾಗಿರಬೇಕೆಂಬ ಹಂಬಲ ಇಬ್ಬರಲ್ಲೂ ಬಲವಾಯಿತು. ನನ್ನ ತಾಯಿಗೆ ಸಾಕಷ್ಟು ಧನಕನಕ ದೊರೆತುದರಿಂದ ದಕ್ಷಿಣ ದೇಶಕ್ಕೆ ಹೋಗುವ ವಿಚಾರವನ್ನು ಮುಂದೆ ಹಾಕಹತ್ತಿದಳು. ನನ್ನನ್ನು ರಾಜನರ್ತಕಿಯನ್ನಾಗಿ ಮಾಡುವ ಮಾತು ಕೇಳಿಬಂತು.

ಸದಾ ನನ್ನ ಸುತ್ತ ಸುಳಿದಾಡುವ ದೊರೆಗಳನ್ನು ಕಂಡು ರಾಜಮಾತೆ ಚಿಂತಾಮಗ್ನರಾದರು. ರಾಜಕಾರಣದತ್ತ ಗಮನಹರಿಸಿದ ರಾಜರ ಬಗೆಗೆ ಮಂತ್ರಿಮಾನ್ಯರು ಗಾಬರಿಗೊಂಡರು. ಬೇಗನೆ ಯುವರಾಜರಿಗೆ ಮದುವೆ ಮಾಡಿ ಪಟ್ಟಾಭಿಷೇಕ ಮಾಡಲು ನಿರ್ಧರಿಸಿದರು. ಮದುವೆಯಾದರೆ ಮಹಾರಾಜರಿಗೆ ಈ ನರ್ತಕಿಯು ಹುಚ್ಚು ಬಿಡುವುದೆಂದರು. ಸುತ್ತಲಿನ ಹಲವಾರು ದೇಸಾಯರ ಪುತ್ರಿಯರ ಭಾವಚಿತ್ರಗಳನ್ನು ತಂದು ತೋರಿಸಿದರು. ಮದುವೆಗೆ ಒತ್ತಾಯ ಮಾಡಹತ್ತಿದರು.

ಒಂದುದಿನ ಬೆಳದಿಂಗಳ ರಾತ್ರಿ ನಾವೆಲ್ಲ ವಸತಿಗೃಹದ ವಿಶಾಲವಾದ ಬಯಲಿನಲ್ಲಿ ಕುಳಿತು ಸಂಗೀತದಲ್ಲಿ ಮೈಮರೆತಿದ್ದೆವು. ಸುತ್ತಲಿನ ಗುಡ್ಡ ಬೆಟ್ಟಗಳ ಮೇಲೆ ಬೆಳದಿಂಗಳ ಬೆಳಕು ಹರಡಿತ್ತು. ತಂಗಾಳಿಗೆ ಹಚ್ಚಹಸುರಿನ ಬತ್ತದ ಗದ್ದೆಗಳಲ್ಲಿ ತಲೆದೂಗುವ ಬತ್ತದ ತೆನೆಗಳು ನನ್ನನ್ನು ನೃತ್ಯಕ್ಕೆ ಪ್ರಚೋದಿಸಿದವು, ಬೆಳದಿಂಗಳ, ಬೆಳಕಿನಲ್ಲಿ ಬೆಳ್ಳಿಯ ಎರಕವನ್ನು ಹೊಯ್ದಂತೆ ತೋರುವ ಕೆರೆಯ ನೀರನ್ನು ಕಂಡು ನಾನು ಮಂತ್ರಮುಗ್ಧಳಾಗಿ ಕುಳಿತಿದ್ದೆ. ಆಗ ಮಹಾರಾಜರು ದಯಮಾಡಿಸಿದರು. ನಾವಿಬ್ಬರೂ ಬೆಳದಿಂಗಳ ರಾತ್ರಿಯಲ್ಲಿ ತಿರುಗಾಡುತ್ತ ಊರ ಹೊರಗಿನ ಮಾವಿನತೋಪಿನಲ್ಲಿ ಕುಳಿತೆವು. ಅವರ ಸಹವಾಸದಲ್ಲಿ ನಾನು

ಆನಂದಭರಿತಳಾದೆ.

ಫಕೀರ ರುದ್ರಸರ್ಜರು ಪ್ರೇಮದಿಂದ ನನ್ನನ್ನು ಬಳಿ ಕುಳ್ಳಿರಿಸಿ ಕೊಂಡರು. ನನ್ನ ಗಲ್ಲಗಳನ್ನು ಹಿಡಿದೆತ್ತಿ ನನ್ನ ಕಣ್ಣಲ್ಲಿ ತಮ್ಮ ಕಣ್ಣಿನಿಂದ ಪ್ರೇಮದ ಹೊನಲನ್ನೇ ವರಿಸುತ್ತ "ರಂಜನೀ" ಎಂದರು,

"ಏನು ದೊರೆಗಳೇ ? ಸದಾ ನಾವಿಬ್ಬರೂ ಹೀಗೆ: ಜೊತೆಯಾಗಿ ಇರಬೇಕಲ್ಲವೇ? " ಎಂದು ಕೇಳಿದ.

"ನೀನು ನನ್ನನ್ನು ಲಗ್ನವಾದರೆ ನಾವಿಬ್ಬರೂ ಬಾಳಿನುದ್ದಕ್ಕೂ ಹೀಗೆ ಇರಬಹುದಲ್ಲ! ನಿನ್ನ ಅನುಮತಿ ಕೇಳಲೆಂದೇ ಬಂದಿರುವೆ.

"ಅಯ್ಯೋ ದೊರೆಗಳೆ; ಈ ಜನ್ಮದಲ್ಲಿ ಅದೆಲ್ಲಿ ಸಾಧ್ಯ? ನೀವು ವೀರಶೈವರು. ನಾನು ಮುಸಲ್ಮಾನರವಳು. ನೀವು ರಾಜಸಿಂಹಾಸನವನ್ನೇರುವವರು ನಾನು ಯಃಕಶ್ಚಿತ ನೃತ್ಯಗಾತಿ. ನಮ್ಮಿಬ್ಬರ ವಿವಾಹ ಸಾಧ್ಯವಾಗಲಾಗರದು. ಧರ್ಮಸಮ್ಮತವಾಗಲಾರದು, ಅಲ್ಲದೆ ಜನ ನಮ್ಮನ್ನು ಸುಮ್ಮನೆ ಬಿಟ್ಟಾರೆಯೇ?"

"ನನಗೆ ಜನರ ಸಮ್ಮತಿ ಬೇಕಾಗಿಲ್ಲ 'ರಂಜನಿ' ನಿನ್ನ ಸಮ್ಮತಿ ಮಾತ್ರ ಬೇಕಾಗಿದೆ. ನಿನ್ನ ಹೃದಯದೊಲವು ಮುಖ್ಯ. ಅರಮನೆಯಲ್ಲಿ ನಿತ್ಯವೂ ದೇಸಾಯರ ಪುತ್ರಿಯರ ಭಾವಚಿತ್ರಗಳನ್ನು ತಂದುರಿಸುತ್ತಿದ್ದಾರೆ. ವಿವಾಹಕ್ಕೆ ಅವಸರಪಡಿಸುತ್ತಿದ್ದಾರೆ. ನನ್ನ ತಾಯಿಯತೂ ಬೇಗನೆ ಮದುವೆಮಾಡಿಕೊ ಎಂದು ಅಳುತ್ತ ಕೂಡುತ್ತಿದ್ದಾರೆ. ನಾನು ಬೇರೆ ಹೆಣ್ಣಿನೊಂದಿಗೆ ಮದುವೆಯಾಗಲಾರೆ. ನನಗೆ ನೀನು ಬೇಕು, ರಂಜನೀ ನೀನಿಲ್ಲದೆ ನನ್ನ ಮನ ರಂಜಿಸಲಾರದು."

"ದೊರೆಗಳೇ! ನಾಳೆ ಪಟ್ಟದರಾಣಿ ಬಂದೊಡನೆ ನನ್ನ ನೆನಪಾದರೂ ನಿಮಗೆ ಉಳಿಯುವುದೇ ?"

"ನೀನು ನನ್ನ ಹೃದಯದ ರಾಣಿಯಾಗಿರುವಾಗ ಬೇರೆ ಪಟ್ಟದ ರಾಣಿಯ ವಿಚಾರವೇ ಇಲ್ಲ.'

"ದೊರೆಗಳೇ ಅದೆಲ್ಲ ಆಗದ ಮಾತು, ನೀವು ಬೇರೊಬ್ಬ ರಾಜಕುಮಾರಿಯನ್ನು ಮದುವೆಯಾಗಿ ಸುಖದಿಂದ ಬಾಳಿರಿ ನನ್ನ ದೊರೆ !" ನಾನು ಬೇಕಾದರೆ ರಾಜನರ್ತಕಿಯಾಗಿ ನಿಮ್ಮ ಬಳಿ ಇರುವೆನು.

"ರಂಜನಿ, ಎಷ್ಟು ಸುಲಭವಾಗಿ ಹೇಳಿಬಿಟ್ಟೆಯಲ್ಲ ! ನೀನು ನನ್ನ ಹೃದಯದರಸಿಯಾಗಿರುವಾಗ ಪಾಪ, ಬೇರೊಂದು ಹೆಣ್ಣನ್ನು ತಂದು ತೋರಿಕೆಯ ರಾಣಿಯನ್ನಾಗಿ ಮಾಡುವದು ಸಾಧ್ಯವಿಲ್ಲ, ಮದುವೆಗೆ ನಿನ್ನ ಒಪ್ಪಿಗೆ ಮುಖ್ಯ. ನಾನು ನಿನ್ನನ್ನೇ ಮದುವೆಯಾಗುವೆ.

"ನಾನೇನು ಹೇಳಲಿ ದೊರೆಗಳೇ ! ನಾನು ಸದಾ ನಿಮ್ಮ ನೆರಳಾಗಿ ಬಾಳುವೆ. ನಮ್ಮಿಬ್ಬರ ದೇಹ ಎರಡಿದ್ದರೂ ಮನ, ಆತ್ಮ ಒಂದೇ. ನನ್ನ ತಾಯಿ ಹಾಗೂ ನಿಮ್ಮ ಜನ ಮದುವೆಗೆ ಒಪ್ಪಬಹುದೇ?"

"ರಂಜನಿ ಮನಸ್ಸಿಗೆ ಬಂದದ್ದನ್ನು ಮಾಡಲು ನಾನಾರಿಗೂ ಅಂಜುವವನಲ್ಲ. ನಿನ್ನೆದುರು ಸಮಾಜ, ರಾಜ್ಯ ಎಲ್ಲವೂ ನನಗೆ ಅಲ್ಪ. ಪ್ರಸಂಗ ಬಂದರೆ ನಿನಗೆ ವೀರಶೈವ ದೀಕ್ಷೆ ಕೊಡಿಸಿ ಮದುವೆಯಾಗುತ್ತೇನೆ. ಅದಕ್ಕಾಗಿ ರಾಜ್ಯ ತ್ಯಾಗ ಮಾಡಲು ನಾನು ಸಿದ್ಧ. ನಿನ್ನ ತಾಯಿಗೆ ಸಾಕಷ್ಟು ಹಣ ಕೊಡುವೆ, ಆಕೆ ತನ್ನ ಪಾಡಿಗೆ ಹೋಗಲಿ, ನಿನ್ನನ್ನು ಮದುವೆಯಾಗಿ ಬಿಡುವೆ. ಇದು ನನ್ನ ಕೊನೆಯ ನಿರ್ಧಾರ." ಎಂದು ಹೇಳಿದಾಗ ನನ್ನ ಕಣ್ಣಿನಿಂದ ಆನಂದಬಾಷ್ಪಗಳುರುಳಿದವು. ಚಂದ್ರಮನ ಸಾಕ್ಷಿಯಾಗಿ ನಾವಿಬ್ಬರೂ ದಂಪತಿಗಳಾಗಲು ನಿರ್ಧರಿಸಿದೆವು.

ಈ ಸಮಾಚಾರವು ಬೆಳಗಾಗುವುದರಲ್ಲಿ ಅರಮನೆಯ ತುಂಬ ಹರಡಿತು. ರಾಜಮಾತೆ ನಿದ್ರಾಹಾರಗಳನ್ನು ತೊರೆದು ಅಳುತ್ತ ಮಲಗಿದರು. ಅಂದು ಸಾಯಂಕಾಲ ಮಂತ್ರಿಮಾನ್ಯರು ಸಭೆಗೂಡಿದರು, ಕಲ್ಮಠದ ಸ್ವಾಮಿಗಳು ದಯಮಾಡಿಸಿದರು, ಬಂಧು ಬಳಗದವರು ಬಂದು ಮಹಾರಾಜರ ಮನವನ್ನು ಬದಲಿಸಲು ಪ್ರಯತ್ನಿಸಿದರು. ಸಾಧ್ಯವಾಗಲಿಲ್ಲ. ರಾಜಧಾನಿಯಲ್ಲಿ ಎಲ್ಲೆಡೆ ಮದುವೆಯ ಚರ್ಚೆ ನಡೆಯಿತು. ಮಹಾರಾಜರು ಪರಧರ್ಮದ ನರ್ತಕಿಯನ್ನು ಮದುವೆ ಯಾಗುವರಂತೆ ಇದರಿಂದ ಧರ್ಮ ಹಾಳಾಗುವದು ಎಂದು ಎಲ್ಲರೂ ತಿರಸ್ಕಾರದ ಮಾತುಗಳನ್ನಾಡಹತ್ತಿದರು.

ಮಂತ್ರಿಮಂಡಲದವರೆಲ್ಲರೂ ಕೂಡಿ ಮಾತನಾಡಿಕೊಂಡು ಫಕೀರ ರುದ್ರಸರ್ಜರ ಬಳಿ ಬಂದರು. ಗುರುಗಳ ಸಮ್ಮುಖದಲ್ಲಿ ಮಾತು ಕತೆ ಪ್ರಾರಂಭವಾಯಿತು. ರಾಜಪರಿವಾರದವರೆಲ್ಲ ಅಳುತ್ತಾ ಕುಳಿತರು.

"ದೊರೆಗಳೇ, ಇಲ್ಲಿರುವ 15 ಜನ ರಾಜಪುತ್ರಿಯರ ಭಾವಚಿತ್ರಗಳನ್ನು

ನೋಡಿರಿ. ನಿಮ್ಮ ಮನಸ್ಸಿಗೆ ಒಪ್ಪಿಗೆಯಾದವರನ್ನು ಕರೆತಂದು ಶುಭಸ್ಯ ಶೀಘ್ರಂ ಎನ್ನಿಸಿಬಿಡೋಣ" ಎಂದರು ಮಂತ್ರಿಗಳು,

"ಮಂತ್ರಿಗಳೇ ನನ್ನ ನಿರ್ಧಾರವನ್ನು ಬೆಳಿಗ್ಗೆ ತಿಳಿಸಿದ್ದೇನೆ. ನಾನು ಪ್ರೇಮಿಸಿದ ರಂಜನಿಯೊಂದಿಗೆ ನನ್ನ ವಿವಾಹವಾಗಬೇಕು."

'ದೊರೆಗಳೆ ಅದು ಹೇಗೆ ಸಾಧ್ಯ ? ರಂಜನಿಯ ಮೇಲೆ ನಿಮಗೆ ಅಷ್ಟೊಂದು ಪ್ರೇಮವಿದ್ದರೆ ಅವಳನ್ನು ರಾಜನರ್ತಕಿಯನ್ನಾಗಿ ಮಾಡೋಣ,

"ಅದು ಸಾಧ್ಯವಿಲ್ಲ.'

"ಫಕೀರ ರುದ್ರಸರ್ಜರೇ, ಕಿತ್ತೂರ ಅರಸರು ಧರ್ಮಪರಾಯಣರು, ನೀವು ಬೇಕಾದರೆ ರಂಜನಿಗೆ ವೀರಶೈವ ದೀಕ್ಷೆ ಕೊಡಿಸಬಹುದು. ಆದರೆ ಅವಳು ಪಟ್ಟದರಸಿಯಾಗುವುದು ಸಾಧ್ಯವಿಲ್ಲ. ಅವಳ ಸಂತಾನ ಪಟ್ಟಕ್ಕೆ ಬಾಧ್ಯಸ್ಥನಾಗುವುದಿಲ್ಲ. ಓರ್ವ' ಕುಲವಧುವನ್ನು ವಿವಾಹ ಮಾಡಿಕೊಳ್ಳಿರಿ, ಆಕೆ ಪಟ್ಟದರಸಿಯಾಗುವರು" ಎಂದು ಗುರುಗಳು, ಮಂತ್ರಿಗಳು ಹೇಳಿದರು.

"ಅಯೋ ಧರ್ಮವೇ ? ಸಮಾಜವೇ ! ರಂಜನಿ ರಾಜನರ್ತಕಿ ಯಾಗಿ ನನ್ನ ಬಳಿ ಇರಬಹುದು. ಅದಕ್ಕೆ ನಿಮ್ಮ ಅಭ್ಯಂತರವಿಲ್ಲ. ಅದರೆ ಪತ್ನಿಯಾಗಲು ಸಾಧ್ಯವಿಲ್ಲ ಎಂದು ಹೇಳುವಿಯಾದರೆ ಈ ಧರ್ಮ ಸಮಾಜಗಳ ಬಂಧನವೇ ನನಗೆ ಬೇಕಾಗಿಲ್ಲ..."

"ಧರ್ಮ, ಅರ್ಥ, ಕಾಮ, ಮೋಕ್ಷಕ್ಕಾಗಿ ಧರ್ಮಪತ್ನಿ ಬೇಕೇ ಬೇಕು" ಎಂದರು ಗುರುಗಳು

"ಆಳುವವರಿಗೆ. ಅರವತ್ತು ಜನ ಎಂಬ ನಾಣ್ಣುಡಿ ಇದೆ. ದೊರೆಗಳೇ, ಅವಳು ಬೇಕಾದರೆ ನಿಮ್ಮ ಬಳಿ ಇರಲಿ. ನೀವು ಬೇರೆ ವೀರಶೈವ ಕನ್ಯೆಯನ್ನು ವಿವಾಹವಾಗಲೇ ಬೇಕು, ಇಲ್ಲದೆ ರಾಜ್ಯತ್ಯಾಗಕ್ಕೆ ಸಿದ್ಧರಾಗಬೇಕು" ಎಂದು ಮಂತ್ರಿಮಾನ್ಯರೆಲ್ಲ ಒಕ್ಕೊರಲಿನಿಂದ ಹೇಳಿದರು.

"ಧರ್ಮಕ್ಕೊಬ್ಬ ಹೆಂಡತಿ, ಪ್ರೇಮಕ್ಕೊಬ್ಬ ನರ್ತಕಿ" ಎಂಬ ನಿಮ್ಮ ನೀತಿ ನನಗೆ ಒಪ್ಪಿಗೆಯಿಲ್ಲ. ನಾನೊಲಿದ ರಂಜನಿಯೇ ನನ್ನ ದರ್ಮ ಪತ್ನಿ, ಪ್ರೇಮದ ಪತ್ನಿ, ಹೃದಯದ ರಾಣಿ, ಈ ಫಕೀರ ರುದ್ರ ಸರ್ಜನ ಹೃದಯ ಸಿಂಹಾಸನದಲ್ಲಿ

ಬೇರೊಬ್ಬ ರಾಣಿಗೆ ಸ್ಥಳವಿಲ್ಲ. ಪವಿತ್ರ ಪ್ರೇಮದ ಎದುರು ನನಗೆ ರಾಜವೈಭವ ಅಲ್ಪವೆನಿಸಿದೆ. ಹೃದಯದ ಒಲವಿಗಿಂತ ಈ ಕಿತ್ತೂರ ರಾಜ್ಯ ನನಗೆ ಹಿರಿದೆನಿಸಿಲ್ಲ" ಎಂದು ಹೇಳಿ ರಾಜ್ಯತ್ಯಾಗಕ್ಕೆ ಫಕೀರ ರುದ್ರಸರ್ಜರು ಸಿದ್ದರಾದರು,

"ಅಬ್ಬಾ! ರಂಜನಿ, ನೀನು ಮಹಾರಾಜರ ಹೃದಯಸಿಂಹಾಸನದಲ್ಲಿ ಭದ್ರವಾಗಿ ಕುಳಿತು ಬಿಟ್ಟೆಯಾ ? ಮುಂದೇನಾಯಿತು ?" ಎಂದು ಕುತೂಹಲದಿಂದ ಕೇಳಿದೆ.

ರಂಜನಿ ಮಂದಹಾಸ ಬೀರುತ್ತ. ಅಭಿಮಾನದಿಂದ ನನ್ನ ನೋಡುತ್ತ ಹೇಳಿದಳು;

"ದೊರೆಗಳು ನನಗೆ ವೀರಶೈವ ದೀಕ್ಷೆ ಕೊಡಿಸಿದರು, ವಿವಾಹವಾದರು

ನಾನು ನಿರಂಜನಿಯಾದೆ, ನನ್ನ ತಾಯಿ ಇದರಿಂದ ಸಿಟ್ಟಿಗೆದ್ದು ಉತ್ತರ ಭಾರತಕ್ಕೆ ಹೋದಳು. ದೊರೆಗಳು ರಾಜ್ಯತ್ಯಾಗ ಮಾಡಿದರು, ಅವರ ತಾಯಿ ನಮ್ಮಿಬ್ಬರನ್ನು ಕಂಡರೆ ಸಿಟ್ಟಿನಿಂದ ಕೆಂಡ ಕಾರಹತ್ತಿದರು. ಅಪ್ತೇಷ್ಟರು–ಪ್ರಜೆಗಳು ನಮ್ಮನ್ನು ಕೀಳು ದೃಷ್ಟಿಯಿಂದ ನೋಡ ಹತ್ತಿದರು. "ಓರ್ವ ನರ್ತಕಿಗಾಗಿ ರಾಜ್ಯತ್ಯಾಗ ಮಾಡಿದ ಹುಚ್ಚ ಫಕೀರ ರುದ್ರಸರ್ಜ, ಎಂದು ಜನ ಹಾಸ್ಯ ಮಾಡಹತ್ತಿದರು.

ನಮ್ಮಿಬ್ಬರ ಸೇವೆಗೆ ಕಿತ್ತೂರ ಜನ ಬದಲು ಒಪ್ಪಲ್ಲ, ಇದರಿಂದ ಸಿಟ್ಟಿಗೆದ್ದ ಮಹಾರಾಜರು ರಾಜ್ಯ ತ್ಯಾಗದೊಂದಿಗೆ ಕಿತ್ತೂರನ್ನು ತ್ಯಜಿಸಿದರು. ನಾವಿಬ್ಬರೂ ದೇಶನೂರಿಗೆ ಹೋದೆವು. ಅಲ್ಲಿ ದೊರೆಗಳು ಗುಡ್ಡದ ಮೇಲೆ ಮೊಗಲ ಪದ್ದತಿಯಂತೆ ಅರಮನೆ ಕಟ್ಟಿಸಿದರು. ಉತ್ತರ ಭಾರತದಿಂದ 300 ಜನ ಕೆಲಸದವರನ್ನು ಕರೆಸಿದರು, ಒಂದು ಮಠವನ್ನು ಕಟ್ಟಿದರು. ನೂರಾರು ಎಕರೆಯನ್ನು 'ಓರ್ವ ಜಂಗಮರಿಗಿತ್ತು. ನಮ್ಮ ಅರಮನೆಯ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಿಸಿದರು. ಆದು ರುದ್ರ, ಗಡವೆಂದು ಪ್ರಸಿದ್ದವಾಯಿತ್ತು, ಅರಮನೆಯನ್ನು "ರಂಜನಿ ಮಹಲ್' ಎಂದು ಕರೆಯಹತ್ತಿದ್ದರು. ಅರಮನೆಯ ಮುಂಭಾಗದಲ್ಲಿ ಸುಂದರವಾದ ಈಜುಗೊಳ ಸಿದ್ಧವಾಯಿತು ಅದರಲ್ಲಿ ಮಲ್ಲಿಗೆ ಗುಲಾಬಿ ಹೂವುಗಳನ್ನೂ, ಮರುಗ ದವನಗಳನ್ನೂ ಹಾಕಿ ನಾವಿಬ್ಬರೂ ಜಲಕ್ರೀಡೆಯಾಡುತ್ತಿದ್ದೆವು, ನನ್ನ ನೃತ್ಯ, ಸಂಗೀತಗಳ ಸವಿಯನ್ನು

ಸವಿಯುತ್ತಮಹಾರಾಜರು ಸುಖವಾಗಿದ್ದರು, ನಾವಿಬ್ಬರೂ ಅನೇಕ ವರುಷ ಸುಖದಿಂದ ದೇಶನೂರ ರಂಜನಿಮಹಲಿನಲ್ಲಿ ಕಾಲ ಕಳೆದೆವು. ಈ ಭೂಮಿಯಲ್ಲಿಯೆ ಸ್ವರ್ಗಸುಖನ್ನನುಭವಿಸಿದೆವು. ಪ್ರೇಮ ಬಂಧನದಲ್ಲಿ ಸಿಲುಕಿದ ನಮ್ಮಿಬ್ಬರಿಗೆ ಬೇರೆ ಯಾವ ಮೋಹವೂ ಇರಲಿಲ್ಲ. ವೃದ್ದಾಪ್ಯ ನಮ್ಮ ದೇಹಕ್ಕೆ ಬಂದರೂ ನಮ್ಮಿಬ್ಬರ ಮನಸ್ಸು ಸದಾ ಉಲ್ಲಸಿತವಾಗಿತ್ತು ದೇಶನೂರಲ್ಲಿ ಸಕಲ ಸೌಕರ್ಯಗಳಿದ್ದರೂ, ಹುಟ್ಟಿ ಬೆಳೆದ ಕಿತ್ತೂರಿನ ಮೋಹ ದೊರೆಗಳನ್ನು ಬಿಡಲಿಲ್ಲ. ಒಂದು ದಿನ ದೊರೆಗಳು ಹೇಳಿದರು:

"ರಂಜನಿ ಇಲ್ಲಿ ನಮಗೆ ಸಕಲ ಸೌಲಭ್ಯಗಳಿವೆ. ಆದರೂ ನನ್ನ ಮನ ಕಿತ್ತೂರಿನ ಸೃಷ್ಟಿ ಸೌಂದರ್ಯದತ್ತ ಹರೆಯುತ್ತಿದೆ, ಆ ಕೆರೆ ಸರೋವರಗಳು ಹಚ್ಚು ಹಸುರಿನ ಬತ್ತದ ಗದ್ದೆಗಳು ಕೈಮಾಡಿ ಕರೆಯುತ್ತಿವೆ. ನಮ್ಮ ಕೊನೆಯ ದಿನಗಳನ್ನು ಅಲ್ಲಿಯೆ ಕಳೆಯಬೇಕು. ನನ್ನ ಪೂರ್ವಜರ ಸಮಾಧಿಗಳಿರುವ ಕಲ್ಮಠದಲ್ಲಿಯೇ ನನ್ನ ಸಮಾಧಿಯಾಗಬೇಕು" ಎಂದರು.

## ಓದು ಪಠ್ಯ

# ರಾಷ್ಟ್ರೀಯತೆ : ಒಂದು ಮರುಚಿಂತನೆ

**– ಕೆ.ವಿ. ತಿರುಮಲೇಶ್**

ರಾಷ್ಟ್ರೀಯತೆಯೆನ್ನುವುದೊಂದು ಮನಸ್ಥಿತಿ ; ಸಮೂಹ ಕಲ್ಯಾಣಕ್ಕೆ ಅಗತ್ಯವೆನಿಸುವ ಒಂದು ಧರ್ಮದ ಕುರಿತಾದ ಅರಿವು ; ಅದು ವರ್ಣವನ್ನಾಗಲಿ ವಂಶವನ್ನಾಗಲಿ ಅವಲಂಬಿಸಿರದೆ, ಸಮಾನ ಚಿಂತನೆ ಹಾಗೂ ಉದ್ದೇಶಗಳನ್ನು ಅವಲಂಬಿಸಿರುತ್ತದೆ ಎನ್ನುತ್ತಾನೆ ಇಟಲಿಯ ಕ್ರಾಂತಿಕಾರಿ ಜೂಸೆಪೆ ಮಜಿನಿ. ಹೀಗಿರುತ್ತ ರಾಷ್ಟ್ರೀಯತೆಯ ಕಲ್ಪನೆಯು ಕಾಲದಿಂದಕಾಲಕ್ಕೆ ಬದಲಾಗುವುದರಲ್ಲಿ ಆಶ್ಚರ್ಯವೇನಿಲ್ಲ : ರಾಷ್ಟ್ರಗಳು ಹುಟ್ಟುತ್ತವೆ, ಬೆಳೆಯುತ್ತವೆ ಹಾಗೂ ನಾಶ ವಾಗುತ್ತವೆ. ಪುರಾತನ ಕಾಲದಲ್ಲಿ ಭಾರತವೆಂಬ ರಾಷ್ಟ್ರೀಯ ಕಲ್ಪನೆಯೊಂದು ಇತ್ತೆ? ಇದ್ದರೆ ಅದರ ವ್ಯಾಪ್ತಿ ಇಂದು ನಾವು ಭಾರತವೆಂದು ಕರೆಯುವ ? ಅಥವಾ ಮಾನಸಿಕವಾಗಿ ಅರಿಯುವ ರಾಷ್ಟಕ್ಕೆ ಸರಿಸಮವಾಗಿತ್ತೆ? ಪಾಕಿಸ್ತಾನ, ಬಂಗ್ಲಾದೇಶ, ಭೂತಾನ, ನೇಪಾಳ, ಶ್ರೀಲಂಕ (ಬಹುಶಃ ಬರ್ಮಾದೇಶ ಕೂಡ) ಇಂದಿನ ಭಾರತದಿಂದ ಬೇರೆಯಾಗಿರುವುದು ಎಷ್ಟರ ಮಟ್ಟಿಗೆ ಸಮಂಜಸ ? ಸಿಕ್ಕಿಮನ್ನು ಭಾರತದ ಗಣರಾಜ್ಯದಲ್ಲಿ ಸೇರಿಸಿಕೊಂಡುದು ಸರಿಯೆ ತಪ್ಪೆ? ಶ್ರೀಲಂಕವು ಎರಡು ರಾಷ್ಟಗಳಾಗಿ ಒಡೆಯುವುದರಿಂದ ಮಾತ್ರವೆ ಅಲ್ಲಿ ಸಮೂಹ ಕಲ್ಯಾಣ ಸಾಧ್ಯವೆ? ಭಾಷಾವಾರು ಪ್ರಾಂತ್ಯ ರಚನೆಯಿಂದಾಗಿ ಭಾರತದ ರಾಷ್ಟ್ರೀಯತೆಗೆ ಒಳಿತಾಗಿದೆಯೆ, ಕೆಡುಕಾಗಿದೆಯೆ ? ಭಾರತವು ಬ್ರಿಟಿಷರ ಆಡಳಿತಕ್ಕೆ ಒಳಗಾಗದೆ ಇರುತ್ತಿದ್ದರೆ ನಮಗೆ ರಾಷ್ಟ್ರೀಯ ಕಲ್ಪನೆ ಬರುವುದು ಸಾಧ್ಯವಿತ್ತೆ ? ಖಾಲಿಸ್ತಾನದಿಂದ ಮಾತ್ರವೆ ಸಿಖ್ ಸಮಸ್ಯೆ ಬಗೆ ಹರಿಯುವುದೆ ? ಮುಂದಿನ ಶತಮಾನದಲ್ಲಿ ಭಾರತದ ಭೂಪಟ ಇದೇ ರೀತಿ ಇರುತ್ತದೆಯೆ ? ರಾಷ್ಟ್ರೀಯತೆಯ ಮಾತೆತ್ತಿದ ತಕ್ಷಣ ಇಂಥ ಹಲವಾರು ಪ್ರಶ್ನೆಗಳೇಳುತ್ತವೆ ಹಾಗೂ ಈ ಪ್ರಶ್ನೆಗಳಿಗೆ ಸುಲಭವಾದ ಉತ್ತರ ಗಳಿಲ್ಲವೆಂಬುದನ್ನು ಮನಗಾಣಬೇಕು.

ರಾಷ್ಟ್ರೀಯತೆಯೆನ್ನುವುದು ಪ್ರಧಾನವಾಗಿ ರಾಜಕೀಯವಾದ ಕಲ್ಪನೆ. ಆದರೆ ರಾಜಕೀಯವೊಂದೆ ಮನುಷ್ಯ ಸಮೂಹಗಳ ಸಾಮಾಜಿಕ ಹಾಗೂ ಭಾವನಾತ್ಮಕ

ಬದುಕನ್ನು ನಿಯಂತ್ರಿಸುವುದಿಲ್ಲ. ಇತರ ಹಲವಾರು ಸತ್ಯಗಳನ್ನು ನಾವು ಗುರುತಿಸಿಕೊಳ್ಳಬೇಕಾಗುತ್ತದೆ. ದಕ್ಷಿಣ ಭಾರತದವನಾದ ನಾನು ಉತ್ತರ ಭಾರತವನ್ನು ಸುತ್ತು ಉಡುಪಿ ಹೋಟೆಲನ್ನು ಕಂಡು ಸಂತೋಷಗೊಳ್ಳಬಹುದು. ಹಾಗೆಯೆ ಉತ್ತರದವರು ಕನ್ಯಾಕುಮಾರಿಯಲ್ಲಿ ತಂದೂರಿ ರೋಟ ಸಿಗುವುದನ್ನು ಕಂಡು ಖುಷಿಪಡಬಹುದು, ದಾಡಿ ಬೆಳೆಸಿ ಬಹುಶಃ ಮುಸ್ಲಿಮನಂತೆ ಕಾಣಿಸುತ್ತಿರುವ ನನ್ನನ್ನು ನೋಡಿ ಗುರುತು ಪರಿಚಯವಿರದ ಹೈದರಾಬಾದಿ ಮುಸ್ಲಿಮರು ಅದೊಂದೆ ಕಾರಣಕ್ಕೆ ಬಲಗೈಯ ಬೆರಳುಗಳಿಂದ ಸಲಾಮ್ ಮಾಡುವುದುಂಟು. ಇಂಗ್ಲೆಂಡಿನಲ್ಲಿದ್ದಾಗ ನಮ್ಮ ವಸತಿಗೃಹದಲ್ಲಿ ವಾಸವಾಗಿದ್ದ ಆಫ್ರಿಕನ್, ಫಿಲಿಪಿನೊ ಹಾಗೂ ಪಾಕಿಸ್ತಾನಿಗಳಲ್ಲಿ ನನಗೆ ಬಹಳ ಹತ್ತಿರವಾಗಿದ್ದವರು ಪಾಕಿಸ್ತಾನಿಗಳೇ, ಪ್ರತಿಯೊಬ್ಬ ವ್ಯಕ್ತಿಯನ್ನು ನೋಡಿದರೆ ಆತ ಹಲವು ವರ್ತುಲಗಳಲ್ಲಿ ಏಕಕಾಲದಲ್ಲೆಂಬಂತೆ ವರ್ತಿಸುವುದನ್ನು ಕಾಣುತ್ತೇವೆ. ಭಾಷೆಯಿಂದ, ಜಾತಿಯಿಂದ, ವರ್ಣದಿಂದ, ವಂಶದಿಂದ, ಪ್ರಾದೇಶಿಕತೆಯಿಂದ, ವೃತ್ತಿಯಿಂದ, ರಾಜಕೀಯ ಸಿದ್ಧಾಂತ ದಿಂದ, ಆರ್ಥಿಕ ಪರಿಸ್ಥಿತಿಯಿಂದ, ಮದುವೆ ಅಥವ ಪ್ರೀತಿಯ ಮೂಲಕ ಉಂಟಾಗುವ ಸಂಬಂಧಗಳಿಂದ ಮನುಷ್ಯರು ಬೇರೆ ಬೇರೆ ಗುಂಪುಗಳಿಗೆ ಸೇರಿ ಕೊಂಡಿರಬಹುದು. ಈ ಸಂಗತಿಗಳು ಕೆಲವೊಮ್ಮೆ ಒಂದಕ್ಕೊಂದು ಸಮನಾಗಿ ಯಾವ ಘರ್ಷಣೆಯನ್ನೂ ಕೊಡದಿರಬಹುದು. ಉದಾಹರಣೆಗೆ ಮತೀಯ ರಾಷ್ಟ್ರಗಳಲ್ಲಿ ಮತ ಮತ್ತು ರಾಷ್ಟ್ರೀಯತೆಯ ನಡುವೆ ಘರ್ಷಣೆ ನಡೆಯುವ ಪ್ರಸಂಗವಿಲ್ಲ. ಆದರೆ ಹೆಚ್ಚಾಗಿ ಇಂಥ ಸಮಂಜಸ ಗುಂಪುಗಳ ನಡುವೆ ಇರುವುದೇ ಇಲ್ಲ.

ಬದುಕಿನ ಉಪಾಧಿಗಳಿಗೆ ಬದ್ಧನಾಗಿದ್ದಂತೆ ವ್ಯಕ್ತಿಯ ಮೇಲಿನ ಒತ್ತಡವೂ ಹೆಚ್ಚು. ಯಾಕಂದರೆ ಪ್ರತಿಯೊಂದು ಉಪಾಧಿಯೂ ಅವನಿಂದ ಸಂಪೂರ್ಣ ನಿಷ್ಠೆಯನ್ನು ಬಯಸುತ್ತದೆ. ಉದಾಹರಣೆಗೆ ಮತ ಮತ್ತು ರಾಷ್ಟ್ರೀಯತೆಯ ನಡುವಿನ ಸಂಘರ್ಷವನ್ನು ನೋಡಬಹುದು. ಮತೀಯವಲ್ಲದ ಭಾರತದಲ್ಲಿ ಮುಸ್ಲಿಮನಾಗಿರುವುದೆಂದರೆ ಇತರರ ಸಂದೇಹಕ್ಕೆ ಗುರಿಯಾಗುವುದು, ಇಸ್ಲಾಂ ರಾಷ್ಟ್ರೀಯತೆಗೆ ವಿರೋಧ ವ್ಯಕ್ತಪಡಿಸದೆ ಇದ್ದರೂ ಅದೊಂದು ಲೋಕಧರ್ಮವಾದ್ದರಿಂದ ರಾಷ್ಟ್ರೀಯತೆಯನ್ನು ಮೀರಿ ಧರ್ಮಕ್ಕೆ ನಿಷ್ಠನಾಗುವುದನ್ನು ಅಪೇಕ್ಷಿಸುತ್ತದೆ. ಯಾವ ರಾಷ್ಟ್ರಕ್ಕೂ ಬದ್ಧರಾಗಿರದೆ ಪರಂಪರಾಗತ ಧಾರ್ಮಿಕ

ಜೀವನ ನಡೆಸುತ್ತಿದ್ದ ಯೆಹೂದಿಗಳನ್ನು ಯುರೋಪಿ ನಿಂದ ಹೊರಹಾಕುವುದಕ್ಕೂ ಜನಾಂಗ ಹತ್ಯೆಗೆ ಗುರಿಯಾಗಿಸುವುದಕ್ಕೂ ಇದೊಂದೆ ನೆಪವು ಸುಲಭವಾಗಿ ದೊರೆತ ಕಾರಣವಾಯಿತೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ದ್ವಿತೀಯ ಮಹಾಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ಇಸ್ರೇಲ್ ಗಣರಾಜ್ಯವು ಡಯಾಸ್ಪೋರಾದಲ್ಲಿ ಹಂಚಿಹೋಗಿದ್ದ ಬೇರೆ ಬೇರೆ ದೇಶಗಳ ಯಹೂದಿಗಳ ಆಯಾ ರಾಷ್ಟ್ರೀಯತೆಯನ್ನು ಒಮ್ಮೆಲೆ ವಿಪರ್ಯಾಸಕ್ಕೆ ಗುರಿಪಡಿಸಿದಂತೆ, 1947ರಲ್ಲಿ ಭಾರತವು ಇಬ್ಭಾಗವಾಗಿ ಮತದ ತಳಹದಿಯಲ್ಲಿ ಪಾಕಿಸ್ತಾನವು ಅಸ್ತಿತ್ವಕ್ಕೆ ಬರುವುದರ ಮೂಲಕ ಪಾಕಿಸ್ತಾನಕ್ಕೆ ವಲಸೆ ಹೋಗದೆ ಭಾರತದಲ್ಲುಳಿದ ಮುಸ್ಲಿಮರ ಜನಜೀವನವು ಹಿಂದೂಗಳ ಸಂದೇಹ ದೃಷ್ಟಿಗೆ ಗುರಿಯಾಗಿರುವುದನ್ನು ಕಾಣಬಹುದು.

ಜನ ಸಮೂಹದ ಭಾವುಕ ಪ್ರಪಂಚವನ್ನು ಅತಿ ತೀವ್ರವಾಗಿ ಕೆದಕುವ ಮತ, ಭಾಷೆ, ವರ್ಣಗಳೇ ಮುಂತಾದ ಶಕ್ತಿಗಳಲ್ಲಿ ಯಾವುದೇ ಒಂದಾದರೂ ರಾಷ್ಟ್ರೀಯತೆಗೆ ತಳಹದಿಯಾಗಿ ನಿಲ್ಲಬಹುದೇ ಎಂದರೆ ಅದೂ ಇಲ್ಲ. ತೀರ ಈಚಿನ ಧರ್ಮವಾದ ಇಸ್ಲಾಂ ಕೂಡ ಎಲ್ಲ ಸುಸ್ಥಿರ ರಾಷ್ಟ್ರೀಯತೆಗೆ ಎಡೆ ಗೊಟ್ಟಿರುವುದು ಕಂಡು ಬರುವುದಿಲ್ಲ. ಇಡಿಯ ಮಾನವಕೋಟಿಯನ್ನು ದೇವರ ವಿಶ್ವಾಸದಲ್ಲಿ ಒಂದುಗೂಡಿಸುವ ಮಹತ್ವಾಕಾಂಕ್ಷೆ ಹೊಂದಿದ ಇಸ್ಲಾಂ ಅದರ ಆರಂಭ ದಿಸೆಯಲ್ಲಿ ಸಾಕಷ್ಟು ಗೆಲುವನ್ನು ಗಳಿಸಿದರೂ ನಂತರದ ಇತಿಹಾಸ ಈ ರೀತಿ ಮುನ್ನಡೆಯಲೇ ಇಲ್ಲ, ಎಂದರೆ ಧರ್ಮವೊಂದೇ ಅಂತಿಮ ನಿರ್ದೇಶನವಲ್ಲ ಎಂದಾಯಿತು. ಸದ್ಯದ ಇರಾನ್-ಇರಾಕ್ ಸಮರದ ಹಿನ್ನೆಲೆಯಲ್ಲಿ ಕೇವಲ ಶಿಯಾ-ಸುನ್ನಿ ಮತಭೇದವೊಂದೇ ಇರುವುದಲ್ಲ ; ಇನ್ನೂ ಹಿಂದಕ್ಕೆ ಹೋದರೆ, ಶಿಯಾ-ಸುನ್ನಿ ಮತಭೇದ ಇಷ್ಟೊಂದು ದೊಡ್ಡದಾಗಿ ಬೆಳೆಯುವುದಕ್ಕೆ ಅರಬ್ ಮತ್ತು ಪರ್ಶಿಯನ್ ಸಂಸ್ಕೃತಿಗಳ ಕೆಲವೊಂದು ಮೂಲಭೂತ ವ್ಯತ್ಯಾಸಗಳು ಕಾರಣವಾಗಿರಲಾರವೆ ಎಂದು ಕೂಡ ಅನಿಸುತ್ತದೆ. ಪಶ್ಚಿಮ ಪಾಕಿಸ್ತಾನ ಮತ್ತು ಪೂರ್ವಪಾಕಿಸ್ತಾನಗಳು ಬೇರಾಗುವುದಕ್ಕೆ ಭೌಗೋಳಿಕ ಕಾರಣವೊಂದೆ ಮುಖ್ಯವಾಗಿರಲಿಲ್ಲ. ಸದ್ಯ ಪಾಕಿಸ್ತಾನದಲ್ಲಿ ಪಠಾಣರು ಮತ್ತು ಮೊಹಾಜಿರರ ನಡುವೆ ಆಗಾಗ ಸಂಭವಿಸುತ್ತಿರುವ ಘರ್ಷಣೆಯ ಕಾರಣಗಳೂ ಮತಕ್ಕೆ ಹೊರಗಿನವೇ. ಆದೇ ರೀತಿ, ಭಾಷಾ ಸಮಾನತೆಯಾಗಲಿ,

ವರ್ಣಸಮಾನತೆಯಾಗಲಿ, ಸೈದ್ಧಾಂತಿಕ ವಿಶ್ವಾಸಗಳಾಗಲಿ ರಾಷ್ಟ್ರೀಯತೆಯ ತಳಹದಿಯಾಗಿ ಬಹುಕಾಲ ಎಲ್ಲಾ ಉಳಿದಿಲ್ಲವೆಂಬುದಕ್ಕೂ ಉದಾಹರಣೆಗಳನ್ನು ಕೊಡಬಹುದು. ನಾಜಿಸಮಿನ ತುಳಿತಕ್ಕೊಳಗಾದ ಯೆಹೂದ್ಯರಲ್ಲಿ ಹಲವರು ಜರ್ಮನ್ ಮಾತೃಭಾಷೆಯುಳ್ಳವರೇ ಆಗಿದ್ದರಲ್ಲದೆ ಅವರಲ್ಲಿ ಹಲವು ಮಂದಿ ಪ್ರಸಿದ್ಧ ಲೇಖಕರೂ ಸೇರಿದ್ದರು. ಇನ್ನು ವರ್ಣ ಮೂಲವನ್ನು ನೋಡಿದರೆ, ಪರಸ್ಪರ ಹೋರಾಡುತ್ತ ಬಂದಿರುವ ಹಿಂದೂ ಆರ್ಯರು ಮತ್ತು ಮುಸ್ಲಿಂ ಪರ್ಶಿಯನ್ನರು ಒಂದೇ ಮೂಲದಿಂದ ಬಂದವರು. ಅಂತರಾಷ್ಟ್ರೀಯ ಒಕ್ಕೂಟದಲ್ಲಿ ನಂಬಿಕೆಯಿರುವ ಕಮ್ಯೂನಿಸಂ ಕೂಡ ರಶಿಯಾ ಮತ್ತು ಚೀನಾಗಳನ್ನು ಒಂದುಗೂಡಿಸಲು ಸಮರ್ಥವಾಗಿಲ್ಲ. ಇಂಥ ಉದಾಹರಣೆಗಳು ಅನೇಕ.

ಈ ಉಪಾಧಿಗಳನ್ನು ತೆಗೆದುಕೊಂಡರೆ ಮನುಷ್ಯ ಸಮಾಜದ ದೃಷ್ಟಿಯಿಂದ ಯಾವುದು ಹೆಚ್ಚು ಶಕ್ತಿಪೂರ್ಣವಾದುದು, ಯಾವುದು ದುರ್ಬಲವಾದುದು ಎಂದು ನಿರ್ಣಯಿಸುವುದು ಕಷ್ಟವಾಗುತ್ತದೆ. ಬಹುಶಃ ಇವೆಲ್ಲವೂ ಸಾಪೇಕ್ಷವಾದುವು. ಯಾವುದಕ್ಕೆ ಹೊರಗಿನಿಂದ ಗಂಡಾಂತರವಿದೆಯೆಂದು ಅನಿಸುತ್ತದೆ ಆವಾಗ ಅದು ಜಾಗೃತವಾಗುತ್ತದೆ. ತಮಿಳಿನಿಂದ ಅಪಾಯವಿದೆಯೆಂದು ಕನ್ನಡತನವೂ, ಉತ್ತರದಿಂದ ಅಪಾಯವಿದೆಯೆಂದು ದ್ರಾವಿಡತನವೂ, ಪಾಕಿಸ್ತಾನ ಅಥವ ಚೀನಾದಿಂದ ಅಪಾಯವಿದೆಯೆಂದು ಅನಿಸಿದಾಗ ಭಾರತೀಯತೆಯ ಜಾಗೃತಗೊಳ್ಳಬಹುದು. ಆದ್ದರಿಂದಲೆ ರಾಷ್ಟ್ರೀಯತೆಯೆನ್ನುವುದು ಯಾವಾಗಲೂ ಯುದ್ಧ ಪರಿಸ್ಥಿತಿಯಲ್ಲಿ (ಅಥವ ಅಂಥದೇ ಇತರ ಸ್ಪರ್ಧಾತ್ಮಕ ಸಂದರ್ಭಗಳಲ್ಲಿ) ಉದ್ರೇಕಗೊಳ್ಳುವಂಥ ಒಂದು ಮನಸ್ಥಿತಿ. ಇದು ಗೊತ್ತಿದ್ದೆ ಆಳುವ ಸರಕಾರ ಕೆಲವೊಮ್ಮೆ ಆಂತರಿಕ ಗೊಂದಲಗಳನ್ನು ಮುಚ್ಚಿಡುವುದಕ್ಕಾಗಿ ಸುಳ್ಳು ಸುಳ್ಳೇ ಬಾಹ್ಯಾಪಾಯದ ಗುಲ್ಲನ್ನು ಎಬ್ಬಿಸುತ್ತದೆ. ಹಿಂದೆ ರಾಜ ಮಹಾರಾಜರುಗಳು ದಂಡಯಾತ್ರೆಗಳನ್ನು ಅಶ್ವಮೇಧ ಯಾಗಗಳನ್ನು ಕೈಗೊಳ್ಳುತ್ತಿದ್ದರಲ್ಲವೆ !

ರಾಜಕೀಯ ಅರ್ಥದಲ್ಲಿ ರಾಷ್ಟ್ರೀಯತೆಯನ್ನುವ ಕಲ್ಪನೆ ಬಹಳ ಹಳತೇನಲ್ಲ ; ಬಹುಶಃ ಎರಡು ಶತಮಾನಗಳಿಂದ ಬೆಳೆದು ಬಂದಿರುವಂಥದು. ಹಿಂದಿನ ಕಾಲದಲ್ಲಿ ರಾಜ್ಯಗಳಿದ್ದುವು, ಸಾಮ್ರಾಜ್ಯಗಳಿದ್ದುವು, ಗ್ರೀಸ್ ಮೊದಲಾದ ಕಡೆ ಸ್ವಯಮಾಡಳಿತದ ನಗರಗಳಿದ್ದುವು. ಒಂದಲ್ಲ ಒಂದು ರೀತಿಯ ಸಮೂಹ ಭಾವನೆಗಳು ಎಲ್ಲಾ ಕಾಲದಲ್ಲಿಯೂ ಇದ್ದುವು. ಟ್ರಾಮ್ಯ ವಿರುದ್ಧ ಹೋರಾಟದಲ್ಲಿ

ಗ್ರೀಸಿನ ಎಲ್ಲ ರಾಜ್ಯಗಳೂ ಯೋಧರನ್ನು ಕಳಿಸಿದವು, ಎಂದರೆ ಗ್ರೀಸ್ ಎಂಬೊಂದು ಸಮಹ ಭಾವನೆ ಇದ್ದಿರಲೇಬೇಕು. ಏನೇ ಇದ್ದರೂ ಇಂದಿನ ರಾಜಕೀಯ ಅರ್ಥದಲ್ಲಿ ರಾಷ್ಟ್ರೀಯತೆಯೆನ್ನುವ ಕಲ್ಪನೆ 19ನೇ ಶತಮಾನಕ್ಕಿಂತ ಹಿಂದೆ ಹೋಗಲಾರದು. ಇಂದು, ಎರಡು ಮಹಾಯುದ್ಧಗಳ ನಂತರ, ನಾವು ರಾಷ್ಟ್ರೀಯತೆಯಿಂದ ಅಂತಾರಾಷ್ಟ್ರೀಯತೆಯ ಕಡೆಗೆ ನೋಡುತ್ತಿದ್ದೇವೆ. ಯಾವುದೇ ಅಚ್ಚುಕಟ್ಟಾದ ರಾಷ್ಟವೂ ಒಂದು ಸ್ವಯಂ ಪೂರ್ಣ ದ್ವೀಪದಂತೆ ಬದುಕುವುದು ಸಾಧ್ಯವಿಲ್ಲವೆನ್ನುವುದು ಹೆಚ್ಚೆಚ್ಚು ಮನವರಿಕೆಯಾಗುತ್ತಾ ಇದೆ. ಇದಕ್ಕೆ ಬಹುಶಃ ಆರ್ಥಿಕ ಪರಿಸ್ಥಿತಿಯೊಂದೇ ಕಾರಣವಾಗಿರದೆ, ಎಲ್ಲ ಮನುಷ್ಯರೂ ಒಂದೇ ದೋಣಿಯ ಯಾತ್ರಿಕರೆಂಬ ಅರಿವೂ ಮಹತ್ವದ ಕಾರಣವಾಗಿದೆಯೆಂದು ತೋರುತ್ತದೆ. ಮನುಷ್ಯ ಕುಲ ವೊಂದೆ ವಲಂ ಎಂದು ರಾಷ್ಟ-ರಾಷ್ಟಗಳ ಭೇದವನ್ನು ತೊಡೆದು ಇಡೀ ಜಗತ್ತನ್ನೇ ಒಂದು ರಾಷ್ಟವನ್ನಾಗಿ ಮಾಡುವುದು ನಮ್ಮ ಸಕಲ ಸಮಸ್ಯೆಗಳಿಗೂ ಪರಿಹಾರವಾಗಬಹುದೆ ? ಈ ಗುರಿಯು ಎಷ್ಟೇ ಆಶಾದಾಯಕವಾಗಿ ಕಾಣಿಸಿದರೂ, ಮನುಷ್ಯರು ಹೇಗೆ ಪೂರ್ವಕಾಲದ ಬುಡಕಟ್ಟು ಜೀವನಕ್ಕೆ ಹೇಗೆ ಹಿಂದಿರುಗಲಾರರೋ ಹಾಗೆಯೆ ಎಲ್ಲ' ಭಿನ್ನತೆಗಳನ್ನು ತೊಡೆದು ಏಕ ರಾಷ್ಟದ ಕಡೆಗೂ ಹೋಗುವುದು ಬಹುಶಃ ಅಸಾಧ್ಯದ ಮಾತು. ಎಷ್ಟೇ ಸಂಘರ್ಷಗಳಿಂದ ಕೂಡಿಕೊಂಡಿದ್ದರೂ ಇವೆರಡು ಧ್ರುವಗಳ ನಡುವೆಯ ಮನುಷ್ಯ ಜೀವನ ತನ್ನ ಸಾಧ್ಯತೆಗಳನ್ನು ಕಂಡುಕೊಳ್ಳಬೇಕು.

ಇದರಲ್ಲಿ ಹತಾಶೆಗೊಳ್ಳುವುದಕ್ಕೇನೂ ಇಲ್ಲ. 1980ರಲ್ಲಿ ವೈದ್ಯಕೀಯಕ್ಕೆಂದು ನೊಬೆಲ್ ಪಾರಿತೋಷಕ ಪಡೆದ ಪ್ರೊಫೆಸರ್ ಶಾನ್‌ದೂಸೆ ಎಂಬ ವಿಜ್ಞಾನಿ ದಿ ಕುರಿಯರ್ (ಸಂಖ್ಯೆ 9 ; ಇಸವಿ 1986 ; ಪುಟ 34) ಪತ್ರಿಕೆಯಲ್ಲೊಂದು ಲೇಖನವನ್ನು ಬರೆದಿದ್ದಾರೆ. ಜೈವಿಕ ವೈವಿಧ್ಯತೆಯನ್ನುವುದು ಹೇಗೆ ಜೀವವಿಕಸನಕ್ಕೆ ಅಗತ್ಯವೆನ್ನುವುದನ್ನು ವಿವರಿಸುತ್ತ (ಮನುಷ್ಯನ ಜೆನಿಟಕ್ ಸಾಧ್ಯತೆಗಳೇ ವಿಶ್ವದ ಅಣುಗಳ ಒಟ್ಟಾರೆ ಮೊತ್ತಕ್ಕಿಂತ ಜಾಸ್ತಿ !), ನಮ್ಮ ಸಾಂಸ್ಕಾರಿಕ ಬದುಕಿನ ಬೆಳವಣಿಗೆಗೆ ಕೂಡ ಇಂಥದೇ ವೈವಿಧ್ಯತೆಯ ಅಗತ್ಯವಿದೆಯೆಂದು ಈ ವಿಜ್ಞಾನಿಯ ವಾದ. ಇಂದಿನ ಜಗತ್ತು ಎರಡು ಅಪಾಯಗಳನ್ನು ಎದುರಿಸಬೇಕಾಗಿದೆ : ಸಾಮಾನೀಕರಣ (Standardization) ಮತ್ತು ಅಸಹಿಷ್ಣುತೆ (Intolevance), ಸಾಮಾನ್ಯೀಕರಣವೆನ್ನುವುದು ಜೈವಿಕ ಕ್ರಿಯೆಯಲ್ಲಿ ಹೇಗೋ ಹಾಗೆ ವಿಕಸನವನ್ನು

ನಿಲ್ಲಿಸಿ ವಿನಾಶಕ್ಕೆ ಕಾರಣವಾಗುವುದು, ಅಸಹಿಷ್ಣುತೆ ಕೂಡ ನಮ್ಮ ಬದುಕು ಮತ್ತು ಮನಸ್ಸಿನ ಗಡಿಗಳನ್ನು ಮುಚ್ಚಿ ಬಿಡುವುದರ ಮೂಲಕ ಸಾಮಾನ್ಯೀಕರಣ ಮಾಡುವುದನ್ನೆ ಮಾಡುತ್ತದೆ : ಎಂದರೆ ವಿಕಸನಕ್ಕೆ ಮಾರಕವಾಗುತ್ತದೆ.

ಹೇಗೆ ರಾಷ್ಟ್ರವೆನ್ನುವ ಘಟಕವು ಒಂದು ದ್ವೀಪವಲ್ಲವೋ ಹಾಗೆ ಮತ ಧರ್ಮಭಾಷೆ ಇತ್ಯಾದಿಗಳು ಕೂಡ ದ್ವೀಪಗಳಲ್ಲ, ಇತರ ಸಂಸ್ಕೃತಿಗಳೊಂದಿಗೆ ಸಂಪರ್ಕ ಒಂದು ಸಂಸ್ಕೃತಿಯ ಬೆಳವಣಿಗೆಗೆ ತೀರ ಅಗತ್ಯ. ಉಷ್ಟಪಕ್ಷಿಯ "ನೀ ನನ್ನ ಮುಟ್ಟ ಬ್ಯಾಡ" ಧೋರಣೆಯಿಂದ ಯಾವ ಘಟಕವೂ ಬೆಳೆಯಲಾರದು. ತನ್ನ ತನವನ್ನು ಬಿಟ್ಟುಕೊಡದೆ ಒಂದೊಂದು ಘಟಕವೂ ಹೇಗೆ ಬೆಳೆಯಬೇಕೆನ್ನುವುದೆ ಮೂಲಭೂತವಾದ ಸಮಸ್ಯೆ. ಕೆಲವೊಮ್ಮೆ ಹೊರಗಿ ನಿಂದ ಸಾಲ ಪಡೆಯುವುದು ಅಗತ್ಯವಾಗುತ್ತದೆ. ಉದಾಹರಣೆಗೆ, ಭಾಷೆಯ ಬೆಳವಣಿಗೆಗೆ ಬೇರೆ ಭಾಷೆಗಳ ಸಂಪರ್ಕ ಆಗಾಗ ಬೇಕಾಗುವುದು ಕಂಡು ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ಕೆಲವೊಂದು ಭಾಷೆಗಳು, ಮತ ಧರ್ಮಗಳು ಸಂಸ್ಕೃತಿಗಳು, ರಾಷ್ಟ್ರಗಳು ಕೂಡ ನಾಶವಾಗುವುದು ಸಾಧ್ಯವಿಲ್ಲವೆ ಎಂದು ಕೇಳಿದರೆ ಅಂಥ ಸಾಧ್ಯತೆಯಿದೆಯೆಂದೆ ಹೇಳಬೇಕಾಗುತ್ತದೆ. ಆದರೆ ಅತಿ ರಕ್ಷಣೆ ಇದಕ್ಕೆ ಉತ್ತರವಲ್ಲ. ಒಂದು ಸಂಸ್ಕೃತಿಯು ಇತರ ಸಂಸ್ಕೃತಿಗಳ ಸಂಪರ್ಕಮಾತ್ರಕ್ಕೆ ನಾಶವಾಗಬಲ್ಲುದಾದರೆ ಅಂಥ ಸಂಸ್ಕೃತಿಯನ್ನು ಕಾಪಾಡುವ ಅಗತ್ಯವಾದರೂ ಇದೆಯೇ ? ಒಂದು ಸಂಸ್ಕೃತಿಯ ಬಲವರ್ಧನೆ ಮಾಡುವುದೆಂದರೆ ಅದರ ಅಂತಃಸತ್ವವನ್ನು ವೃದ್ಧಿಸುವುದೊಂದೇ ಆಗಿದೆ.

ಹಾಗೆಯೇ ಒಂದು ರಾಷ್ಟ್ರವೆಂದರೆ ಅದಕ್ಕೂ ಎರಡು ರೀತಿಯ ಬದುಕುಗಳಿವೆ. ಅದರ ಬಾಹ್ಯ ಸಂಪರ್ಕಕ್ಕೆ, ಇತರ ರಾಷ್ಟ್ರಗಳ ಮಧ್ಯೆ ಅದರ ಅಸ್ತಿತ್ವ ಹೇಗಿದೆ ಎಂಬ ಪ್ರಶ್ನೆಗೆ ಸಂಬಂಧಿಸಿ ಒಂದು ಮುಖ. ಆಂತರಿಕ ಜೀವನಕ್ಕೆ ವಿವಿಧ ಘಟಕಗಳು ಪರಸ್ಪರ ಹೇಗೆ ವರ್ತಿಸುತ್ತವೆ ಎಂಬುದಕ್ಕೆ ಸಂಬಂಧಿಸಿ ಇನ್ನೊಂದು ಮುಖ. ಬಾಹ್ಯದ ಒತ್ತಡಗಳು ಒಂದು ರಾಷ್ಟ್ರವನ್ನು ದುರ್ಬಲ ಗೊಳಿಸಬಹುದಾದಂತೆಯೆ, ಆಂತರಿಕ ಸಂಘರ್ಷಗಳು ಕೂಡ ಅದರ ಶಕ್ತಿಯನ್ನು ನಾಶಗೊಳಿಸಬಲ್ಲವು. ಭಾಷೆ, ಮತ, ವರ್ಣ, ಭೂಗೋಳ, ರಾಜಕೀಯ ಸಿದ್ಧಾಂತ ಮುಂತಾದ ಎಲ್ಲದರಲ್ಲಿ ಏಕಮುಖವಾದ ರಾಷ್ಟ್ರವೊಂದು ಎಲ್ಲೂ ದೊರೆಯಲಾರದು, ಆಂತರಿಕ ಭಿನ್ನತೆಗಳನ್ನು ಒಪ್ಪಿಕೊಂಡೇ ರಾಷ್ಟ್ರವೆಂಬುದು ಬದುಕಬೇಕು.

ಹೀಗಿರುತ್ತ ಅತ್ಯಂತ ಸಮೂಹ ಸಂಘರ್ಷಗಳನ್ನು ಹೊಂದಿರುವ ಭಾರತದಂಥ ದೇಶದಲ್ಲಿ ಲೇಖಕನೊಬ್ಬ ರಾಷ್ಟ್ರೀಯತೆಯ ಬಗ್ಗೆ (ಹಾಗೂ ಈ ಸಂಘರ್ಷಗಳ ಬಗ್ಗೆ) ಯಾವ ರೀತಿಯ ಧೋರಣೆಯನ್ನು ಹೊಂದಿರಬೇಕೆಂಬ ಪ್ರಶ್ನೆ ಹೇಳುತ್ತದೆ. ರಾಷ್ಟ್ರೀಯತೆಯನ್ನು ಕಾಪಾಡುವುದಕ್ಕಾಗಲಿ, ಅದರ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದಕ್ಕಾಗಲಿ ಸಾಹಿತ್ಯ ರಚನೆಯಾಗಬೇಕೆಂದು ನನಗನಿಸುವುದಿಲ್ಲ. ಸಾಹಿತ್ಯದ ಮೇಲಿನ ಜವಾಬ್ದಾರಿ ಇದಕ್ಕಿಂತ ಸೂಕ್ಷ್ಮವಾದುದು. ರಾಷ್ಟ್ರೀಯತೆಯನ್ನು ಕಾಪಾಡುವುದಕ್ಕೆ ಸರಕಾರವಿದೆ ಹಾಗೂ ರಾಷ್ಟ್ರೀಯತೆಯನ್ನುವುದೊಂದು ಸಾಧನವೇ ಹೊರತು ಅಂತಿಮ ಗುರಿಯಲ್ಲ. ರಾಷ್ಟ್ರೀಯತೆಯ ಹೆಸರಲ್ಲಾಗಲಿ, ಇನ್ನಾವುದೇ ವ್ಯವಸ್ಥೆ ಅಥವಾ ಹಿತಾಸಕ್ತಿಗಳ ಹೆಸರಲ್ಲಾಗಲಿ ನಡೆಯಬಹುದಾದ ವಿಕಸನ ವಿರೋಧಿ ಕೃತ್ಯಗಳನ್ನು ಸಾಹಿತ್ಯ ಬಯಲುಗೊಳಿಸಬೇಕು. ಅದೇ ರೀತಿ ಒಂದು ಪಂಗಡವು ಇನ್ನೊಂದು ಪಂಗಡದ ಮೇಲೆ ಹೇರಬಹುದಾದ ಒತ್ತಡಗಳ ವಿರುದ್ಧ ಹೋರಾಡುವುದೂ ಸಾಹಿತ್ಯದ ಧರ್ಮವೇ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಇಂಥ ಒತ್ತಡ ಮೈನಾರಿಟಿಯ ಮೇಲೆ ಮೆಜಾರಿಟ ನಡೆಸುವುದಾಗಿರಬಹುದು. ಅಥವಾ ಮೈನಾರಿಟಿಯ ಒಲವನ್ನು ಗಳಿಸಲು ಇತರ ಪಂಗಡಗಳು ಆ ಮೈನಾರಿಟಿ ಸಮಾಜದ ಕೆಲವು ದಮನೀಯ ಪ್ರವೃತ್ತಿಗಳನ್ನು ಒಪ್ಪಿಕೊಳ್ಳುವುದೂ ಆಗಿರಬಹುದು. ಈ ಎರಡು ವಿದ್ಯಮಾನಗಳೂ ಸಮೂಹವಿರೋಧಿಗಳೇ ಸರಿ.

ತನ್ನ ಕಾಲದ ಮನಸ್ಸಾಕ್ಷಿಯಾಗಿ ಕೆಲಸ ಮಾಡಬೇಕಾದ ಸಾಹಿತಿ, ಹೇಗೆ ಮನಸ್ಸಾಕ್ಷಿಯು ಹೊರಗಿನ ಯಾವದೇ ಶಕ್ತಿಗಳಿಗೆ ಮಣಿಯದೆ ಒಳ ದನಿಯಲ್ಲಿ ಮಾತಾಡುತ್ತ ಇರುತ್ತದೆಯೋ, ಅದೇ ರೀತಿ ತನ್ನ ಬರಹಗಳ ಮೂಲಕ ಜನರ ಪ್ರಜ್ಞೆಯನ್ನು ತಲುಪುತ್ತಲೇ ಇರುತ್ತಾನೆ. ಆದ್ದರಿಂದಲೆ ಸಾಹಿತ್ಯವು ಜನರನ್ನು ಬಡಿದೆಬ್ಬಿಸುತ್ತದೆ ಎನ್ನುವುದಕ್ಕಿಂತ ಅವರನ್ನು ಆತ್ಮ ಶೋಧನೆ ಮಾಡಲು ಹಚ್ಚುತ್ತದೆ ಎನ್ನುವುದೇ ಸರಿಯಾದ್ದು . ನಿಜವಾದ ಸಾಹಿತ್ಯವು ನಿರಂತರವಾಗಿ ವಿರೋಧಪಕ್ಷದ ಜತೆಯಿರುವುದಕ್ಕೆ ಹಾಗೂ ದಮನವಿರೋಧಿಯಾಗಿರುವುದಕ್ಕೆ ಅದು ಜೀವ ವಿಕಸನದ ನಿಗೂಢ ಕ್ರಿಯೆಯಲ್ಲಿ ಪಾಲುಗೊಳ್ಳುತ್ತಿರುವುದೇ ಕಾರಣ.

# 3. ಅಗಲಿಕೆ

## ಆಶಯ

ಇನ್ನೊಬ್ಬರಿಂದ ದೂರ ಹೋಗುವ ಕ್ರಿಯೆ ಅಗಲಿಕೆ. ಪ್ರೀತಿಯ ವ್ಯಕ್ತಿ ಅಥವಾ ವಸ್ತುವಿನಿಂದ ಅಗಲುವ ಅಥವಾ ಬೇರೆಯಾಗುವ ಕ್ರಿಯೆ ಅಥವಾ ದೂರವಾಗುವ ಅವಸ್ಥೆ ಅಥವಾ ಭಾವ.

ಹೆಣ್ಣನ್ನು ಕೇಂದ್ರದಲ್ಲಿಟ್ಟು, ಸ್ಥಾಯಿಯಾಗುವ ವಿರಹ ದಲ್ಲಿ ಬೆರಗು, ನೋವು, ಹಳಹಳಿಕೆ, ಕ್ಷಣದ ತೃಪ್ತಿ, ನಿರ್ವೇಗಗಳನ್ನು ಸಂಚಾರಿಗಳಾಗಿಸಿ ಅರಳಿಸುವುದು.

ಪಂಚೆದ್ರೀಯಗಳನ್ನು ರಮಿಸುವುದರ ಮೂಲಕ ಮನಸ್ಸನ್ನು ಸೆರೆ ಹಿಡಿಯುತ್ತದೆ. ಹೆಣ್ಣಿನ ಸ್ಥಿತಿಗತಿ ಹಾಗೂ ಅವಳ ವ್ಯಥೆಯ ನೆಲೆಗಳನ್ನು ಸೂಕ್ಷ್ಮವಾಗಿ ಮತ್ತು ತೀವ್ರವಾಗಿ ತಟ್ಟುತ್ತ. ಸ್ತ್ರೀ ಸಂವೇದನೆ ಹಾಗೂ ಸಾಮಾಜಿಕತೆಯನ್ನು ಒಂದರೊಳಗೊಂದು ನೇಯುವ, ಹೆಣ್ಣಿನ ಲೈಂಗಿಕತೆಯನ್ನು ಹಾಗೂ ಅವಳ ಮನೋಕಾಮನೆಗಳನ್ನು ಮುಕ್ತವಾಗಿ ಮತ್ತು ಧೈರ್ಯವಾಗಿ ಅಭಿವ್ಯಕ್ತಿಸುವ ಪ್ರಯತ್ನವಾಗಿದೆ.

ಪ್ರಕೃತಿಲೋಕದಲ್ಲಾಗಲೀ ಮಾನವ ಲೋಕದಲ್ಲಾಗಲಿ ವಸ್ತುಗಳು, ವ್ಯಕ್ತಿಗಳು ಇಂದ್ರಿಯಗಳ ಮೇಲೆ ಒಂದು ಬಗೆಯ ಪರಿಣಾಮವನುಂಟು ಮಾಡುತ್ತವೆ. ಚೆಲುವು ಪ್ರಕೃತಿ ಪಾತ್ರವಾಗಿಯೋ ಮೊದಲು ಕಣ್ಣಿನ ಮುಂದೆ ಸುಲಿದು ಸೆಳೆಯುತ್ತದೆ. ಪಡೆಯುವುದಕ್ಕಿಂತ ನೀಡುವುದರಲ್ಲೇ ಹೆಚ್ಚು ಸುಖ.ಹೂವುಗಳ ರಂಗು, ಕಂಪು ಗಿಡಮರ – ಬೆಟ್ಟ ಗುಡ್ಡಗಳ ಮೇಲಿನ ಪ್ರೀತಿ ಅವುಗಳ ಅವುಗಳ ಅಗಲಿಕೆಯಿಂದ ಆಗುವ ನೋವು ಇವುಗಳನ್ನು ಒಳಗೊಂದಡಿರುತ್ತದೆ.

# ವಿರಹೋತ್ಸವ

**ಹೇಮ ಪಟ್ಟಣಶೆಟ್ಟಿ**

ಶೂನ್ಯವೆನ್ನುವುದಕ್ಕೆ ಅಸ್ತಿತ್ವ
ಇಲ್ಲ ನಿರ್ವಾತ ನೆಲವಿಲ್ಲ ಜಗವಿಲ್ಲ
ಅಗಲಿಕೆಯನರಿಯದ ಮನಸು ಗೋಚರವಿಲ್ಲ
ಅಷ್ಟು ಬದುಕಿಗೆ ಹೊಂದಿ ಅಷ್ಟ ವರ್ಣದ ಚಿತ್ರ

ಬಿಡಿಸಿ ನಲಿಯುವ
ವಿರಹ ಕರಗಸ ಕುಂಚ ಕೊಂಚ ತಟ್ಟದೆ
ಯಾರ ಅಗಲಿಕೆಗಿಲ್ಲಿ ಅಸ್ತಿತ್ವ ಬಂದಿದೆ ಹೇಳಿ
ಕೇಳಿ ಇದು ವ್ಯಕ್ತಿ ಅನುಭವವಲ್ಲ ವ್ಯಕ್ತ
ಅನುಭವ, ಅಗಲಿಕೆ ಭವದ ಆದಿ ಕಥೆ ಶೂನ್ಯ
ಪೂರ್ಣಭವ ಮಳೆ ಬಿಸಿಲು ಹೊಳೆ ಹುಯಿಲು
ದೃಷ್ಟಿ ದೃಶ್ಯಗಳಲ್ಲಿ
ಹುಟ್ಟು ಸಾವುಗಳಲ್ಲಿ ಆಗಲಿಕೆಯ ಮರ್ಮ
ಭಿತ್ತಿ ಚಿತ್ತಾರಮಯ.

ಸಂಧಿ ಸಡಿಲಾಗುವುದು ಪ್ರತಿ ಮಡಿಲು
ಶಿವದ ಮಡುವಾಗುವುದು
ಕಡೆಕಡೆಯ ತುತ್ತತುದಿ ಕಡಲಾಗುವುದು
ಅಗಲಿಕೆಯ ಆಧಾರ, ಒಂದು ಅಗಲುವಿಕೆ
ಒಂದು ಕೊನೆ. ಒಂದು ಅಗಲುವಿಕೆ ಒಂದು ಗೊನೆ
ಚಿಗುರು ಗೊನೆ ಹಗುರು ಕೊನೆ
ಒಂದಾಗಿ ಬದುಕಿನ ತೇರು ಸಾಗುವುದು ಅಗಲುವಿಕೆ
ರಾಜಮಾರ್ಗದ ಮೇಲೆ.

ಆಗ ಅಗಲುವಿಕೆ ಅದು ಅಲ್ಲ ಭಯ
ಅಭಯ ಉತ್ಸವ ನಿತ್ಯ ಬೆಳಗಾದಾಗ
ಬೆಳಕಿನ ಬೆನ್ನು ಅಗಲುವುದು ರಾತ್ರೆ
ಹಗಲಿನ ಕಣ್ಣು ತೆರೆಯುವುದು ದಿನದಿನದ ಜಾತ್ರೆ

# ಮೃಗ ಮತ್ತು ಸುಂದರಿ

**–ಪಿ. ಲಂಕೇಶ್**

ಆತ ಮೃದು ಸ್ವಭಾವದ ವರ್ತಕನಾಗಿದ್ದ. ಧರ್ಮವಂತನಾಗಿದ್ದ. ಅವನಿಗೆ ಮೂವರು ಹೆಣ್ಣು ಮಕ್ಕಳಿದ್ದರು. ಹಿರಿಯರಾದ ಇಬ್ಬರು ಬಿಂಕ, ಬಡವಾರದ ಹುಡುಗಿಯರಾಗಿದ್ದರು. ಅವರಿಗೆ ಇತ್ತೀಚಿನ ಫ್ಯಾಶನ್, ಪಾರ್ಟಿಗಳು, ಗೆಳೆಯರೆಂದರೆ ಪಂಚಪ್ರಾಣ. ತಂದೆ ಶ್ರೀಮಂತ ವರ್ತಕನಾಗಿದ್ದುದರಿಂದ ತೊಂದರೆಯಾಗಿರಲಿಲ್ಲ. ಅವರ ಕಾಟ ತಡೆಯಲಾರದೆ ಹಣ ಕೊಡುತ್ತಿದ್ದ. ಮೂರನೆಯ ಹುಡುಗಿ ಮಾತ್ರ ತಂದೆಯಷ್ಟೇ ಮೃದು ಸ್ವಭಾವದ, ದಾಕ್ಷಿಣ್ಯದ ಹುಡುಗಿಯಾಗಿದ್ದಳು. ಆಕೆಗೆ ತಂದೆಯ ನೆಮ್ಮದಿ ಮುಖ್ಯವಾಗಿತ್ತು. ಅವನಿಗೆ ಬೇಸರವಾದರೆ ಈಕೆ ಬಾಡುತ್ತಿದ್ದಳು, ರೂಪವತಿಯಾಗಿದ್ದ ಆಕೆಯನ್ನು ಎಲ್ಲರೂ ಸುಂದರಿ ಎಂದೇ ಕರೆಯುತ್ತಿದ್ದರು.

ಹೀಗಿದ್ದಾಗ ವರ್ತಕನ ಕಷ್ಟಗಳು ಶುರುವಾದವು. ಅವನ ವ್ಯಾಪಾರ ಕುಸಿದು ಬಿತ್ತು. ಬರಬೇಕಾಗಿದ್ದ ಹಡುಗುಗಳು ಹಿಂದಿರುಗದಷ್ಟು ದಿವಾಳಿಯಾದವು. ತನ್ನ ವ್ಯಾಪಾರ ಜೋರಾಗಿದ್ದಾಗ ಮಾಡಿದ್ದ ಸಾಲಗಳು ಅವನನ್ನು ಬಾಧಿಸತೊಡಗಿದವು. ಇದ್ದ ಬದ್ದ ಸ್ಥಿರಾಸ್ತಿ, ಚರಾಸ್ತಿಯನ್ನೆಲ್ಲ ಮಾರಿ ಸಾಲ ತೀರಿಸಿ ಉಳಿದ ಪುಟ್ಟ ಮೊತ್ತದಲ್ಲಿ ಹಳ್ಳಿ ಕಡೆ ಒಂದು ಮನೆ ಕೊಂಡುಕೊಂಡು ತನ್ನ ಹೆಣ್ಣುಮಕ್ಕಳನ್ನು ಕರೆದು ಹೇಳಿದ, “ಮಕ್ಕಳೆ, ನನ್ನ ಸ್ಥಿತಿ ನಿಮಗೆ ಈಗಾಗಲೇ ತಿಳಿದಿರಬಹುದು. ನಾವಿನ್ನು ನಗರದಲ್ಲಿ ವಾಸಿಸುವುದು ಕಷ್ಟ. ಆದ್ದರಿಂದ ಹಳ್ಳಿಗೆ ಹೋಗಬೇಕಾಗಿದೆ. ದಯಮಾಡಿ ಸಹಕರಿಸಿ, ದೂರದ ದೇಶಕ್ಕೆ ಹೋಗಿರುವ ಅನೇಕ ಹಡಗುಗಳಲ್ಲಿ ಒಂದರ ಬಗ್ಗೆ ಮಾತ್ರ ಸುದ್ದಿ ಬಂದಿಲ್ಲ. ಅದಾದರೂ ಸುರಕ್ಷಿತವಾಗಿ ಬರುವುದೆಂದು ನೆಚ್ಚಿಕೂರಲಾಗುವುದಿಲ್ಲ. ಆದ್ದರಿಂದ ನೀವೆಲ್ಲ ನನ್ನ ದುರಂತದಲ್ಲಿ ಭಾಗಿಗಳಾಗಿ ನನ್ನೊಂದಿಗೆ ಹಳ್ಳಿಗೆ ಬರಬೇಕು” ಎಂದು ಹೇಳಿದ.

ಮೊದಲ ಇಬ್ಬರು ಹುಡುಗಿಯರಿಗೆ ಆಘಾತ, ನಿರಾಶೆ, ಕೋಪವೆಲ್ಲ ಬಂದವು. ಮೊದಮೊದಲು ತಾವು ಹಳ್ಳಿಗೆ ಸುತಾರಾಂ ಬರುವುದಿಲ್ಲವೆಂದು ಹಟ ಹಿಡಿದು ಕೂತರು, ಮೂರನೆಯ ಹುಡುಗಿ ಮಾತ್ರ ತನ್ನ ಬಟ್ಟೆ ಬರೆಗಳನ್ನು ತೆಗೆದುಕೊಂಡು

ಹೊರಡಲು ಅಣಿಯಾದಳು. ಆಕೆ ಹೊರಟಿದ್ದು ಕಂಡು ಮತ್ತು ಹೋಗಬೇಕಾದ ಅನಿವಾರ್ಯತೆಯನ್ನು ತಿಳಿದು ಇಬ್ಬರು ಅಳುತ್ತ, ಕೂಗಾಡುತ್ತ ಹೊರಟರು.

ಬಡತನದಿಂದ ವರ್ತಕನಿಗೆ ಮತ್ತು ಸುಂದರಿಗೆ ಅಷ್ಟೇನೂ ತೊಂದರೆಯಾಗಲಿಲ್ಲ. ಅವರ ಜೀವನ ಸರಳವಾಗಿತ್ತು. ಅದರೆ ಹಿರಿಯ ಹುಡುಗಿಯರಿಗೆ ಬದುಕು ಅಸಹನೀಯ ಅನ್ನಿಸಿತ್ತು. ಶ್ರೀಮಂತರಾಗಿದ್ದಾಗ ಅವರನ್ನು ಮೆಚ್ಚಿ ಹೊಗಳುತ್ತಿದ್ದ, ಅವರೊಂದಿಗೆ ಸರಸವಾಡುತ್ತಿದ್ದ ಹುಡುಗರು ಅವರತ್ತ ಸುಳಿಯಲಿಲ್ಲ ತಾತ್ಸಾರದಿಂದ ಮಾತಾಡಿಕೊಂಡರು. ಸುಂದರಿ ಮಾತ್ರ ತಂದೆಯ ಅಗತ್ಯಗಳನ್ನು ಪೂರೈಸುತ್ತಾ, ಆತನ ಬೇಸರವನ್ನು ಹೋಗಲಾಡಿಸುತ್ತಾ ಬದುಕಿನಿಂದ ಹೆಚ್ಚೇನನ್ನು ಬಯಸದೆ ಜೀವಿಸುತ್ತಿದ್ದಳು.

ಹೀಗಿದ್ದಾಗ ಒಂದು ದಿನ ವರ್ತಕನ ಅಳಿದುಳಿದ ಹಡಗು ಬರುವ ಸುದ್ದಿ ಬಂತು. ಹಿರಿಯ ಹುಡುಗಿಯರು ಹಿಗ್ಗಿ ಕುಣಿದಾಡಿದರು ವರ್ತಕ ಹಡಗು ಸ್ವಾಗತಿಸಲು ನಗರಕ್ಕೆ ಹೊರಟೊಡನೆ ಆತ ತಮಗೆ ತರಲೇಬೇಕಾದ ವಸ್ತುಗಳ ಪಟ್ಟಿಯನ್ನೇ ನೀಡಿದರು. ಬಟ್ಟೆ, ಒಡವೆ, ಅಲಂಕಾರದ ವಸ್ತುಗಳ ಪಟ್ಟಿ ಅದಾಗಿತ್ತು. ತಾನು ಏನನ್ನೂ ಕೇಳದಿದ್ದರೆ ತನ್ನ ಅಕ್ಕಂದಿರು ತನ್ನನ್ನು ತಪ್ಪು ತಿಳಿಯುವರೆಂದು ಯೋಚಿಸಿದಳು. ತನ್ನ ತಂದೆ ತನಗೊಂದು ಗುಲಾಬಿ ಹೂಗಳ ಗೊಂಚಲು ತರಬೇಕೆಂದು ಕೇಳಿಕೊಂಡಳು.

ವರ್ತಕ ಹಡಗು ಬರುವ ದಿನ ನಗರಕ್ಕೆ ಹೋಗಿ ಹಡಗಿಗಾಗಿ ಕಾದ. ಆದರೆ ಅದು ಬರಲೇ ಇಲ್ಲ. ಅದು ಮುಳುಗಿಹೋಯಿತೆಂದು ಕೆಲವರೂ, ಅದು ಬರುವ ಬಗ್ಗೆ ವರ್ತಕನಿಗೆ ಯಾರೋ ಪುಂಡರು ಸುಳ್ಳು ಸುದ್ದಿ ನೀಡಿದ್ದಾರೆಂದು ಕೆಲವರೂ ಹೇಳಿದರು. ನಿರಾಶನಾದ ವರ್ತಕ ತನ್ನ ಹಳ್ಳಿಗೆ ಹೊರಟು, ಆತನಲ್ಲಿ ಗಾಡಿಗೆ ಕಾಸು ಇರಲಿಲ್ಲ. ನಡೆದುಕೊಂಡು ಹೊರಟ. ತನ್ನ ಹಿರಿಯ ಮಕ್ಕಳು ಬರಿಗೈಲಿ ಬಂದ ತನ್ನನ್ನು ಛೇಡಿಸಬಹುದೆಂದು ಅವನಿಗೆ ವ್ಯಥೆಯಾಯಿತು. ಚಿಕ್ಕಮಗಳು ಸುಂದರಿಗೆ ಗುಲಾಬಿಯನ್ನು ಕೂಡ ಕೊಳ್ಳಲಾಗದ ತನ್ನ ಸ್ಥಿತಿಗೆ ಮರುಗಿದ.

ಹೀಗೆ ನಡೆದು ಬರುತ್ತ ವರ್ತಕ ದಟ್ಟ ಅರಣ್ಯದಲ್ಲಿ ಸಾಗತೊಡಗಿದ. ಹೊತ್ತು ನೆತ್ತಿಗೇರಿತ್ತು. ಹಸಿವಿನಿಂದ ಬಳಲಿದ್ದ. ಇದ್ದಕ್ಕಿದ್ದಂತೆ ಕಾಡಿ ನಡುವೆ ಭವ್ಯ

ಬಂಗಲೆಯೊಂದು ಗೋಚರಿಸಿತು. ಅದನ್ನವನು ಎಂದೂ ಗಮನಿಸಿರಲಿಲ್ಲ. ಚಕಿತನಾಗಿ ಆ ಬಂಗಲೆಯತ್ತ ಬರುತ್ತ ಅದೊಂದು ಮನೋಹರ ಅರಮನೆಯೆಂಬುದು ತಿಳಿಯತೊಡಗಿತು. ನಿರ್ಜನವಾಗಿತ್ತು. ಮೌನವಾಗಿತ್ತು. ಕಾವಲುಗಾರರು ಕೂಡ ಇರಲಿಲ್ಲ. ಮೊದಲು ಅಂಜಿಕೆಯಾದರೂ ಕುತೂಹಲ ತಾಳಲಾರದೆ ಅರಮನೆಯ ಪುಷ್ಪವನ ನೋಡುತ್ತ ಅರಮನೆ ಪ್ರವೇಶಿಸಿದ. ಅಲ್ಲಿ ಕೂಡ ಯಾರೂ ಇರಲಿಲ್ಲ. ಸುವರ್ಣಖಚಿತ ಸ್ತಂಭಗಳು, ವಿಶಾಲ ಕೋಣೆಗಳು, ಮೊಗಸಾಲೆಗಳು, ಭಯದಿಂದ ತುಂಬಿದ್ದರೂ ವರ್ತಕ ಎಲ್ಲವನ್ನೂ ನೋಡುತ್ತ ಸಾಗಿದ. ಅಲ್ಲೊಂದು ಕೋಣೆಯಲ್ಲಿ –ಭೋಜ್ಯಗಳನ್ನು ಇಡಲಾಗಿತ್ತು. ಹೂವು, ಪನ್ನೀರುಗಳ ಸುಗಂಧ ಪ್ರಸರಿಸಿತ್ತು. ಸಂಗೀತ ಹೊಮ್ಮುತ್ತಲೇ ಇತ್ತು. ಈಗತಾನೆ ಭೋಜನಕ್ಕೆ ಅಣಿಮಾಡಿದಂತಿತ್ತು. ಇದನ್ನು ಬಡ ವರ್ತಕ ತನ್ನ ಹಸಿವೆ ತಾಳಲಾರದೆ ಉಣ್ಣತೊಡಗಿದ. ಜಿಹ್ವೆಗೆ ಆನಂದ ನೀಡುತ್ತಿದ್ದ ತಿನಿಸುಗಳನ್ನು ತಿಂದು ಸಂಗೀತ ಸವಿದು ಹೊರಬಂದ. ಅಲ್ಲೂ ಯಾರೂ ಕಾಣಿಸಲಿಲ್ಲ. ಪುಷ್ಪವನಕ್ಕೆ ಬಂದು ಗುಲಾಬಿಗಳನ್ನು ನೋಡಿದ. ತನ್ನ ಕಿರಿಯ ಮಗಳು ಸುಂದರಿ ಹೂಗೊಂಚಲು ತರಲು ಹೇಳಿದ್ದು ನೆನಪಾಯಿತು. ನಳನಳಿಸುವ ಒಂದು ಗೊಂಚಲು ಕಿತ್ತುಕೊಂಡ. ಇದ್ದಕ್ಕಿದ್ದಂತೆ ಸಿಡಿಲು ಹೊಡೆದಂಥ ಶಬ್ದವಾಯಿತು. ವರ್ತಕ ಬೆಚ್ಚಿ ನೋಡುತ್ತಾನೆ ಭೀಕರ ಮೃಗವೊಂದು ಕೋಪದಿಂದ ಗರ್ಜಿಸುತ್ತ ಅವನನ್ನು ಕೊಲ್ಲಲು ಕುತ್ತಿಗೆಗೆ ಕೈ ಹಾಕಿತು.

“ಅಯ್ಯೋ ದೇವರೇ ಕಾಪಾಡು! ಅಯ್ಯಾ ನನ್ನನ್ನು ಕೊಲ್ಲಬೇಡ. ನನ್ನ ಮೇಲೆ ಕರುಣೆದೋರು!” ಎಂದು ವರ್ತಕ ಬೇಡಿಕೊಂಡ.

“ನಾನು ಅಯ್ಯೋ ದೇವರೇನೂ ಅಲ್ಲ, ಅಯ್ಯಾನೂ ಅಲ್ಲ! ನಾನು ಮನುಷ್ಯನಲ್ಲ. ಮೃಗ. ನನ್ನಲ್ಲಿ ಕರುಣೆ ಇಲ್ಲ. ಇರಲು ಸಾಧ್ಯವೂ ಇಲ್ಲ; ನಿನ್ನನ್ನು ಸೀಳಿ ತಿಂದುಹಾಕುತ್ತೇನೆ” ಎಂದು ಕತ್ತು ಹಿಸುಕತೊಡಗಿತು.

“ಕೊಲ್ಲಬೇಡ! ನನ್ನ ಮಗಳಿಗಾಗಿ ಒಂದು ಗೊಂಚಲು ಗುಲಾಬಿ ತಗೊಂಡಿದ್ದು ಅಪರಾಧವೆ?” ಅಂದ.

“ತಿಂದಿದ್ದಿ; ತೇಗಿದ್ದಿ; ಗುಲಾಬಿ ಕಿತ್ತಿದ್ದೀ,” ಎಂದು ಅಬ್ಬರಿಸಿತು ಮೃಗ; ಉಗ್ರ ಸಿಟ್ಟಿನಿಂದ, “ಕೇಳು ನಿನ್ನ ಬದಲಾಗಿ ನಿನ್ನ ಮುದ್ದು ಮಗಳನ್ನು ತಂದು

ನನಗೆ ಕೊಟ್ಟರೆ ನಿನ್ನನ್ನು ಕೊಲ್ಲುವುದಿಲ್ಲ" ಅಂದಿತು. ಭಯದಿಂದ ವರ್ತಕ ಮಾತನಾಡಲಾಗಲಿಲ್ಲ.

"ನೀನು ತಪ್ಪಿಸಿಕೊಳ್ಳಲಾರೆ, ಈ ಬುಟ್ಟಿ ತೆಗೆದುಕೋ. ಇದರೊಂದಿಗೆ ಹೋಗು. ನಾಳೆ ಸಂಜೆಯೊಳಗೆ ನೀನು ನಿನ್ನ ಮಗಳನ್ನು ಕರೆತಂದು ನನಗೆ ಕೊಡಬೇಕು. ಇಲ್ಲದಿದ್ದರೆ ನಿನ್ನನ್ನೂ ನಿನ್ನ ಮಗಳನ್ನೂ ಒಟ್ಟಿಗೇ ಮುಗಿಸುತ್ತೇನೆ' ಅಂದಿತು.

ಪ್ರಾಣ ಉಳಿದದ್ದಕ್ಕೆ ಸ್ವಲ್ಪ ಸಮಾಧಾನಗೊಂಡ ವರ್ತಕ ಮೃಗ ನೀಡಿದ ಬುಟ್ಟಿಯೊಂದಿಗೆ ಊರಿಗೆ ಹೋಗುತ್ತ ತನ್ನ ಮಗಳು ಮತ್ತು ತನ್ನ ಪ್ರಾಣದ ಬಗ್ಗೆ ಯೋಚಿಸಿ ಚಿಂತಾಕ್ರಾಂತನಾದ. ಬರಿಗೈಲಿ ವಾಪಾಸ್ ಬಂದ ತಂದೆಯನ್ನು ಕಂಡ ಹಿರಿಯ ಮಕ್ಕಳು ಟೀಕಿಸಿ ರಾದ್ಧಾಂತ ಮಾಡಿದರು. ವರ್ತಕನ ತಲೆತುಂಬ ಮೃಗದ ಆಜ್ಞೆ ಇತ್ತು. ಮೂವರು ಹೆಣ್ಣು ಮಕ್ಕಳನ್ನು ಕರೆದುಕೂರಿಸಿಕೊಂಡು ಅರಣ್ಯದಲ್ಲಿ ನಡೆದದ್ದು ಹೇಳಿದ. ಮೊದಲ ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ಮೃಗಕ್ಕೆ ಕೊಡುವ ರೀತಿಯಲ್ಲಿ ಮಾತಾಡಿದ ತಂದೆಯ ಬಗ್ಗೆ ಅವರಿಬ್ಬರೂ ಕೋಪಗೊಂಡ ಪ್ರತಿಭಟಿಸಿದರು. ಚಿಕ್ಕಮಗಳು ಸುಂದರಿ ಮಾತ್ರ "ನಾನು ಹೋಗುತ್ತೇನೆ" ಅಂದಳು ಇದನ್ನು ಕೇಳಿದ ತಂದೆ ಇನ್ನೂ ವ್ಯಥೆಗೊಂಡು ತಾನೇ ಹೋಗುವುದಾಗಿ ಹೇಳಿ ಅದಕ್ಕೆ ಒಪ್ಪದ ಸುಂದರಿ ಹೊರಡಲು ಸಿದ್ಧಳಾದಳು; ತಂದೆಗೆ ತನ್ನನ್ನು ಕಳಿಸಿಬರಲು ಒತ್ತಾಯ ಮಾಡಿದಳು.

ವರ್ತಕ ಸುಂದರಿಯನ್ನು ಕಾಡಿಗೆ ಕರೆತಂದು ಮೃಗ ಕೋಪದಿಂದ ಕಾಯುತ್ತಿರುವುದನ್ನು ನೋಡಿದ ನೋಡಿದ "ಶಾಭಾಸ್" ಎಂದು ವರ್ತಕನನ್ನು ಮೆಚ್ಚಿದ "ನೀನಿನ್ನು ಹೋಗು" ಎಂದಿತು. ವರ್ತಕ ಭಾರದ ಎದೆಯೊಂದಿಗೆ ಊರಿಗೆ ಹೊರುಟು ಹೋದ. ಅಲ್ಲಿಯವರೆಗೆ ಮೃಗ ಕೊಟ್ಟ ಬುಟ್ಟಿಯನ್ನು ತೆರೆದು ನೋಡಿರಲಿಲ್ಲ. ಈಗ ತೆರೆದರೆ ಅದರಲ್ಲಿ ವಜ್ರ ವೈಡೂರ್ಯಗಳೂ, ಮುತ್ತುರತ್ನಗಳೂ ಇದ್ದವು. ಸುಂದರಿಯ ಬಗ್ಗೆ ಚಿಂತೆಯಲ್ಲಿ ಮುಳುಗಿದ್ದ ವರ್ತಕನಿಗೆ ಸಂತೋಷವೇನೂ ಆಗದಿದ್ದರೂ ಅವುಗಳನ್ನು ಬಳಸಿ ಹಿರಿಯ ಹೆಣ್ಣುಮಕ್ಕಳ ಮದುವೆ ಮಾಡುವುದೆಂದು ತೀರ್ಮಾನಿಸಿದ.

ಇತ್ತ ಸುಂದರಿ ಮೃಗವನ್ನು ಕಂಡು ಕೂತಲ್ಲಿಂದ ಚಲಿಸಲಾರದಷ್ಟು ದಿಗ್ಭ್ರಾಂತಳಾಗಿದ್ದಳು. ಅರಣ್ಯದ ಒಂದೊಂದು ಸದ್ದು ಅವಳನ್ನು ಬೆಚ್ಚಿ ಬೀಳಿಸುತ್ತಿತ್ತು.

ಮೃಗ ಭೀಕರವಾಗಿತ್ತು. ಕೋರೆಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿದ್ದ ಮೃಗ ಆಕೆಯ ಎದುರು ಕೂತುಕೊಂಡಿತು. ಆಕೆಯನ್ನೇ ದಿಟ್ಟಿಸಿ ನೋಡತ್ತ, "ನೀನು ಸ್ವಸಂತೋಷದಿಂದ ಬಂದೆಯೋ?" ಎಂದಿತು. ಏನೆಂದುಹೇಳುವುದೆಂದು ತಿಳಿಯದೆ ಮೃಗಕ್ಕೆ ಕೋಪ ಬರಿಸದಿರಲು ಭಯವಾಗಿ, "ಹು....ಹು....ಹ್ಞೂ" ಅಂದಳು "ಒಳ್ಳೆಯದು! ನೀನು ಒಳ್ಳೆಯವಳು!" ಎಂದು ಹೇಳಿದ ಮೃಗ ಒಳಗೆ ಹೋಯಿತು.

ಭಯ ಸ್ವಲ್ಪ ಕಡಿಮೆಯಾಗಿ ಸುಂದರಿ ಅಲ್ಲಿಂದ ಎದ್ದು ಅರಮನೆಯನ್ನು ನೋಡಲು ಚಲಿಸತೊಡಗಿದಳು. ಒಂದು ಕೋಣೆಗಿಂತ ಇನ್ನೊಂದು, ಒಂದು ಕಿಟಕಿಗಿಂತ ಇನ್ನೊಂದು ಚೇತೋಹಾರಿಯಾಗಿದ್ದವು. ಅಲ್ಲೊಂದು ಕೋಣೆಯ ಮೇಲೆ 'ಸುಂದರಿಯ ಗೃಹ' ಎಂದು ಬರೆದಿತ್ತು. ತನ್ನ ಹೆಸರಿರುವುದನ್ನು ಕಂಡ ಸುಂದರ ಕ್ಷಣ ಅಚ್ಚರಿಪಟ್ಟು ಗೃಹವನ್ನು ಪ್ರವೇಶಿಸಿದಳು:

ಆಗ ಹಾಡೊಂದು ಕೇಳಿಬಂತು:

ಸುಂದರಿ, ಸುಂದರಿ, ಸುಂದರೀ
ಇದು ನಿನ್ನ ಮನೆ;
ಹೂವೆ, ಫಲವೆ, ಒಡವೆಯ
ಬೇಕಾದ್ದೆಲ್ಲವ ನೀನು ನೆನೆ;
ಕ್ಷಣದಲ್ಲಿ ಕೊಡುವೆವು ಸುಂದರಿಯೆ,
ಭೂಮಿಯ ಸೌಭಾಗ್ಯದ ಸಿರಿಯೇ

ಆ ಗೃಹದಲ್ಲಿ ಸುಂದರಿಯ ನೆಚ್ಚಿನ ಗ್ರಂಥಗಳ ಪುಸ್ತಕ ಭಂಡಾರವಿತ್ತು: ಇಡೀ ಗೃಹ ಸಂಗೀತದ ಇಂಪಿನಿಂದ ತುಂಬಿತ್ತು. ಅಂದಮೇಲೆ ನನ್ನನ್ನು ಈ ಮೃಗ ಸದ್ಯದಲ್ಲಿ ಬಿಡುವಂತಿಲ್ಲ" ಎಂದುಕೊಂಡು ತನ್ನ ತಂದೆಯ ಬಗ್ಗೆ ಯೋಚಿಸಿದಳು. ಆತ ಈಗ ಏನು ಮಾಡುತ್ತಿರಬಹುದು ಎಂದುಕೊಂಡು ಅಲ್ಲಿದ್ದ ಕನ್ನಡಿಯಲ್ಲಿ ನೋಡಿದೊಡನೆ ಅದರಲ್ಲಿ ತನ್ನ ಮನೆ, ತನ್ನ ತಂದೆ. ಅಕ್ಕಂದಿರು ಕಾಣಿಸಿದರು. ತಂದೆ ದುಗುಡದಲ್ಲಿ ಓಡಾಡುತ್ತಿದ್ದ; ಅಕ್ಕಂದಿರು ತನ್ನ ಬಗ್ಗೆ ದುಃಖಿಸಿದವರಂತೆ ಕಾಣಿಸಿಕೊಂಡು ಆಮೇಲೆ ಆನಂದದಿಂದ ಮಾತಾಡುತ್ತಿದ್ದರು.

ಊಟಕ್ಕೆ ಸಿದ್ಧಪಡಿಸಿ ಸುಂದರಿಯನ್ನು ಅಹ್ವಾನಿಸಲಾಯಿತು. ಮೃಷ್ಟಾನ್ನ

ಭೋಜನ ಸವಿಯುತ್ತಿದ್ದಾಗ ಸುಂದರಿಗೆ ಕರ್ಕಶ ಸದ್ದು ಕೇಳಿಸಿತು; ಗೊಗ್ಗರು ಧ್ವನಿ, ಅದು ಮೃಗದ ಧ್ವನಿಯೆಂದು ಗೊತ್ತಾಯಿತು. ಮರೆಯಿಂದಲೇ ಮೃಗ ಕೇಳಿತು. "ಸುಂದರಿ, ನೀನು ಉಣ್ಣುವುದನ್ನು ನಾನು ನೋಡಬಹುದೇ?" ಎಂದಿತು. ದಿಗಿಲಿನಿಂದಲೇ ಸುಂದರಿ, "ನಿನಗೆ ಇಷ್ಟವಾದರೆ" ಎಂದು ತೊದಲಿದಳು. "ಹಾಗೇನಿಲ್ಲ. ಸುಂದರಿ, ನೀನು ಈ ಮನೆಯ ಒಡತಿ, ನಿನಗೆ ಇಷ್ಟವಾದರೆ ಮಾತ್ರ ನನಗೆ ನಿನ್ನೊಂದಿಗೆ ಕೂರಲು ಅನುಮತಿ ನೀಡಬಹುದು. ಬೇಡವೆಂದರೆ ನಾನು ಹತ್ತಿರ ಕೂಡ ಸುಳಿಯುವುದಿಲ್ಲ" ಅಂದಿತು. "ನೀನು ತುಂಬ ಒಳ್ಳೆಯವನಂತಿದ್ದೀ" ಅಂದಳು. "ಅದಿರಲಿ, ನಿನಗೆ ನಾನು ತುಂಬ ಕುರೂಪಿ ಅನಿಸುತ್ತದೆಯೇ?" ಅಂದ. ಸುಂದರಿಗೆ ಇನ್ನೂ ಭಯವಾಯಿತು. ಅಂಜುತ್ತಲೇ "ನಾನು ಸುಳ್ಳು ಹೇಳಲಾರೆ! ನೀನು ಕುರೂಪಿ" ಅಂದಳು, ಸ್ವಲ್ಪ ಹೊತ್ತು ಸುಮ್ಮನಿದ್ದ ಮೃಗ, "ನನಗೆ ಗೊತ್ತು, ನಾನು ಕುರೂಪಿ. ದಯವಿಟ್ಟು ನೀನು ನನ್ನನ್ನು ಗಮನಿಸಬೇಡ . ಸಂತೋಷವಾಗಿರು" ಅಂದಿತು. "ನೀನು ತುಂಬಾ ಒಳ್ಳೆಯವನಂತಿದ್ದೀ. ನಿನ್ನ ಮಾತುಗಳಿಗೆ ಕೃತಜ್ಞಳಾಗಿದ್ದೇನೆ" ಅಂದಳು. "ನನ್ನ ಹೃದಯ ಒಳ್ಳೆಯದಿರಬಹುದು, ಆದರೂ ನಾನು ಮೃಗ, ಕುರೂಪಿಯಾದ ಮೃಗ" ಅಂದಿತು. ಅದಕ್ಕೆ ಸುಂದರಿ, "ಮೃಗ ಒಳ್ಳೆಯ ಹೃದಯ ಪಡೆದಿದ್ದರೂ ಮೃಗದ ಆಕಾರ ಹೊಂದಿರುವುದ ಸಹಜ–ಆದರೆ ಜಗತ್ತಿನ ಅನೇಕ ಮನುಷ್ಯರು ಸುಂದರ ಆಕಾರ ಪಡೆದು ಮೃಗದ ಹೃದಯ ಹೊಂದಿರುತ್ತಾರೆ" ಅಂದಳು, "ನನಗೆ ಬುದ್ದಿ ಇದ್ದಿದ್ದರೆ ನಿನಗೆ ಒಳ್ಳೆಯ ಮಾತುಗಳಲ್ಲಿ ಕೃತಜ್ಞತೆ ಹೇಳುತ್ತಿದ್ದೆ ಆದರೆ ನಾನು ದಡ್ಡ, ರಾಕ್ಷಸ ಜಡವಾದ ಮೃಗ? ಅಂದಿತು.

ಇಷ್ಟೆಲ್ಲ ಮಾತು ಆಗುವುದರಲ್ಲಿ ಮೃಗ ಸುಂದರಿಯ ಎದುರು ಕೂತಿತ್ತು, ಆತನ ಭಯಾನಕ ಆಕಾರಕ್ಕೆ ಸುಂದರಿ ನಡುಗತೊಡಗಿದ್ದಳು. ಮೃಗಕ್ಕೆ ಸಿಟ್ಟು ತರಿಸದಿರಲು ಸುಂದರಿ ಅವನನ್ನು ಹೊಗಳಿದ್ದಳು. ಸುಂದರಿ ಊಟ ಮುಗಿಸುತ್ತಿದ್ದಾಗ ಮೃಗ ಕೇಳಿತು, "ಸುಂದರಿ, ನನ್ನನ್ನು ಮದುವೆಯಾಗುವೆಯಾ?"

ಈ ಪ್ರಶ್ನೆಗೆ ಸುಂದರಿ ಮೂರ್ಛೆ ಹೋಗುವುದರಲ್ಲಿದ್ದಳು. ಕಷ್ಟಪಟ್ಟು ಸಾವರಿಸಿಕೊಂಡು ಕಂಪಿಸತೊಡಗಿದಳು, ಮೃಗ ಉತ್ತರಕ್ಕಾಗಿ ಕಾಯುತ್ತಲೇ ಇತ್ತು. ಸುಂದರಿ ತೊದಲಿದಳು, "ಇ–ಇ–ಇಲ್ಲ!" ಆಕೆಯ ಉತ್ತರದಿಂದ ನಿರಾಶನಾದ ಮೃಗ ನಿಟ್ಟುಸಿರಿಟ್ಟಿತು. ಸಿಟ್ಟಿನಿಂದ ಬುಸುಗುಟ್ಟಿದೊಡನೆ ಇಡೀ ಅರಮನೆ ಅದುರ

ತೊಡಗಿತು. ಮೃಗ ಎದ್ದು, "ಸರಿ ಸುಂದರಿ, ನಮಸ್ತೆ" ಎಂದು ಹೇಳಿ ಅಲ್ಲಿಂದ ಹೊರಟಿತು. ತನ್ನ ಕೋಣೆ ತಲುಪುವವರೆಗೆ ಹಿಂದಕ್ಕೆ ತಿರುಗಿ ತಿರುಗಿ ಅವಳನ್ನು ನೋಡುತ್ತಿತ್ತು.

ಮರುದಿನ; ಅದರ ಮರುದಿನ ಸುಂದರಿ ಮೃಗವನ್ನು ಕಾಣಲಿಲ್ಲ. ಊಟ, ಓದು, ಸಂಗೀತದ ರಂಜನೆಯಲ್ಲಿ ಕಳೆದಳು. ಮೂರನೆಯ ದಿನ ಮೃಗ ಬಂತು. ಅವಳಿಗೆ ಸ್ವಲ್ಪವೂ ಬೇಸರವಾಗದಂತೆ ಮಾತಾಡಿತು. ಅವಳು ಏನು ಹೇಳಿದರೂ ಆಸಕ್ತಿಯಿಂದ ಕೇಳಿತು. ಕೊನೆಯಲ್ಲಿ ಸುಂದರಿ, ನನ್ನ ಮದುವೆಯಾಗುವೆಯಾ?" ಅಂದಿತು ಸುಂದರಿ "ಸಾಧ್ಯವಿಲ್ಲ" ಅಂದಳು.

ಇದು ಅನೇಕ ದಿನ ನಡೆಯಿತು. ಮೃಗ ಕೊಂಚ ಬಸವಳಿದಂತೆ ಕಾಣಿಸಿತು' ಅದರ ಭೀಕರತೆ ಕಡಿಮೆಯಾಗಿರಲಿಲ್ಲ. ಒಂದೊಂದು ದಿನ ಸುಂದರಿಗೆ ತನ್ನ ಮಾತಿನಿಂದ ಬೇಸರವಾದೀತೆಂದು ಅವಳು ಊಟ ಮಾಡುವ ಜಾಗಕ್ಕೂ ಬರುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಬಂದು ಅವಳ ದಿನಚರಿಯ ಬಗ್ಗೆ, ಅವಳ ಇಷ್ಟದ ಬಗ್ಗೆ ವಿಚಾರಿಸುತ್ತಿತ್ತು. ಹೋಗುವಾಗ ಮರೆಯದೆ "ನನ್ನನ್ನು ಮದುವೆಯಾಗು" ಅನ್ನುತ್ತಿತ್ತು. ಸುಂದರಿ ಕತ್ತು ಅಲ್ಲಾಡಿಸಿ 'ಇಲ್ಲ' ಅನ್ನುತ್ತಿದ್ದಳು.

ಹೀಗಿದ್ದಾಗ ಸುಂದರಿಗೆ ಮೋಜೆನ್ನಿಸುತ್ತಿತ್ತು. ಸಂಗೀತ ಹೊಮ್ಮುವ ದಿವಾನ ಖಾನೆಯಲ್ಲಿ ಒಬ್ಬಳೇ ಕೂತು ಊಟ ಮಾಡುತ್ತಿದ್ದಾಗ ಮೃಗ ಬಾರದಿದ್ದರೆ ಏಕೆ ಬರಲಿಲ್ಲ' ಎಂದು ಕುತೂಹಲವಾಗುತ್ತಿತ್ತು. ಒಮ್ಮೊಮ್ಮೆ ನೋಡುವ ಇಷ್ಟವಾಗುತ್ತಿತ್ತು. ಅವನ ಒರಟು ಮಾತು, ತಿಕ್ಕಲು ನಡವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು ಆತನ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು. ಇಷ್ಟಾದರೂ ಆಕೆಗೆ ತಂದೆಯ ನೆನಪು ಹೆಚ್ಚಾಗುತ್ತಲೇ ಹೋಯಿತು. ಒಂದು ದಿನ ಮೃಗ, "ನಿನಗೆ ಇಷ್ಟವಾದದ್ದು ಕೇಳು–ಕೊಡುತ್ತೇನೆ" ಅಂದಿತು. ಸುಂದರಿ, 'ನಾನು ನನ್ನ ತಂದೆಯನ್ನು ಕಂಡು ಮಾತನಾಡಿಸಬೇಕು–ಎರಡು ದಿನ ಕಳಿಸಿದರೆ ಸಂತೋಷವಾಗುತ್ತದೆ" ಅಂದಳು. ಮೃಗ ಯೋಚಿಸಿತು, ಮೌನ ಮುರಿದು ಹೇಳಿತು, "ನಿನ್ನ ಮುಖ ನೋಡದೆ ನಾನು ಬದುಕಲಾರೆ. ನೀನು ಕೇವಲ ಎರಡು ದಿನ ಹೋಗಬೇಕು. ನಾನೇ ಕಳಿಸಿಕೊಡುತ್ತೇನೆ" ಅಂದಿತು ಅವಳು ಸಂತೋಷದಿಂದ 'ಬರೀ ಎರಡು ದಿನ' ಅಂದಳು ಅವಳಿಗೆ ಕಣ್ಣು ಮುಚ್ಚಿಕೊಳ್ಳಲು ಹೇಳಿದ ಮೃಗ ಅವಳನ್ನು ಅವಳಿಗೆ ಬೇಸರವಾಗದಂತೆ ಹೆಗಲ ಮೇಲೆ ಹೊತ್ತು ಮರುಕ್ಷಣದಲ್ಲಿ ಅವಳ ತಂದೆ

ಮನೆಯ ಹತ್ತಿರ ಇಳಿಸಿ ಮಾಯವಾಯಿತು.

ವರ್ತಕನಿಗೆ ತಮ್ಮ ಮಗಳನ್ನು ಕಂಡು ಪರಮಾನಂದವಾಯಿತು. ಅಪ್ಪಿಕೊಂಡು ಅಳತೊಡಗಿದನು. ಸಂತೋಷದಿಂದ ಅವಳನ್ನು ನೇವರಿಸಿದನು. ಸುಂದರಿ ಅಕ್ಕಂದಿರನ್ನು ಕರೆದು ಎಲ್ಲರಿಗೆ ತಾನು ಎರಡು ದಿನದ ಮಟ್ಟಿಗೆ ಬಂದಿರುವ ವಿಷಯ ತಿಳಿಸಿದಳು. ಅವಳ ಎರಡು ದಿನದ ಬದುಕು ಶುರುವಾಯಿತು. ತಂದೆ ಶೋಕದಿಂದ ಬಸವಳಿದಿದ್ದ. ಮನೆ ಮಾತ್ರ ಶ್ರೀಮಂತಿಕೆ ತೋರುತ್ತಿತ್ತು. ಅಕ್ಕಂದಿರಿಬ್ಬರೂ ಮದುವೆಯಾಗಿದ್ದರು. ಅವರಲ್ಲೊಬ್ಬಳು ಸ್ಫುರದ್ರೂಪಿಯಾದ ಶ್ರೀಮಂತನಾದ ಹುಡುಗನನ್ನು ಮದುವೆಯಾಗಿದ್ದಳು; ಆದರೆ ಆತ ತನ್ನ ರೂಮು, ಆಕರ್ಷಣೆಯಲ್ಲಿ ಮಗ್ನನಾಗಿದ್ದು ಅಕ್ಕನನ್ನು ಹೀಯಾಳಿಸಿ ಮಾತಾಡಿಸಿ ಗೋಳು ಹೊಯ್ದುಕೊಳ್ಳುತ್ತಿದ್ದ. ಎರಡನೆಯ ಅಕ್ಕ ಚತುರ ಮಾತಿನ ಚಾಣಾಕ್ಷನನ್ನು ಮದುವೆಯಾಗಿದ್ದಳು. ಆತ ತನ್ನ ಬುದ್ಧಿವಂತಿಕೆಯ ಮೆರೆಯಲು ಮಾತಿನ ಚಕಮಕಿಗಿಳಿದು ಅಕ್ಕನನ್ನು, ಎಲ್ಲರನ್ನು ಅವಮಾನಗೊಳಿಸುವುದರಲ್ಲೇ ಸುಖಿಸುತ್ತಿದ್ದ. ಅಕ್ಕಂದಿರ ಸಣ್ಣತನ ಹೆಚ್ಚಾಗಿತ್ತು; ಭಾವಂದಿರ ಸ್ವಾರ್ಥ ಅಪರಿಮಿತವಾಗಿತ್ತು. ಅವರೆಲ್ಲರ ಸ್ವಾರ್ಥಕ್ಕೆ ತಕ್ಕಂತೆ ಹೆಚ್ಚುಕಾಲ ಇರುವಂತೆ ಒತ್ತಾಯಿಸಿದರು. ಬಹುದಿನಗಳ ಬಳಿಕ ಮನೆಗೆ ಬಂದಿದ್ದ ಸುಂದರಿ ಕೂಡ ಒಪ್ಪಿ ಮೂರನೆ ದಿನ, ನಾಲ್ಕನೆ ದಿನ ಅರಣ್ಯಕ್ಕೆ ಹಿಂದಿರುಗಲೇ ಇಲ್ಲ.

ಹತ್ತನೆಯ ದಿನ ಆಕೆಗೆ ಅಳುಕು ಶುರುವಾಯಿತು. ಮೃಗ ಎಂದೂ ತನ್ನ ವಚನ ಮುರಿದಿರಲಿಲ್ಲ. ಎಂದೂ ಮನನೋಯಿಸಿರಲಿಲ್ಲ. ತನ್ನ ಭಾವಂದಿರಂತೆ ಕ್ರೂರ ಹೃದಯದ ವ್ಯಕ್ತಿಯಾಗಿರಲಿಲ್ಲ. ತನ್ನನ್ನು ನೆಮ್ಮದಿಯಾಗಿಡುವುದೇ ಅದರ ಸುಖವಾಗಿತ್ತು. ಅದರ ಮುಖ. ಚಲನವಲನ ನೆನಪಾದವು–ಅದನ್ನು ಮತ್ತೆ ನೋಡಬೇಕೆಂಬ ಆಶೆ ತೀವ್ರವಾಯಿತು. ಕೂಡಲೇ ತಂದೆಗೆ ತಿಳಿಸಿ ಅರಣ್ಯಕ್ಕೆ ಹೊರಟಳು. ಅರಣ್ಯದ ಅರಮನೆಯ ಸುಖಕ್ಕಿಂತ ಮೃಗದ ವ್ಯಕ್ತಿತ್ವ ಆಕೆಯ ಮನಸ್ಸು ತುಂಬಿತ್ತು. ಅರಮನೆ ತಲುಪಿ ಮೃಗಕ್ಕಾಗಿ ಹುಡುಕಾಡಿದಳು ಅದು ಇರಲಿಲ್ಲ. ಪುಷ್ಪವನದಲ್ಲಿ ನೋಡಿದಳು. ಅಲ್ಲಿಯೂ ಇರಲಿಲ್ಲ. ಅದು ತನಗೆ ಬೇಸರವಾಗಬಾರದೆಂದು ದೂರದಲ್ಲಿ, ಅರಮನೆಯ ಆಚೆಗಿದ್ದ ಬಂಡೆಯಮೇಲೆ ಕೂರುತ್ತಿದ್ದುದು ನೆನಪಾಯಿತು. ಅಲ್ಲಿಗೆ ಹೋದಳು ಮೃಗ ನೆಲಕ್ಕೊರಗಿತ್ತು. ಅದು ತೇಲುಗಣ್ಣು ಮೇಲುಗಣ್ಣಾಗಿ ಮಲಗಿತ್ತು. ಅದರೆ ದೇಹ ಬಡವಾಗಿ ಹೋಗಿತ್ತು.

ಆತ ಸತ್ತೇಹೋಗಿರಬಹುದೆಂದು ಭಯವಾಯಿತು. ಮೂಗಿನ ಹತ್ತಿರ ಬೆರಳಿಟ್ಟು ನೋಡಿದಳು. ಉಸಿರು ಹೋಗಿರಲಿಲ್ಲ. ದುಃಖದಿಂದ ಅಪ್ಪಿ, "ನೀನು ನನ್ನವನು ನೀನು ಸಾಯಬಾರದು, ನಾನು ನಿನ್ನನ್ನು ಮದುವೆಯಾಗುತ್ತೇನೆ." ಎಂದು ಕಂಬನಿಗರೆದಳು.

ಮೃಗ ಕ್ರಮೇಣ ಉಸಿರಾಡತೊಡಗಿತು. ಕಣ್ಣೀರು ಚಿಮ್ಮಿ ಸುಂದರಿಯ ಕೈಗಾಗಿ ತಡಕಾಡಿ ಎದ್ದು ಕೂತಿತು. ಬಂದೆಯಾ? ಸಂತೋಷಗೊಂಡಿತು.

"ಬಂದಿದ್ದೇನೆ ಮಾತ್ರವಲ್ಲ, ನಿನ್ನೊಂದಿಗೆ ಇರಲು ಖುಷಿ ಪಡುತ್ತಿದ್ದೇನೆ" ಅಂದಳು ಸುಂದರಿ.

"ನೀನಿಲ್ಲದೆ ನನಗೆ ಊಟ ಸೇರಲಿಲ್ಲ, ನಿದ್ರೆ ಬರಲಿಲ್ಲ, ನಿನ್ನನ್ನು ನೆನೆದುಕೊಂಡು ಕೂತುಬಿಟ್ಟೆ. ನಿನ್ನ ಮನೆಗೆ ಬಂದು ತೊಂದರೆ ಕೊಡಲೂ ನನಗೆ ಇಷ್ಟವಾಗಲಿಲ್ಲ. ಸುಂದರಿ, ನಿನಗೆ ನಾನು ಇಷ್ಟ ಎಂಬ ಒಂದು ಮಾತನ್ನು ಹೇಳು, ನಿನ್ನ ಪ್ರೀತಿಯ ಒಂದು ಮಾತು ಹೇಳು"

ಸುಂದರಿ ಕಂಬನಿದುಂಬಿ ನುಡಿದಳು. "ಪ್ರೀತಿಸುವುದು ಮಾತ್ರವಲ್ಲ. ನಿನ್ನನ್ನು ನಾನು ಮದುವೆಯಾಗುತ್ತೇನೆ."

ಮೃಗ ಸಂತೋಷಕ್ಕೆ ಹಿಗ್ಗಿತು. ಅದರ ಆಕಾರವೇ ಬದಲಾಗತೊಡಗಿತು. ಮೃಗ ಕ್ಷಣಾರ್ಧದಲ್ಲಿ ಸುಂದರ ರಾಜಕುಮಾರನಾಗಿ ಬದಲಾಯಿತು. ರಾಜಕುಮಾರ ಹೇಳಿದ, "ದೇವತೆಯೊಬ್ಬಳು ನನ್ನ ಸ್ವಪ್ರತಿಷ್ಠೆ ನೋಡಿ ಮೃಗವಾಗಿಸಿ 'ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ಮೃಗವಾಗಿಯೇ ಇರು' ಎಂದು ಶಾಪ ಹಾಕಿದ್ದಳು. ನನ್ನ ಮೃಗತ್ವ ನಿನ್ನಿಂದ ಕರಗಿತು. ನಿನ್ನನ್ನು ನನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ" ಅಂದ.

"ಅದು ನಿನ್ನಿಂದಲೇ ಕರಗಿತು" ಎಂದಳು ಸುಂದರಿ. ರಾಜಕುಮಾರ ತನ್ನ ಮಂತ್ರದಂಡದಿಂದ ತನ್ನ ಪ್ರಜೆಗಳನ್ನೆಲ್ಲ ಕರೆದ. ಅರಮನೆ ಇನ್ನೂ ಮೋಹಕವಾಗಿ ಝಗಝಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

ಮೇಲಿನ ಫೇರಿ ಕತೆ ಪಾಶ್ಚಿಮಾತ್ಯ ದೇಶಗಳಲ್ಲಿ ಮುಖ್ಯವಾಗಿ ಇಂಗ್ಲೆಂಡ್

ಮತ್ತು ಫ್ರಾನ್ಸ್‌ನಲ್ಲಿ – ಸುಮಾರು ಇನ್ನೂರು ವರ್ಷದಿಂದ ಜನಪ್ರಿಯವಾಗಿದೆ. "ಬ್ಯೂಟಿ ಅಂಡ್ ದಿ ಬೀಸ್ಟ್" ಎಂಬ ಹೆಸರಿನ ಈ ಕತೆ 'ಸಿಂಡರೆಲಾ' ಕತೆಗಿಂತ ಅರ್ಥಪೂರ್ಣವಾಗಿದ್ದು ಹೆಚ್ಚು ಸಂಕೀರ್ಣವೂ ವಾಸ್ತವತೆಗೆ ಹತ್ತಿರವೂ ಆಗಿದೆ. ನಿಜವಾದ ಪ್ರೇಮದ ಘಟ್ಟಗಳನ್ನು, ಗುಣಗಳನ್ನು ಗುರುತಿಸುವ ಈ ಕತೆಯನ್ನು ನಮ್ಮ ಓದುಗರು ಗಮನಿಸಬೇಕು ಎನ್ನಿಸಿ ಇದನ್ನು ಸರಳವಾಗಿ, ಅಲ್ಲಲ್ಲಿ ಸಂಗ್ರಹಿಸಿ ಹೇಳಲು ಯತ್ನಿಸಿದ್ದೇವೆ.

# ವಿಯೋಗ

**–ಕರೀಗೌಡ ಬೀಚನಹಳ್ಳಿ**

ಬೆಂಗಳೂರಿನಿಂದ ನಮ್ಮೂರಿಗೆ ಹೋದಾಗ ಬಯಲು ಸೀಮೆಯಲ್ಲಿ ಬೇಸಿಗೆ ಕಾಲ ಆರಂಭವಾಗಿ ಆಗಲೇ ಅನೇಕ ದಿನಗಳು ಕಳೆದಿದ್ದವು. ಊರಲ್ಲೆಲ್ಲಾ ಬೇಸಿಗೆಯ ಧೂಳು ಆವರಿಸಿತ್ತು. ಗಾಳಿ ಒಂದೇ ಸಮನೆ ಬೀಸುತ್ತಿತ್ತು. ಆದರೂ ಬೇಸಿಗೆಯ ಸೂರ್ಯ ನೆಲಕ್ಕೆ ಕೆಂಡ ಕಕ್ಕುತ್ತಿದ್ದ. ಮರ ಗಿಡಗಳೆಲ್ಲಾ ಆಗತಾನೆ ಚಿಗುರುತ್ತಿದ್ದವು. ಮನೆಯಿಂದ ಹೊರಗೆ ಬಂದರೆ ಬಿಸಿಲು ಕಣ್ಣಿಗೆ ರಾಚುತ್ತಿತ್ತು. ಮನೆಯೊಳಗೆ ಕೂತರೆ ಸೆಖೆ, ಬೆವರು, ಮೂಲೆಯಲ್ಲಿ ಅವ್ವ ಮಲಗಿ ನರಳುತ್ತಿದ್ದಳು. ಅವಳ ಕೈಬಾವು ಅವಳ ಪ್ರಾಣ ಹಿಂಡುತ್ತಿತ್ತು. ಆಕೆಯ ದುಃಖ ಕೇಳುತ್ತಾ ಕೂತ ನನಗೆ ಅಲ್ಲಿ ಕೂರಲಾಗದೆ, ಮನೆಯಲ್ಲಿ ಬೇರೆ ಯಾರೂ ಕಾಣದಿದ್ದರಿಂದ ಹೊಲದತ್ತ ಹೊರಟೆ.

ನಿಮ್ಮ ಅವ್ವನಿಗೆ ಉಷಾರಿಲ್ಲವೆಂದೂ, ಆಕೆ ಬದುಕುವುದು ಗ್ಯಾರಂಟಿ ಇಲ್ಲವೆಂದೂ, ನೀನು ಕೂಡಲೇ ಬಂದು ನೋಡಿಕೊಂಡು ಹೋಗಬೇಕೆಂದೂ ನನಗೆ ಬಂದಿದ್ದ ಓಲೆ ತಿಳಿಸಿತ್ತು. ಹಾಗೂ, ಯಾರೋ ಹಿರಿಯರು ಅನುಭವಸ್ಥರು ಕೂಡಲೇ ಬೆಂಗಳೂರಿಗೆ ಹೋಗಿ ದೊಡ್ಡಾಸ್ಪತ್ರೆಗೆ ತೋರಿಸಿದರೆ ನಿನ್ನ ಕಾಯಿಲೆ ಗುಣವಾದರೂ ಆಗಬಹುದೆಂದು ಅವನಿಗೆ ತಿಳಿಸಿದರಂತೆ. ಆದರೆ ಅಲ್ಲೇ ಯಾರೋ ಗಿಡಮೂಲಿಕೆ ಪಂಡಿತರೊಬ್ಬರು ಔಷಧಿ ಕೊಡುತ್ತಿದ್ದಾರೆಂದೂ, ಅದರಲ್ಲೇ ಆಕೆಯನ್ನು ಗುಣ ಪಡಿಸುವುದಾಗಿ ಖಾತ್ರಿ ನೀಡಿರುವರೆಂದೂ ಅದೇ ಓಲೆಯಲ್ಲಿ ತಿಳಿಸಿದ್ದರು.

ಆ ಓಲೆಯಿಂದ ಅವ್ವನ ಕಾಯಿಲೆ ಏನು ಎಂಬುದರ ಬಗ್ಗೆ ಸಾಕಷ್ಟು ವಿವರಗಳು ಇರದಿದ್ದರಿಂದ ಆಕೆಗೆ ಏನಾಗಿದೆ ಎಂದು ಒಂದು ಹೆಜ್ಜೆ ಊರಿಗೆ ಹೋಗಿ ನೋಡಿಕೊಂಡು ಬಂದು ಬಿಡುವ ಎಂಬ ನಿರ್ಧಾರದಿಂದ ಕಛೇರಿಗೆ ರಜೆ ಹಾಕಿ ನಾನು ಊರಿಗೆ ಬಂದುದು.

ಮನೆಯಿಂದ ನಾನು ಹೊಲದತ್ತಿರ ಬಂದಾಗ ಮಧ್ಯಾಹ್ನದ ಸೂರ್ಯ ಪಡುವಣ ದಿಕ್ಕಿಗೆ ವಾಲಿದ್ದ. ಹೊಲದಲ್ಲಿ ಯಾರೋ ಐದಾರು ಜನ ಯುವಕರು

ಇನ್ನೂ ಮರ ಕಡಿಯುತ್ತಿದ್ದರು. ಆಗಲೇ ಕಡಿದು ರಾಶಿ ಹಾಕಿದ್ದ ಕೆಲವು ಮರಗಳು ಮುಗಿಲೆತ್ತರಕ್ಕೆ ಮಲಗಿದ್ದವು. ನಾನು ಹತ್ತಿರಕ್ಕೆ ಹೋಗಿ ನಿಂತಾಗ ಮರ ಕಡಿಯುತ್ತಿದ್ದವರೆಲ್ಲಾ ನನ್ನನ್ನು ನೋಡುತ್ತಿರಬೇಕಾದರೆ ಅವರಲ್ಲಿ ಒಬ್ಬ ಯುವಕ ತಲೆ ಎತ್ತಿ ನನ್ನನ್ನು ಯಾರು, ಏನು, ಎನ್ನುವಂತೆ ನನ್ನ ಮುಖ ನೋಡಿದ. ನಾನು ಚಂದ್ರಣ್ಣನ ತಮ್ಮ ಎಂದು ಮಾತನ್ನು ಆರಂಭಿಸುತ್ತಿದ್ದಂತೆಯೇ, "ಓ, ನೀವೇನಾ ಚಂದ್ರಣ್ಣನ ತಮ್ಮ. ಬೆಂಗಳೂರಿ ನಲ್ಲಿರೋರು" ಎಂದ ಒಂದೇ ಉಸಿರಿಗೆ. ಅವನ ಮಾತಿನಿಂದ ಇನ್ನೊಬ್ಬ ತನ್ನ ತಲೆ ಎತ್ತಿ ನನ್ನ ನೋಡಿ, "ಬನ್ನಿ ಸಾ, ಯಾವಾಗ ಬಂದ್ರಿ?" ಎಂದು ಕೇಳಿದ. "ಮಧ್ಯಾಹ್ನ ಬಂದೆ" ಎನ್ನುತ್ತಾ ಕಡಿದು ಬಿದ್ದಿದ್ದ ಮರದ ದಿಮ್ಮಿಯ ಮೇಲೆ ಹೋಗಿ ಕೂರುತ್ತಾ, "ಯಾವೂರ್ನೋರು ನೀವು?" ಎಂದು ಅವರನ್ನು ಪ್ರಶ್ನಿಸಿದೆ.

"ನಾವು ದುರ್ಗದ ಶಾ ಮಿಲ್ನೋರು ಸಾ" ಎಂದ ಅವರಲ್ಲೊಬ್ಬ: "ಎಷ್ಟಕ್ಕೆ ಕೊಂಡುಕೊಂಡ್ರಿ ಈ ಮರಗಳನ್ನೆಲ್ಲಾ" ಎಂದು ಕೇಳಿದ್ದಕ್ಕೆ ಅವರಲ್ಲಿ ಮತ್ತೊಬ್ಬ "ಹದಿನೈದು ಸಾವಿರ ರೂಪಾಯಂತೆ" ಎಂದ. ಇನ್ನೊಬ್ಬ, "ಹದಿನೈದಲ್ವಂತೆ ಕಣಲೆ, ಇಪ್ಪತ್ತು ಸಾವಿರ ಅಂತೆ" ಎನ್ನುತ್ತಾ ಆತನನ್ನು ದಬಾಯಿಸಿದ. "ಎಷ್ಟು ಲೋಡಾಗ್ತದೆ" ಎಂದು ಕೇಳಿದ್ದಕ್ಕೆ ಒಬ್ಬ, ಇಪ್ಪತ್ತೈದು" ಅಂದರೆ ಇನ್ನೊಬ್ಬ, "ಮುವತ್ತೈದಾಗ್ತದೆ" ಅಂದ.

ಅವರಲ್ಲಿ ಒಬ್ಬ ಇದುವರೆಗೂ ನಾನು ಗಮನಿಸಿದಂತೆ ಮೌನವಾಗಿ ಮರ ಕಡಿಯುತ್ತಲೇ ಇದ್ದ: ಆತ ತನ್ನ ಏಟು ನಿಲ್ಲಿಸಿ, "ಏನ್ ಕೆಲಸದಲ್ಲಿ ಇದ್ದೀರಿ ಸಾರ್, ಬೆಂಗಳೂರಲ್ಲಿ" ಎಂದು ನನ್ನ ಪ್ರಶ್ನಿಸಿದ. ಆತನಿಗೆ ಯಾಕೋ ಏನೋ ನನ್ನ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿದ್ದಂತಿತ್ತು. ನಾನು ಇರುವ ನನ್ನ ಕೆಲಸದ ಬಗ್ಗೆ ಆತನಿಗೆ ಹೇಳಿದೆ. ಆತ ನನಗೆ ತಿಂಗಳಿಗೆ ಸಂಬಳ ಎಷ್ಟು ಬರುತ್ತದೆಂದು ಕೇಳಿದ. ನಾನು ಅದಕ್ಕೆ ಅವನಿಗೆ ಉತ್ತರಿಸಲು ಆಗದೆ ಅದು ಮಾತ್ರ ಆತನಿಗೆ ಅರ್ಥವಾದಂತೆ ಕಾಣಲಿಲ್ಲ. 'ನಿಮ್ಮಣ್ಣ ಮದುವೆ ಮಾಡಿಕೊಳ್ಳಿ ಅಂದ್ರೆ ನೀವು ಈಗಲೇ ಆಗೋದಿಲ್ಲ ಅಂತಾ ಇದ್ದೀರಂತೆ, ಯಾಕ್ ಸ್ವಾಮಿ?" ಎಂದಾಗ ನನಗೆ ಆತನಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಅವರ ಮಾತಿನಿಂದ ಈಗಾಗಲೇ ನನ್ನ ಬಗ್ಗೆ ನನ್ನಣ್ಣ ಏನೇನೋ ಹೇಳಿರಬೇಕು ಎಂಬ ಅನುಮಾನ ನನ್ನಲ್ಲಿ ಉಂಟಾಯಿತು.

ಈ ಮರಗಳನ್ನೆಲ್ಲಾ ಯಾಕೆ ಈಗ ಮಾರಬೇಕಿತ್ತು ನಮ್ಮಣ್ಣ' ಎನ್ನುತ್ತಾ ವಿಷಯಕ್ಕೆ ಬಂದೆ.

ಅವರಲ್ಲೊಬ್ಬ, "ಈ ಮರಗಳಿಂದ ಹೊಲದಲ್ಲಿ ಯಾವ ಬೆಳೆಯೂ ಆಗ್ತಿರಲಿಲ್ಲವಂತೆ ಸಾರ್, ಅದ್ಕೇ ಮಾರಿದ್ರಂತೆ ನಿಮ್ಮಣ್ಣ" ಎಂದ.

"ಬೆಳೆ ಆಗದೆ ಇರುವುದಕ್ಕೂ ಹೊಲದಲ್ಲಿ ಮರಗಳಿರುವುದಕ್ಕೂ ಏನು ಸಂಬಂಧ" ಎಂದೆ.

"ಸಂಬಂಧವಿದೆ ಸಾ. ಮರಗಳ ನೆರಳಿನಲ್ಲಿ ಯಾವ ಫಸಲೂ ಫಲಿಸುವುದಿಲ್ಲ. ಅವುಗಳ ನೆರಳು ಬೆಳೆಗೆ ಒಳ್ಳೆಯದಲ್ಲ" ಎಂದ ಒಬ್ಬ.

ಅವರ ತರ್ಕ ನನಗೆ ಒಂದೂ ಅರ್ಥವಾಗದೆ ಸುಮ್ಮನಾದೆ. ಇಷ್ಟರಲ್ಲಿ ಇನ್ನೊಬ್ಬ, 'ನಿಮ್ಮ ಅವ್ವಾರಿಗೆ ಈಗ ಕಾಯಿಲೆ ಹೇಗಿದೆ ಸಾರ್?" ಎಂದು ಕೇಳಿದ. "ಹಾಗೇ ಇದೆ. ತುಂಬಾ ಬಾಧೆಯಂತೆ" ಅಂದೆ.

"ಅವತ್ತು ಅವರಾಗಿಯೇ ಅನ್ನ ಮಾಡಿಕೊಂಡ್ರು ಸಾರ್" ಎಂದ ಆತ.

ನನಗೆ ಮನೆಯಲ್ಲಿ ಆಗಲೇ ಅವ್ವ ನೋವಿನ ಬಗ್ಗೆ ಹೇಳಿದ್ದರೂ ಅದರ ಬಗ್ಗೆ ಪೂರ್ಣ ವಿವರ ಸಿಕ್ಕಿರಲಿಲ್ಲ. ನಾನು ಕುತೂಹಲದಿಂದ ಆತನನ್ನು, ಅದು ಹೇಗಾಯ್ತು ಆಕೆಗೆ ಅವತ್ತು" ಎಂದೆ...

"ಅದು ಅವತ್ತು ನಡೆದದ್ದು ಹೀಗೆ ಸಾ" ಎನ್ನುತ್ತಾ ಇನ್ನೊಬ್ಬ ಹೇಳಲು ಹೊರಟ. ಆದರೆ ಆತನನ್ನು ತಡೆದು ಇನ್ನೊಬ್ಬ, "ನೀನು ಸುಮ್ನಿರ್ಲ; ನಾನೇ ಹೇಳೀನಿ, ನಿನಗೆ ಗೊತ್ತಾಗೋಲ್ಲ" ಎನ್ನುತ್ತಾ ಹೇಳಿದ

"ನೋಡಿ ಸಾರ್ ಅವತ್ತು ನಡೆದದ್ದು ಇಷ್ಟೆ: ನಿಮ್ಮಣ್ಣ ಈ ಮರಗಳನ್ನೆಲ್ಲಾ ಮಾರಿದ ವಿಷಯ ನಿಮ್ಮಮ್ಮನಿಗೆ ಗೊತ್ತಿರಲಿಲ್ಲವಂತೆ. ನಾವೆಲ್ಲಾ ಮರ ಕಡಿಯೋಕ ಬಂದ ದಿನ ಅವಳಿಗೆ ಗೊತ್ತಾಗಿ ಅವಳು 'ನಾನು ನೆಟ್ಟು ನೀರು ಹೂದು ಸಾಕಿ ಬೆಳೆಸಿದ ಮರಗಳ ನನ್ನ ಕಣ್ಮುಂದೆ ಕಡಿಯಕ್ಕೆ ನಾನು ಬಿಡುವುದಿಲ್ಲ. ನೀವು ಅವುಗಳ ಕಡಿಯೋದ್ರಾದೆ ಮೊದ್ಲು ನನ್ನ ಕಡಿದು, ಆಮೇಲೆ ನನ್ನ ಮರಗಳನ್ನು ಕಡಿದುಕೊಂಡು ಹೋಗಿ' ಅಂತ ನಮ್ಮನ್ನ ತಡೆದಳು. ಅಷ್ಟರಲ್ಲಿ ನಿಮ್ಮಣ್ಣ ಚಂದ್ರಣ್ಣ ಬಂದು, 'ಬಾರವ್ವ ನೀನು. ಇನ್ನು ಸಾಕು, ನಿನ್ನ ಗೋಳು' ಅನ್ನುತ್ತಾ ಅವರ

ರಟ್ಟೆ ಹಿಡಿದು ಎಳೆದರು. ಆಗ ಅವರು ಎಳೆದ ರಭಸಕ್ಕೆ ನಿಮ್ಮವ್ವ ಮಾರುದ್ದ ಹೋಗಿ ಬಿದ್ದರು. ಅಷ್ಟೇ ನೋಡಿ, ಅವತ್ತು ಆದದ್ದು."

ಇನ್ನೊಬ್ಬ, ಅವಳು ಬಿದ್ದದ್ದೇ ಒಂದು ನೆಪ ಆಯ್ತು ನೋಡಿ, ಅದೆಲ್ಲಿತ್ತೊ ಅವಳಿಗೆ ಕಾಯಿಲೆ ತೊಡಿಕೊತ್ತು!" ಎಂದ.

"ಅವಳು ಬಿದ್ದಾಗಲೇ ಆಕೆಯ ರಟ್ಟೆ ಮುರಿದಿರಬೇಕು!" ಎಂದ ಮತ್ತೊಬ್ಬ.

ಅವ್ವ ನೆಲಕ್ಕೆ ಬಿದ್ದು ವಿಲಿವಿಲಿ ಒದ್ದಾಡಿದ್ದನ್ನು ಕಣ್ಣಿಗೆ ಕಟ್ಟುವಂತೆ ಮಗದೊಬ್ಬ ಬಣ್ಣಿಸಿದ.

ಆಮೇಲೆ ಅವರು ಮರಗಳನ್ನು ಸುಗಮವಾಗಿ ಕಡಿಯುವುದಕ್ಕೆ ಆರಂಭಿಸಿದ್ದನ್ನು ಆತ ತಿಳಿಸಿದ. ಕಳೆದ ಹದಿನೈದು ದಿನಗಳಲ್ಲಿ ನಡೆದು ಹೋಗಿರುವ ಸಂಗತಿಗಳನ್ನೆಲ್ಲಾ ಅವರು ನನಗೆ ವಿವರಿಸುತ್ತಿದ್ದಾಗ ದುರ್ಗದ ಕಡೆಯಿಂದ ಅವರ ಯಜಮಾನ ಬರುತ್ತಿದ್ದದ್ದನ್ನು ಗುರುತಿಸಿದರು. ಆತ ಹತ್ತಿರ ಬರುತ್ತಲೇ ಅವರೆಲ್ಲರ ಮೇಲೆ ರೇಗಿದ. ಅವರೆಲ್ಲಾ ನಿಂತು ಸುಮ್ಮನೆ ಕಾಲ ಹರಣ ಮಾಡುತ್ತಿದ್ದಾರೆಂದೊ, ನನಗೆ ಏನೇನೋ ವಿಷಯಗಳನ್ನೆಲ್ಲಾ ಹೇಳುತ್ತಿದ್ದಾರೆಂದೊ ಆತನಿಗೆ ಮನವರಿಕೆಯಾದಂತಿತ್ತು. ಆಮೇಲೆ ಆ ಕೂಲಿಯವರೆಲ್ಲಾ ಮರಕಡಿಯುವ ತಂತಮ್ಮ ಕೆಲಸದಲ್ಲಿ ತೊಡಗಿದರು.

ಆ ಸಣಕಲ ಯಜಮಾನ ನನ್ನನ್ನು ಗಮನಿಸಿದರೂ ಎಷ್ಟೋ ಹೊತ್ತಿನ ಮೇಲೆ ನನ್ನನ್ನು ಕಂಡವನಂತೆ, "ಚಂದ್ರಣ್ಣನ ತಮ್ಮ ಅಲ್ಲವೇ ನೀವು? ಯಾವಾಗ ಬಂದ್ರಿ?" ಎಂದ. ನಾನು ಅಸಮಾಧಾನದಿಂದಲೇ, "ಬೆಳಿಗ್ಗೆ; ಅಲ್ಲಾ! ಮಧ್ಯಾಹ್ನ ಎಂದೆ. "ದುರ್ಗದಲ್ಲಿ ನಿಮ್ಮಣ್ಣ ಚಂದ್ರಣ್ಣ 'ಮಧ್ಯಾಹ್ನ ಸಿಕ್ಕಿದ್ದ, ನಿಮ್ಮವ್ವನಿಗೆ ಔಷಧಿ ಹಾಕಿಸಲು ಕಣ್ಬಟ್ಟರ ಕರೆದುಕೊಂಡು ಬರೋದಿಕ್ಕೆ ಕೊಡವತ್ತಿಗೆ ಹೊಗ್ತಾ ಇದ್ದಾ ಎಂದವನೇ, "ನಿಮ್ಮವ್ವನಿಗೆ ಈಗ ಹೇಗಿದೆ?" ಅಂದ ಆತ.

ಅವನೊಡನೆ ಮಾತನಾಡಲು ನನಗೆ ಅಸಹ್ಯ ಅನ್ನಿಸಿದ್ದರಿಂದ ನಾನು ಅಸಹನೆಯಿಂದಲೇ, ಹಾಗೇ ಇದೆ' ಎನ್ನುತ್ತಾ ಕೂತಲ್ಲಿಂದ ಎದ್ದು ಮನೆ ಕಡೆಗೆ ಹೆಜ್ಜೆ ಹಾಕಿದೆ.

ಅವ್ವ ನೆಟ್ಟು ಬೆಳೆಸಿದ ಮರಗಳನ್ನೆಲ್ಲಾ ಅವರು ಕಡಿದು ರಾಶಿಗಟ್ಟಿದ್ದರು.

ಸುಮಾರು ಹತ್ತು ಎಕರೆ ಖುಷ್ಕಿ ಹೊಲದಲ್ಲಿದ್ದ ವಿವಿಧ ಜಾತಿಯ ಮರಗಳನ್ನೆಲ್ಲಾ ನೆಲಸಮ ಮಾಡಿದ್ದರು ಆ ಜನ, ಸೋಮಾರಿ ಅಣ್ಣನ ಅಜ್ಞಾನದ ತಿಳಿವಳಿಕೆಗೆ ಅವ್ವನ ಅದಮ್ಯ ಪ್ರೀತಿಯ ಸಾಕು ಮರಗಳು ಆಹುತಿಯಾಗಿದ್ದವು. ಅವುಗಳಲ್ಲಿ ಅವ್ವ ತನ್ನ ಪ್ರಾಣ ಇಟ್ಟುಕೊಂಡಿದ್ದಳು. ಬಾಲ್ಯಕಾಲದಿಂದಲೂ ನನಗೆ ಗೊತ್ತಿದ್ದ ಇದು ಸಂಗತಿಯಾಗಿತ್ತು.

ನಾನು ಚಿಕ್ಕವನಾಗಿದ್ದಾಗ ಅವ್ವ, ಅಪ್ಪನ ಬಯಲು ಹೊಲದಲ್ಲಿ ಮರಗಳನ್ನು ನೆಟ್ಟು ಚಿಗುರೊಡಿಸಿದ್ದು, ಮರವಾಗಿಸಿದ್ದು ನನಗೆ ನೆನಪಿದೆ. ಬೀರೇ ದೇವರ ಗುಡಿಯ ಹತ್ತಿರ ಇದ್ದ ಆಲದ ಮರಕ್ಕೆ, ಬಸುರಿ ಮರಕ್ಕೆ ಕೊಂಬೆಗಳನ್ನು ಕಡಿಯಲು ಚಿಕ್ಕಂದಿನಲ್ಲಿ ನನಗೆ ಕಾಲುಗಳಿಗೆ ಮೆಟ್ಟಿಲು ಕೊಟ್ಟು ಮರ ಹತ್ತಿಸುತ್ತಿದ್ದಳು. ಕೆಳಗಿನಿಂದ ಆಕೆ ತೋರಿದ ರೆಂಬೆಗಳನ್ನು ಕಡಿದು ನಾನು ಇಳಿಯುವಾಗ ಆಕೆ ತನ್ನ ಕೈಗಳಿಂದ ಆತುಕೊಂಡು ನನ್ನನ್ನು ನೆಲಕ್ಕೆ ಇಳಿಸಿಕೊಳ್ಳುತ್ತಿದ್ದಳು. ಆಗ ನಾನು ರಟ್ಟೆಗಾತ್ರದ ಹುಡುಗ. ನಾನು ಕಡಿದ ರೆಂಬೆಗಳನ್ನು ಅವ್ವ ಹೊಲದ ಬದಿನ ಮೇಲೆ ಸರಿಯಾಗಿ, ಕ್ರಮವಾಗಿ ಗುಂಡಿ ಕೀಳಿಸಿ ನೆಟ್ಟು, ಅವಕ್ಕೆ ಬೀರೇದೇವರ ಗುಡಿಯ ಹಿಂದಿನ ಅಂಕೋಲೆ ಮರದಿಂದ ಮುಳ್ಳುಗಳನ್ನು ಕಡಿದು ತರಿಸಿ ಬೇಲಿ ಕಟ್ಟಿಸುತ್ತಿದ್ದಳು. ಮೈಲಿ ದೂರವಿದ್ದ ಬಾವಿಯಿಂದ, ಬೇಸಿಗೆಯ ಕಾಲದಲ್ಲಿ ನೀರು ಹೊತ್ತು ತಂದು ಹೂದು ಅವುಗಳನ್ನು ಕಾಪಾಡುತ್ತಿದ್ದಳು, ಅವುಗಳ ಜೊತೆಗೆ ಆಕೆ ಅಕ್ಕಿ, ಹಲಸು, ಹೊಂಗೆ, ಬೇವು, ಅರಳಿ ಹೀಗೆ ಥರಾವರಿ ಮರಗಳನ್ನು ಬೆಳೆಸಿ ಅಪ್ಪನ ಹೊಲವನ್ನು ಸುಮಾರು ಇಪ್ಪತ್ತೈದು ವರ್ಷಗಳಲ್ಲಿ ಒಂದು ಬೃಹತ್ ತೋಪು ಮಾಡಿದ್ದಳು. ತನ್ನ ಮಕ್ಕಳಿಗಿಂತ ಒಂದು ಕೈ ಮಿಗಿಲಾಗಿ ತಾನು ನೆಟ್ಟ ಮರಗಳನ್ನು ಪೋಷಣೆ ಮಾಡಿದ್ದು ಊರಿಗೆಲ್ಲಾ ತಿಳಿದಿತ್ತು. ಆಲ, ಬಸುರಿ, ಅತ್ತಿ ಹಣ್ಣಿನ ಕಾಲದಲ್ಲಿ ಅಲ್ಲಿ ನೆರೆಯುತ್ತಿದ್ದ ಎಷ್ಟೋ ಪಕ್ಷಿ ಸಂಕುಲಕ್ಕೆ ಸಂಖ್ಯೆ ಇರಲಿಲ್ಲ, ಹೆಸರುಗಳಿರಲಿಲ್ಲ. ನಮ್ಮ ಮನೆಯ ದನಗಳು ಬೇಸಿಗೆಯಲ್ಲಿ ಅರಳಿಸೊಪ್ಪನ್ನು ತಿಂದು ಸಂತೃಪ್ತಿ ಪಡೆಯುತ್ತಿದ್ದವು. ಆಡುಗಳಿಗೆ ಆಲ, ಬಸುರಿ ಮರದ ಸೊಪ್ಪು ಹಿತವಾಗಿರುತ್ತಿತ್ತು. ಆ ಮರಗಳ ನೆರಳಿನಲ್ಲಿ ಅದೆಷ್ಟು ಜನ ದಾರಿಹೋಕರು, ಕುರಿದನ ಕಾಯುವವರು ಬೇಸಿಗೆಯ ತಾಪವನ್ನು ತಂಪು ಮಾಡಿಕೊಂಡಿದ್ದರೋ ಲೆಕ್ಕವಿಲ್ಲ. ಹೊಂಗೆಯ ಮರಗಳಲ್ಲಿನ ಹೂವಿನಲ್ಲಿ ದುಂಬಿಗಳು ಹಿತವಾದ ಸಂಗೀತದ ಹೊನಲನ್ನೇ ಹರಿಸಿದ್ದವು. ಅವುಗಳಿಂದ ಉದುರುತ್ತಿದ್ದ

ತರಗು ರಾಶಿಗಟ್ಟಲೆಯಾಗಿ ಅದು ಅಪ್ಪನ ಗದ್ದೆಗೆ ಗೊಬ್ಬರವಾಗುತ್ತಿತ್ತು.

ಆದರೆ ಅಣ್ಣ ಅವುಗಳ ನೆರಳಿನಲ್ಲಿ ರಾಗಿ ಫಸಲು ಫಲಿಸುತ್ತಿಲ್ಲ ಎಂಬ ಕಾರಣವನ್ನಿತ್ತು ಅವುಗಳನ್ನು ನೆಲಸಮ ಮಾಡಲು ಹೊರಟಿದ್ದು ಅವನ ಹೃದಯಕ್ಕೆ ಬೆಂಕಿ ಇಟ್ಟಂತಾಗಿತ್ತು. ಅಪ್ಪ ಇದ್ದಾಗಲೂ ಆ ಮರಗಳು ಇದ್ದವು. ಅಪ್ಪ ಸತ್ತು ಮೂರ್ನಾಲ್ಕು ವರ್ಷವಾಗಿದೆ ಅಷ್ಟೆ. ಆಗ ಅಪ್ಪ ಅಲ್ಲಿ ಬೆಳೆಯುತ್ತಿದ್ದದ್ದು ಮಳೆ ಹೂದು ಚೆನ್ನಾಗಿ ಬೆಳೆಯಾದರೆ ಹತ್ತು ಖಂಡುಗ ರಾಗಿಯೇ. ಹಾಗಾದರೆ ಹೇಗೆ ಅಲ್ಲಿ ಫಸಲು ಫಲಿಸುತ್ತಿಲ್ಲ ಎಂಬುದು ಮಾತ್ರ ರಹಸ್ಯವಾಗಿತ್ತು. ಅಷ್ಟೆಲ್ಲಾ ಮರಗಳನ್ನು ಅಷ್ಟೊಂದು ಅಗ್ಗವಾಗಿ ಮಾರುವುದಕ್ಕೆ ಅಣ್ಣ ಮತ್ತು ಆ ಯಜಮಾನನ ನಡುವೆ ಏನೋ ಗುಟ್ಟಿನ ವ್ಯವಹಾರ ನಡೆದಿರಬೇಕು ಅನ್ನಿಸಿತು.

ಮರ ಕಡಿಯುವವರಿಗೂ ಅವು ಅದೆಷ್ಟು ಲಾರಿಗಳಾಗುತ್ತವೆ ಎಂಬುದರ ಬಗ್ಗೆ ಅಂದಾಜು ಇದ್ದಂತಿರಲಿಲ್ಲ. ದೊಡ್ಡ ದೊಡ್ಡ ದಿಮ್ಮಿಗಳನ್ನು ಕಳೆದು ಕೊಂಬೆರೆಂಬೆಗಳೇ ಸುಮಾರು ಇಪ್ಪತ್ತು ಲಾರಿಗೂ ಮಿಕ್ಕು ಸೌದೆಗಳಾಗುವಂತಿತ್ತು. ಅಣ್ಣ ಮಾಡಿರುವ ಆ ಕೆಲಸದ ಬಗ್ಗೆ ನನ್ನಲ್ಲಿ ಅತೀವವಾಗಿ ವ್ಯಸನವೂ, ಕೋಪವೂ ಉಂಟಾಯಿತು. ವಿಷಯ ಮೊದಲೇ ಗೊತ್ತಾಗಿದ್ದರೆ ಹೇಗಾದರೂ ಮಾಡಿ ಮರಗಳನ್ನು ಕಡಿಯುವುದನ್ನು ನಿಲ್ಲಿಸಬಹುದಿತ್ತು. ಆದರೆ ಈಗ ಉಳಿದಿರುವುದೊಂದೇ ಬಾಕಿ ಎಂದರೆ ಸಾಯುತ್ತಾ ಮಲಗಿರುವ ಅವ್ವನನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವುದು. ಆದರೆ ಆ ಮರಗಳಲ್ಲಿ ತನ್ನ ಜೀವಪಕ್ಷಿಯನ್ನು ಮಡಗಿಕೊಂಡಿದ್ದ ಅವ್ವ, ಬದುಕುತ್ತಾಳೆಯೇ? ಬದುಕಿದರೂ ಮೊದಲ ಹಾಗೆ ಲವಲವಿಕೆಯಿಂದ ಇರುತ್ತಾಳೆಯೇ? ಎಂಬ ಅನುಮಾನಗಳು, ಪ್ರಶ್ನೆಗಳು ನನ್ನಲ್ಲಿ ಉಂಟಾಗಿದ್ದವು.

ಮುಸ್ಸಂಜೆ ತುಂಬಿಸಿಕೊಂಡು ನಾನು ಆ ಮನೆಗೆ ಬಂದಾಗ ದನ ಕಾಯಲು ಹೋಗಿದ್ದ ಅತ್ತಿಗೆ ಆಗಲೇ ಬಂದಿದ್ದಳು. ಅವಳ ಐದು ವರ್ಷದ ಮತ್ತು ಮೂರು ವರ್ಷದ ಮಕ್ಕಳೆರಡೂ ಆಟವಾಡುತ್ತಿದ್ದವು. ಅವುಗಳ ಹಿಂದೆ ಆಗಲೇ ಆಕೆ ಮೂರನೆಯ ಮಗುವಿಗೆ ತುಂಬು ಗರ್ಭಿಣಿ, ಕೊಡವತ್ತಿಗೆ ನಾಟಿವೈದ್ಯರನ್ನು ಕರೆದು ತರಲು ಹೋಗಿದ್ದ ಅಣ್ಣ ಅವರ ಜೊತೆಗೆ ನಾನು ಮನೆಗೆ ಬಂದ ಮೇಲೆ ಇಳಿದ. ನನ್ನನ್ನು ಕಂಡು ಯಾವಾಗ ಬಂದೆ ಎಂದು ವಿಚಾರಿಸಿದ. ನಾಟಿವೈದ್ಯ ಕಣ್ಬಟ್ಟರು ನಾಲ್ಕೈದು ದಿನದ ಕೆಳಗೆ ಬಂದು ಅವ್ವನ ಕೈಗೆ ಬ್ಯಾಂಡೇಜು

ಹಾಕಿ ಔಷಧಿ ಕೊಟ್ಟು ಹೋಗಿದ್ದರಂತೆ. ಮತ್ತೆ ಅವರು ನಿನ್ನೆ ದಿನವೇ ಬರಬೇಕಾಗಿತ್ತಂತೆ. ಆದರೆ ಆ ದಿನ ಅವರು ಬರಲಿಲ್ಲವಾದ್ದರಿಂದ ತಾನೇ ಇಂದು ಕರಕೊಂಡು ಬರಲು ಹೋಗಿದ್ದನೆಂದು ನನಗೆ ಎಲ್ಲಾ ಒಪ್ಪಿಸಿದ. ಆತನ ಹೇಳಿಕೆ ಕೇಳಿಕೆಯಲ್ಲಿ ನನಗೆ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ಆತ ಇತ್ತೀಚೆಗೆ ಕೆಲವು ಕೆಟ್ಟ ಸಹವಾಸಗಳಿಗೆ ಬಿದ್ದಿದ್ದಾನೆಂದು ಕೇಳಿದ್ದೆ. ಅದರಿಂದ ಆತ ಸುಳ್ಳು ಹೇಳುವುದನ್ನು ಸಹಜಗುಣವನ್ನಾಗಿ ಮಾಡಕೊಂಡಿದ್ದಾನೆ ಅನ್ನಿಸಿತ್ತು. ನಾನು ಆತನನ್ನು ಯಾಕೆ ಹೀಗೆ ಮಾಡಿದೆ ಎಂದು ಕೇಳುವ ಯೋಚನೆ ಮಾಡಲಿಲ್ಲ. ಅದಕ್ಕೆ ಆತ ಸರಿಯಾದ ಉತ್ತರ ಕೊಡುವ ಸ್ಥಿತಿಯಲ್ಲಿಯೂ ಇಲ್ಲ ಎಂಬುದು ನನಗೆ ಅರಿವಾಗಿತ್ತು. ಆತ ಏನು ಹೇಳಿದರೂ ಅದಕ್ಕೆ ನಾನು ಒಂದನ್ನೂ ಪ್ರತಿಕ್ರಿಯಸದೆ ಸುಮ್ಮನೆ ನಡುಮನೆಯಲ್ಲಿ ಕೂತೆ.

ಅವ್ವ ಮೂಲೆಯಿಂದ ತನ್ನ ನೋವಿನ ದನಿ ತೆಗೆದು, "ಹೊಲದತ್ತಿರ ಹೋಗಿದ್ದೇನೋ" ಎಂದು ನನ್ನ ಕೇಳಿದಳು.

"ಹೋಗಿದ್ದೆ".ಎಂದೆ ನಾನು.

"ನೋಡ್ದೇನೋ ಏನು ಮಾಡಿದ್ದಾರೆ ಆ ದುಷ್ಟರು" ಎಂದಳು ಅವ್ವ. ನೂರಾರು ಪ್ರಶ್ನೆಗಳಿಗೆ ಉತ್ತರಿಸಲಾಗದೆ ಆಕಾಶವನ್ನು ನಿಟ್ಟಿಸುತ್ತಿದ್ದೆ.

ಅವ್ವ ಹೊಲದಲ್ಲಿ ಕೂರಲು ಬಿಸಿಲಿಗೆ ಪರಿತಪಿಸಿದಳು. ತನ್ನ ನೆಲದಲ್ಲಿ ನೆರಳು ತಡಕಿದಳು. ತನ್ನ ಮರಗಳ ತಂಪು ಹುಡುಕಿದಳು. ಹುಚ್ಚಿ ಥರ ಗೋಳಾಡಿದಳು. ಅಣ್ಣನ ಮೇಲೆ ಹಿಡಿ ಹಿಡಿ ಶಾಪ ಹಾಕಿ, ಮರ ಕಡಿದವರನ್ನು ಕಟುಕರೆಂದು ಜರಿದಳು. "ನಿನಗೆ ಏನೂ ಅನ್ನಿಸುವುದೇ ಇಲ್ಲವೆ?" ಎಂದು ನನ್ನನ್ನು ಪ್ರಶ್ನಿಸಿದಳು.

ನಾನು ಮೂಕನಾಗಿ ನಿಂತಿದ್ದೆ.

ಕೂತಿದ್ದವಳು ಎದ್ದು, 'ಬಾ' ಎಂದು ನನ್ನ ಕರೆದು ನಮ್ಮ ಹೊಲದ ಹತ್ತಿರವಿದ್ದ ಬೀರೇದೇವರ ಗುಡಿಯ ಹತ್ತಿರ ನಡೆದಳು. ನಾನು ಅವ್ವನ ಸೆರಗು ಹಿಡಿದು ಕಂದನಂತೆ ಹಿಂಬಾಲಿಸಿದೆ.

ಬೀರೇದೇವರ ಬಾಗಿಲಿಗೆ ಬಂದು ಕೈಮುಗಿದು ಅಡ್ಡಬಿದ್ದು ಎದ್ದು ಎದುರಿಗೆ ಇದ್ದ ಆಲದಮರಕ್ಕೆ ಬಸುರಿಮರಕ್ಕೆ ಕೈ ತೋರಿಸುತ್ತಾ ಅವ್ವ ನನಗೆ ಹೇಳಿದಳು:

"ಮರ ಹತ್ತಿ ನಾಲ್ಕು ಕೊಂಬೆ ಕಡಿ." ನಾನು ತಬ್ಬಿಬ್ಬಾಗಿ ಅವ್ವನ ನೋಡಿದೆ.

"ಏನು ನೋಡ್ತೀಯಾ? ಚಿಕ್ಕಂದಿನಲ್ಲಿ ಕೊಂಬೆ ಕಡಿದಿದ್ದ ಮರೆತುಬಿಟ್ಟಾ? ಹತ್ತು, ಕಡಿ" ಅಂದಳು–ತನ್ನ ನಡುವಿನಲ್ಲಿ ಸಿಕ್ಕಿಸಿದ್ದ ಕುಡುಗೋಲನ್ನು ತೆಗೆದು ನನ್ನ ಕೈಗೆ ಇಡುತ್ತ, ಆ ಕುಡುಗೋಲು ಮಾತ್ರ ಯಾವಾಗಲೂ ಅವ್ವನ ನಡುವಿನಲ್ಲೇ ಇರುತ್ತಿತ್ತು.

ಪಂಚೆ ಬಿಚ್ಚಿಟ್ಟು ಚಿಗುರೊಡೆಯಲು ಆಗತಾನೆ ಕಣ್ಣು ಬಿಟ್ಟಿದ್ದ ಬಸುರಿ ಮರ ಹತ್ತಿ ನಾಲ್ಕೈದು ಕೊಂಬೆ ಕಡಿದು ಕೆಳಗೆ ಇಳಿದೆ. ಮತ್ತೆ ಆಲದ ಮರಕ್ಕೂ ಹತ್ತಿ ನಾಲ್ಕು ಕೊಂಬೆಗಳನ್ನು ಕಡಿಯುವವರೆಗೂ ಅವ್ವ ನನ್ನನ್ನು ಬಿಡಲಿಲ್ಲ.

ಅಪ್ಪ ಹೇಳಿದಂತೆ ಕಡಿದ ಕೊಂಬೆಗಳನ್ನು ಹೊತ್ತು ಹೊಲದ ಹತ್ತಿರ ತಂದು ಹಾಕಿದೆ. ಗುಂಡಿ ತೋಡಲು ಮನೆಗೆ ಹಾರೆ ತರಲು ಕಳುಹಿಸಿದಳು. ನಾನು ಒಂದೇ ಓಟಕ್ಕೆ ಹೋಗಿ ಒಂದೇ ಓಟಕ್ಕೆ ಹಾರೆ ತಂದೆ. ನಾನು ಓಡಿ ಬರುವುದನ್ನು ಜನ ಗಾಬರಿಯಿಂದ ನೋಡುತ್ತಿದ್ದರು. ನಾನು ಬರುವ ಹೊತ್ತಿಗಾಗಲೇ ಅವುಗಳನ್ನೆಲ್ಲಾ ಎಲ್ಲೆಲ್ಲಿ ನೆಡಬೇಕೆಂದು ಅವ್ವ ಗುರುತು ಮಾಡಿದ್ದಳು. ಆಕೆ ಗುರುತು ಮಾಡಿದ್ದ ಕಡೆಯಲ್ಲೆಲ್ಲಾ ಗುಂಡಿ ಕಿತ್ತು ಕೊಂಬೆಗಳನ್ನೆಲ್ಲಾ ನೆಟ್ಟೆ.

ಹುಲ್ಲು ಮೆದೆಯಲ್ಲಿಟ್ಟಿದ್ದ ಗಡಿಗೆಯಿಂದ ನೀರು ತರುವುದಾಗಿ ಹೇಳಿ ಅವ್ವ ಕರಲುಕಟ್ಟೆ ಕಡೆಗೆ ಹೊರಟಳು. "ನಾನು, ನಿನ್ನ ಕೈಯಲ್ಲಿ ಆಗುವುದಿಲ್ಲ. ರಟ್ಟೆ ಮುರಿದು ಹೋಗಿದೆ. ಬೇಡ ಸುಮ್ಮನೆ ಕೂರವ್ವ, ನಾನೇ ನೀರು ತಂದು ಹಾಕ್ತಿನಿ" ಎಂದೆ.

"ಏನಂದೆ? ನೋಡು, ನನ್ನ ರಟ್ಟೆಗೆ ಏನೂ ಆಗಿಲ್ಲ; ಹೇಗಾಡ್ತದೆ!" ಎನ್ನುತ್ತಾ ಅವ್ವ ತನ್ನ ರಟ್ಟೆಯನ್ನು ಮೇಲಕ್ಕೆ ಎತ್ತಿ ಅತ್ತ ಇತ್ತ ಗರಗರ ತಿರುಗಿಸಿದಳು. ಅದುವರೆಗೂ ಬಿದ್ದು ಹೋಗಿದ್ದ ಅವ್ವನ ರಟ್ಟೆ ಮಂತ್ರದ ದಂಡದ ಥರ ಅತ್ತಿಂದಿತ್ತ ಇತ್ತಿಂದತ್ತ ಆಡತೊಡಗಿತು. ಆಗ ನನಗೆ ಅದರ ಚೋದ್ಯ ಒಂದೂ ಅರ್ಥವಾಗದೆ ಅವ್ವನನ್ನೇ ನೋಡುತ್ತಾ ಕಲ್ಲಿನಂಗೆ ನಿಂತಿದ್ದೆ.

## ಓದು ಪತ್ಯ

# ಮರಳಿ ಬದುಕಿಗೆ ಈ ಪಯಣ...

**–ನೇಮಿಚಂದ್ರ**

ಒಂದು ಮುಂಜಾನೆ, ಹಗಲು ಕಣ್ಣುಬಿಡುವ ಬೆಳಗು ಮುಂಜಾನೆ, ನನ್ನ ಜಗತ್ತು ಕತ್ತಲಾಯಿತು. ಬೆಳಗ್ಗೆ ಜಾಗಿಂಗ್ ಹೊರಟ ನೀನು ಹಿಂತಿರುಗಲಿಲ್ಲ. ಆಸ್ಪತ್ರೆಯಿಂದ ಫೋನ್ ಬಂದಾಗ ಗಂಟೆ ಒಂಬತ್ತು ದಾಟಿತ್ತು.

'ನರ್ಸಿಂಗ್ ಹೋಂ' ನಾ ತಲುಪುವ ಹೊತ್ತಿಗೆ ಬದುಕಿನಾಚೆಗೆ ಒಂದು ಕಾಲಿಟ್ಟು ಕಾದಿದ್ದೆ. ಐ.ಸಿ.ಯು.ನಲ್ಲಿ ನೀ ಮಲಗಿದ್ದೆ. ಬಿಳಿಯ ಹೊದಿಕೆಯಲ್ಲಿ ನೀಲಿಗಟ್ಟಿ ಕಪ್ಪಿಟ್ಟ ಮುಖ. 'ಮಿ. ರಿಪುದಮನ್ ಸಿಂಗ್, ಐ ಆಮ್ ಸಾರಿ...' ಎಂದ ವೈದ್ಯರು ನೀ ಉಳಿಯುವ ಯಾವ ಭರವಸೆಯನ್ನೂ ನೀಡಲಿಲ್ಲ. ಸುಳ್ಳಾದರೂ ಸರಿ ಈ ಕ್ಷಣಕ್ಕೆ ಅವರು 'ಎಲ್ಲ ಸರಿ ಹೋಗುತ್ತೆ ಧೈರ್ಯವಾಗಿರಿ' ಎನ್ನಬಹುದೆಂದು ಕಾದೆ. ಹಾಗಾಗಲಿಲ್ಲ, ಆಪರೇಷನ್‌ಗೆ ಅನುಮತಿ ಕೋರಿ ಪತ್ರಕ್ಕೆ ಸಹಿ ಹಾಕಲು ಕೈಗಿಟ್ಟರು. ಅರ್ಥವಾದದ್ದಿಷ್ಟು–'ತಲೆಗೆ ವಿಪರೀತ ಪೆಟ್ಟು ಬಿದ್ದಿದೆ. ಒಳಗೆ ರಕ್ತಸ್ರಾವವಾಗಿ ಹೆಪ್ಪುಗಟ್ಟಿದೆ. 'ಕ್ಲಾಟ್ಸ್' ತೆಗೆಯುತ್ತಾರಷ್ಟೆ, ಜೀವ ಉಳಿಯುವ ಭರವಸೆಯಿಲ್ಲ. ಬದುಕಬಹುದು ಜೀವಂತ ಹೆಣದಂತೆ, ಮಿದುಳು ಸತ್ತ ದೇಹವೊಂದೆ. ಸಹಿ ಹಾಕದೆ ಪೆನ್ನು ಪಕ್ಕಕ್ಕಿಟ್ಟೆ. ಹೊರಗೆ ಬಂದೆ, ಎರಡೂ ಕೈಯಲ್ಲಿ ತಲೆ ಹಿಡಿದು ಸದ್ದಿಲ್ಲದೆ ಬಿಕ್ಕಿದೆ. ಸಂಜೆ ಕತ್ತಲಾಯಿತು. ಎಷ್ಟೋ ಹೊತ್ತಿನ ಮೇಲೆ ಏನೋ ನಿರ್ಧರಿಸಿದೆ, ನಿನ್ನನ್ನು ಬೀಳ್ಕೊಡಲು ಸಿದ್ಧವಾದೆ. ಒಂದೊಂದಾಗಿ ಫೋನು ತಿರುಗಿಸಿದೆ. ಕ್ಷಣದಲ್ಲಿ ನಿನ್ನ ಅಪಘಾತದ ಸುದ್ದಿ ಸುತ್ತು ಹಬ್ಬಿತ್ತು. ಅಮ್ಮ, ತಮ್ಮ, ತಂಗಿಯರು, ನೆಂಟರು, ಇಷ್ಟರು, ಇಷ್ಟವಿಲ್ಲದವರು, ಸ್ನೇಹಿತರು, ಸಹೋದ್ಯೋಗಿಗಳು, ಎಲ್ಲರ ಜಾತ್ರೆ ನೆರೆದಿತ್ತು. ಇದೀಗ ನಿನ್ನ ಬದುಕಿನ ನಿರ್ಣಯ ನನ್ನ–ನಿನ್ನದಾಗಿರಲಿಲ್ಲ. ಒತ್ತಡಗಳು, ಒತ್ತಾಯಗಳು, ನನಗೆ ಆಯ್ಕೆಯ ಹಕ್ಕು ಉಳಿದಿರಲಿಲ್ಲ. ನೀನು ನನ್ನೊಬ್ಬನಿಗೆ ಸೇರಿದವಳಾಗಿರಲಿಲ್ಲ, ಈ ಕ್ಷಣ ನೀನು ಎಲ್ಲರ ಸ್ವತ್ತಾಗಿದ್ದೆ. ನಿನ್ನ ಆಪರೇಷನ್‌ಗೆ ಸಹಿ ಹಾಕುವಾಗ ಕೈ ನಡುಗಿತ್ತು.

ನೆನಪಿತ್ತು ನನಗೆ, ಐದು ವರ್ಷದ ಹಿಂದೆ ಲತಾಳ ಗಂಡ ರಮೇಶ, ಸ್ಕೂಟರ್ ಅಪಘಾತದಲ್ಲಿ ನಿಮ್ಹಾನ್ಸ್‌ನಲ್ಲಿ ಮೂರು ತಿಂಗಳು ಮಲಗಿ, ಜೀವಚ್ಛವವಾಗಿ ಮನೆಗೆ ಬಂದದ್ದು. ಮತ್ತೆ ಒಂದೂವರೆ ವರ್ಷಗಳ ಕಾಲ ದೇಹಕ್ಕೆ ಉಸಿರು ಅಂಟಿತ್ತು. ಬದುಕು ಮುಗಿದಿತ್ತು ಬರೀ ರಮೇಶನಿಗಲ್ಲ, ಲತಾಗೂ, ಸತ್ತ ಮಿದುಳಿನ ರಮೇಶ ಬದುಕಿದ್ದ. ಬದುಕಿದ್ದ ಲತಾ ಸತ್ತಿದ್ದಳು, ಹಗಲಿರುಳ ಆಸ್ಪತ್ರೆ ಓಡಾಟದಲ್ಲಿ, ದಿನಬೆಳಗು ರಕ್ತ ಮಾಂಸಗಳ ದೇಹದ ಆರೈಕೆಯಲ್ಲಿ, ನೀ ಹೇಳಿದ್ದೆ 'ರಿಪು ನನಗೆಂದಾದರೂ ಇಂಥಾ ಸ್ಥಿತಿ ಬಂದರೆ, ನೀ ನನ್ನನ್ನು ಬದುಕಿಸಿಕೊಳ್ಳಬಾರದು. ನಾನು ನಾನಾಗಿಲ್ಲದ' ಬರಿ ದೇಹವನ್ನು ಹಿಡಿದು ಜಗ್ಗಬಾರದು. ನಾ ಯಾರಿಗೂ ಹೊರೆಯಾಗಿ ಬದುಕಲು ಇಚ್ಛಿಸೋಲ್ಲ. ನನ್ನ ಬದುಕಿನ ಈ ಅಭಿಮಾನವನ್ನು ಸಾವಿನಲ್ಲಿ ಕಳೆಯಬೇಡ, ನನಗೆ ಗೌರವದ ಸಾವು ಬೇಕು' ಎಂದಿದ್ದೆ. ಆಪರೇಷನ್ ನಂತರವೂ ನಿಶ್ಚಲವಾಗಿ ಮಲಗಿದ್ದ ನಿನ್ನ ಬದಿ ಕುಳಿತು ನಾನು ಬಿಕ್ಕಿದೆ– 'ನೀನು ಬಯಸಿದ ಸಾವನ್ನು ನಾನೆಲ್ಲಿಂದ ತಂದುಕೊಡಲಿ. ಮುಂದಿನೆರಡು ದಿನ ಸಾವುಬದುಕಿನ ನಡುವೆ ಜೀವ ಜೋಕಾಲಿ.

ನಿನ್ನ ದೇಹ ಮಲಗಿತ್ತು ಅಲುಗಾಡದೆ, ಮೂಗು, ಬಾಯಿ, ಮೂತ್ರ ಎಲ್ಲಕ್ಕೂ ತೂರಿಸಿದ ನಳಿಕೆಗಳ ನಡುವೆ, ಕೈ ಮೈಯಲ್ಲೆಲ್ಲ ಚುಚ್ಚಿ ಸುರಿದ ಜೀವರಸದ ಹನಿಹನಿಗಳ ಮೇಲೆ ಉಸಿರು ನಿಂತಿತ್ತು. ಗಂಟೆಗಟ್ಟಲೆ ನಿನ್ನ ಬಳಿ ಕುಳಿತು ಮಾತನಾಡಿದೆ. ನಿನ್ನ ಮುಖದಲ್ಲಿ, ದೇಹದಲ್ಲಿ ನನ್ನ ದನಿ ಕೇಳಿಸಿದ ಜೀವ ಲಕ್ಷಣದ ಒಂದು ಸಣ್ಣ ಸುಳಿವು ಕಾಣಲು ಕಾತರಿಸಿದೆ. ಏನೋ ಆಸೆ ನೀನೆಲ್ಲೋ ಇರುವೆ, ಇಲ್ಲೆಲ್ಲೋ ಒಳಗೆ, ತಟ್ಟಿದ ನನ್ನ ಕರೆಗೆ ಓಗೊಟ್ಟು ಬರುವೆ, ಕಣ್ಣು ಬಿಡುವೆ.

ದಿನಗಳುರುಳಿದವು, ಕಾದೆ ಹುಡುಗಿ, ನಿನ್ನ ಎಚ್ಚರದ ಗಳಿಗೆಗೆ ಮತ್ತೆ ಪಡೆಯುವನೆ ನಿನ್ನ ಹಿಂದಕ್ಕೆ, ನೀನಿದ್ದಂತೆ, ಮೊದಲಿನಂತೆ, ಯಾವ ರೂಪದಲ್ಲಿ ನಿನ್ನ ಪಡೆಯುವೆನು ಮತ್ತೆ? ಪ್ರಶ್ನೆಗಳ ಪ್ರವಾಹದಲ್ಲಿ ಕೊಚ್ಚಿ ಹೋಗುವ ಬದಲು ವಾಸ್ತವದ ದಂಡೆಯಲ್ಲಿ ಕಾಲೂರಿ ನಿಂತೆ. ಮನೆಗೆ ಬರುವೆ, ಗ್ಯಾಸ್ ಹಚ್ಚಿ ಚಹಾ ತಯಾರಿಸಿ ಕುಡಿಯುವೆ, ಮಗಳಿಗೆ ಹಾರ್ಲಿಕ್ಸ್ ಕಲಕಿ ಕೊಡುವೆ. ಉದ್ದನೆಯ ಕೂದಲನ್ನು ಕತ್ತರಿಸಿ ಎರಡು ಜುಟ್ಟು ಏರಿಸಿ ಶಾಲೆಗೆ ಕಳುಹಿಸುವೆ. ಬಹುಪಾಲು ಗಂಡಂದಿರಂತೆ ನಾ ನಿನ್ನನ್ನು ಅಡಿಗೆ ಮನೆಯಲ್ಲಿ, ಮಲಗುವ ಕೋಣೆಯಲ್ಲಿ

'ಮಿಸ್' ಮಾಡುವುದಿಲ್ಲ. ಈ ಮನೆಯ ಕೋಣೆ ಕೋಣೆಯಲ್ಲಿ ನಿನ್ನ ಇರುವಿತ್ತು, ಜೀವಂತಿಕೆಯಿತ್ತು. ಅದನ್ನು ಬೆಳಗಿನ ಬಿಸಿ ಕಾಫಿಗೆ, ರಾತ್ರಿಯ ರುಚಿ ಅಡುಗೆಗೆ ಹೋಲಿಸಲಾಗದು. ಬಹುಶಃ ಇವೆಲ್ಲವೂ ಈ ಕ್ಷಣ ನನಗೆ ಬೇಕೆಂದರೆ ಸಿಕ್ಕಿ ಬಿಡುತ್ತವೆ, ಆದರೆ ನಿನ್ನ ಇರುವನ್ನು ಹೇಗೆ ತರುವುದು. ಬಂದವಳೇ ಕೋಣೆಯಲ್ಲಿ ಕಂಪ್ಯೂಟರ್ ಮುಂದೆ ಕುಳಿತು 'ಶೂ... ಗಲಾಟೆ ಮಾಡಬೇಡಿ....' ಎಂದು ನಮ್ಮತ್ತ ಒಂದು ಕೂಗು ಎಸೆದು, ಕಛೇರಿಯ ಕೆಲಸದೊಡನೆ ಗುದ್ದಾಡುತ್ತಾ ಕುಳಿತ ದಿನಗಳು ಎಷ್ಟೋ ಇದ್ದವು. ಆದರೂ ಆ ಕೋಣೆಯಲ್ಲಿ ನೀನಿದ್ದ 'ಇರುವು' ಸಾಕಿತ್ತು, ನಿನ್ನ ಬಳಿ ಬಂದು ಕಾಡಿಸುವಲ್ಲಿ ಖುಷಿಯಿತ್ತು. ನೀ ಇಲ್ಲಿದ್ದೆ, ನಮ್ಮ ನಡುವಿದ್ದೆ, ಅದು ಮುಖ್ಯವಿತ್ತು. ನಿನ್ನ ಇರುವಿಕೆಗೆ ತನ್ನದೇ ಶಕ್ತಿಯಿತ್ತು.

* * * * *

ಅದೆಷ್ಟೋ ದಿನಕ್ಕೆ ಕಡೆಗೂ ಕಣ್ಣು ಬಿಟ್ಟೆ. ಆದರೆ ಕಣ್ಣಲ್ಲಿ ನೋಟವಿಲ್ಲ, ತೆರೆದ

ಅಕ್ಷಿಪಟಲಗಳಲ್ಲಿ ನನ್ನ ಬಿಂಬವಿಲ್ಲ, ತೆರೆದ ಬಾಯಲ್ಲಿ ನಿನ್ನ ದನಿಯಿಲ್ಲ, ನನ್ನ ಹುಡುಗಿಯ ಸ್ವರವಿಲ್ಲ. ಉದರದಾಳದಿಂದಲೇ ಹೊರಡುವ ವಿಕಾರದ ನೋವಿನ ಸದ್ದುಗಳು.

ನನ್ನ ಮಾತುಗಳು ನಿನಗೆ ಕೇಳಿಸುವುದೆ, ಈ ಮುಖ, ಈ ಚಹರೆ, ಈ ಸ್ಪರ್ಶ ನಿನಗೆ ನೆನಪಿಲ್ಲವೆ? ಗಂಟೆಗಟ್ಟಲೆ ನಿನ್ನ ಬದಿಯಲ್ಲಿ ಕುಳಿತು ಕೈ ಹಿಡಿದು ಸ್ವಗತವೆಂಬಂತೆ ಮಾತನಾಡುವೆ. ನಿಶ್ಚಲ ದೇಹದಲ್ಲಿ ಪ್ರತಿಕ್ರಿಯೆಯ ಸುಳಿವಿಗಾಗಿ ಕಣ್ಣು ಕಾತರಿಸಿ ಕಾಯುವುದು. ಬಂದ ಬಂದವರೆಲ್ಲ ಮಾತನಾಡಿದರು, ನಿನ್ನ ತೆರೆದ ಕಣ್ಣುಗಳಲ್ಲಿ ತಮ್ಮದೇ ಭಾವಗಳನ್ನು ಓದಿಕೊಂಡರು. 'ಸುಧಕ್ಕ ನನ್ನ ನೋಡಿ ಗುರುತಿಸಿದರು' ಎಂದು ಬೀಗಿದರು, ಭ್ರಮಿಸಿದರು. ಬಂದರು ಬಂದೇ ಬಂದರು, ನನ್ನ ನೋವಿಗೆ ಸಾಂತ್ವನವಾದವರು. ಕುಸಿದ ಕ್ಷಣದಲ್ಲಿ ತೋಳು ನೀಡಿ ಆಸರೆಯಾದವರು. ಜೊತೆಗೆ ಬಂದರು, ಕುತೂಹಲಕ್ಕೆಷ್ಟೋ ಜನರೋ. 'ಸದ್ಯ ನಮಗೆ ಹೀಗಾಗಿಲ್ಲ' ಎಂಬ ಕೆಟ್ಟ ಸಮಾಧಾನದವರೂ.

ಸಮಯ ಸರಿಯಿತು. ಐ.ಸಿ.ಯು.ನ ಹೊರಬೆಂಚಿನ ಮೇಲೇ ನನ್ನ ಹಗಲು

ರಾತ್ರಿಗಳು, ತಿಂಗಳುಗಳಾದವು. ಸಾವು ಖಚಿತವಿದ್ದ ನಿನ್ನ ಸ್ಥಿತಿಯಲ್ಲಿ ನೀ ಬದುಕಿದ್ದೇ ವೈದ್ಯರಿಗೆ ಅಚ್ಚರಿಯಾಗಿತ್ತು. ಮೆಲ್ಲನೆ ನಾಭಿಯಾಳದಿಂದೆಲ್ಲೋ ಪ್ರಯಾಸದಿಂದ ಹೊಮ್ಮುತ್ತಿದ್ದ ನೋವಿನ ವಿಕಾರ ಸ್ವರ ನಿಂತಿತ್ತು. ಆದರೆ ಮೂರು ತಿಂಗಳು ಬರೀ ನಳಿಕೆಗಳಲ್ಲಿ ಸುರಿದ ದ್ರವದ ಮೇಲೆ ಹಸಿ ಇದ್ದ ದೇಹಕ್ಕೆ, ಉಸಿರು ಕೂಡಾ ಭಾರವಾಗಿತ್ತು. ಬಲವಂತವಾಗಿ ತಿನ್ನಿಸಲು ಹೊರಟರೆ ಮಗುವಿನಂತೆ ರಚ್ಚೆ ಹಿಡಿದ ಅಳು. ಏನು ಬೇಕು, ಏನು ಬೇಡ ಏನೊಂದೂ ಹೇಳಿಕೊಳ್ಳಲಾರದ ಸ್ಥಿತಿಯಲ್ಲಿ ನೀನಿದ್ದೆ. ಕನ್ನಡ, ಇಂಗ್ಲಿಷ್ ಇರಲಿ ಜರ್ಮನ್, ಫ್ರೆಂಚ್ ಭಾಷೆಗಳಲ್ಲೂ ಚಟಪಟ ಮಾತನಾಡುತ್ತಿದ್ದ ಹುಡುಗಿ ನೀನು. ನಿನ್ನ ಸಂಸ್ಥೆಗೆ ಫ್ರೆಂಚ್ ಫರ್ಮ್ ಒಂದು ಬಂದಾಗ, ಇಂಗ್ಲಿಷ್ ಬಾರದೆ ಅವರು ತಡವರಿಸುವಾಗ, ಅವರದೇ ಭಾಷೆಯಲ್ಲಿ ನೀನು ಸರಾಗವಾಗಿ ನೀಡಿದ 'ಪ್ರಾಜೆಕ್ಟ್ ಪ್ರೊಪೋಸಲ್ ಪ್ರೆಸೆಂಟೇಷನ್' ದಂಗು ಗೊಳಿಸಿದ್ದು, ಆರು ಕೋಟಿಯ ಪ್ರಾಜೆಕ್ಟ್ ಮತ್ತೆರಡೇ ತಿಂಗಳಿಗೆ ಸ್ಯಾಂಕ್ಷನ್ ಆದದ್ದು ನೀನೇ ಹೇಳಿದ್ದೆ. ಇಂದು ಯಾವ ಭಾಷೆಯೂ ನಿನ್ನ ತುಟಿಯಲಿಲ್ಲ. ಸದ್ದಿಲ್ಲದ ಅಳು, ಖಾಲಿ ನೋಟ ಎರಡೇ ನಿನ್ನ ಅಭಿವ್ಯಕ್ತಿ. ನಿನ್ನ ಅಂತರಾಳದ ನೋವೇನಿತ್ತೋ, ಒಂದೂ ಹೊರಹಾಕಲಾರದ ಮೂಕ ಅಸಹಾಯಕತೆ ಕ್ಷಣದಲ್ಲಿ ಬದುಕು ಬದಲಾಗಿತ್ತು, ಇದ್ದಂತೆ ಇತಿಹಾಸವಾಗಿದ್ದೆ ನೀನು.

ಒಂದು ದಿನದ ರಜೆಗೆ ಪುರುಸೊತ್ತಿಲ್ಲದ ಹುಡುಗಿ, ಮಲಗಿದ್ದೀಯೆ ತಿಂಗಳುಗಟ್ಟಲೆ, ಗಂಟೆ ದಿನ ವಾರಗಳ ಲೆಕ್ಕ ತಪ್ಪಿ. ಹೊರಗೆ ಜಗತ್ತು ನಿಂತಿಲ್ಲ, ಸುತ್ತುತ್ತಿದೆ ನಿನ್ನ ಹೊರತಾಗಿಯೂ. ನಿಂತದ್ದು, ನನ್ನ ಜಗತ್ತು ಮಾತ್ರ. 'ರಿಪು ನನಗೆ ರಜೆ ಹಾಕೋಕಾಗೋಲ್ಲ ಇವತ್ತು ಹೋಗಲೇ ಬೇಕು ಜರ್ಮನಿಯಿಂದ ರೆಪ್ರೆಸೆಂಟೇಟಿವ್ಸ್ ಬರ್ತಾ ಇದ್ದಾರೆ. ಬಹಳ ಮುಖ್ಯವಾದ ಮೀಟಿಂಗ್ ಇದೆ.... ನೀ ಪುಟ್ಟಿ ಶಾಲೆಗೆ ಹೋಗಿ ಬಂದುಬಿಡು.' 'ರಿಪು ಐದು ಕೋಟಿ ರೂಪಾಯಿ ಪ್ರಾಜೆಕ್ಟ್, ನೆಗೋಶಿಯೇಷನ್‌ಗೆ ಸ್ವೀಡನ್‌ಗೆ ಹೋಗಬೇಕು...' ಎಂದು ಕೆಲಸದ ಮೇಲೆ ನೀ ಹಾರುತ್ತಿದ್ದ ಜೆಟ್ ವಿಮಾನದ ವೇಗದಲ್ಲಿಯೇ ನಿನ್ನ ಬದುಕು ಓಡುತ್ತಿತ್ತು. ಇಂದು ಎಲ್ಲವೂ ಸ್ತಬ್ಧ, ತಟಸ್ಥ, ನಿನ್ನ ಕಛೇರಿ, ಪ್ರಾಜೆಕ್ಟ್, ಯಾವುದೂ ನಿಂತಿಲ್ಲ. ಮೊದಲೆರಡು ತಿಂಗಳು ಮನೆ ಮಠ ಬಿಟ್ಟು ಬಂದು ಅಸ್ತವ್ಯಸ್ತವಾದ ನಿನ್ನಮ್ಮ, ತಮ್ಮ ತಂಗಿಯರ ಬದುಕು ಕೂಡಾ ಯಥಾಸ್ಥಿತಿಗೆ ಹಿಂತಿರುಗಿದೆ. ಹಿಂತಿರುಗದ ತಾಣದಲ್ಲಿ ಹಳಿ ತಪ್ಪಿ ನಿಂತವರು ನಾವು ಮಾತ್ರ.

* * * * *

ಮೂರು ತಿಂಗಳ ಸಾವಿನಂಚಿನ ಹೋರಾಟ ಮುಗಿಸಿ ಮನೆಗೆ ಬಂದೆ. ಈ ಮನೆ, ಈ ಹೊಸಿಲು, ಈ ಅಂಗಳ ನಿನ್ನದಲ್ಲವೆಂಬಂತೆ ನಿರ್ಲಿಪ್ತಳಾಗಿ ನಿಂತೆ. ನೀ ನೆಟ್ಟ ಸೂಜಿಮಲ್ಲೆಯ ಬಳ್ಳಿ ಅರಳಿ ನಿಂತಿದೆ, ಸುತ್ತು ಬೇಲಿಯ ತುಂಬಾ ಹರಡಿ ಹೂ ಬಿಟ್ಟಿದೆ. ಯಾವುದೂ ನಿನಗೆ ನೆನಪಿಲ್ಲ. 'ನಾನು ರಿಪು ನಿನ್ನ ಗಂಡ, ಇವಳು ಪುಟ್ಟಿ ನಿನ್ನ ಮಗಳು...' ಬಾಯಿಪಾಠದಂತೆ ಹೇಳಿಕೊಡುವೆ, ಬಿಟ್ಟ ಬಟ್ಟಲುಗಣ್ಣಲ್ಲಿ ಖಾಲಿ ಖಾಲಿ ನೋಟ, ನಿನಗೆ ನೀನಾರೆಂದು ನೆನಪಿರಲಿಲ್ಲ, ನಾನಾರೆಂಬುದಿರಲಿ, ನಿನ್ನ ನಿನ್ನೆಯ ನೆನಪುಗಳೊಡನೆ, ನನ್ನ ನಾಳಿನ ಕನಸುಗಳೂ ಕಳೆದು ಹೋಗಿದ್ದವು.

ಮನುಷ್ಯ ಅಂದರೆ ಅವನ ವ್ಯಕ್ತಿತ್ವ, ಬುದ್ದಿ, ಆಸ್ತಿ, ಅಂತಸ್ತು, ಡಿಗ್ರಿ, ಹುದ್ದೆ ಏನೇನೋ ಅಂದುಕೊಳ್ಳುತ್ತೇವೆ. ಮನುಷ್ಯ ಎಂದರೆ ನೆನಪುಗಳು, ಹಿಡಿ ಹಿಡಿ ನೆನಪುಗಳು, 'ನಾನಾರೆಂಬ ನೆನಪುಗಳು, "ನೀನಾರೆಂಬ' ನೆನಪುಗಳು. ನೆನಪುಗಳಿಲ್ಲದ ಜೀವ ಬರೀ ತೊಗಲ ಚೀಲ, ಮೊದಲ ಬಾರಿಗೆ ಅರಿವಾಗಿತ್ತು.

ಬಚ್ಚಲು ಮನೆಯಲ್ಲಿ ಮೋಟು ಮಣೆಯಿಟ್ಟು ನಿನ್ನ ಕುಳ್ಳರಿಸಿದೆ. ನೀರು ಸುರಿದೆ, ಸೋಪು ಹಚ್ಚಿದೆ. ದೇಹದ ಅಂಗ ಅಂಗಗಳ ಸ್ಪರ್ಶದಲ್ಲಿ ಮನಸ್ಸು ಬಿಸಿಯಾಗಲಿಲ್ಲ. ಪುಟ್ಟಿಗೆ ಸ್ನಾನ ಮಾಡಿಸಿ ಮಲಗಿಸಿದಂತೆ ಹಸಿಯಾದ ಭಾವ. ನಿನ್ನ ದೇಹದಲ್ಲಿ ಕಾಮವಿರಲಿಲ್ಲ. ಸಂಜೆ ಕಛೇರಿಯ ಹೊರೆ ಹೊರೆ ಕೆಲಸ ಹೊತ್ತು ಬಂದು ಕಂಪ್ಯೂಟರ್ ಮುಂದೆ ಕೂಡುವಾಗ, ಬಂದು ಕಾಡುತ್ತಿದ್ದ ಆ ನನ್ನ ಮನಸ್ಸಿನ ಉದ್ರೇಕ, ಉದ್ವಿಗ್ನತೆ ತಣ್ಣಗಾಗಿತ್ತು. ನಿನ್ನ ತುಟಿ ಕದಪು ತುಂಬಿದೆದೆ ನಿತಂಬಗಳಲ್ಲಿ ಕಾಮವಿರಲಿಲ್ಲ. ಅದು ನಿನ್ನಲ್ಲಿತ್ತು, ನಿನ್ನ ಕಿಲಕಿಲ ನಗುವಿನಲ್ಲಿ ಹೊರೆ ಹೊರೆ ಕೆಲಸದ ನಡುವೆಯೂ ಇಣುಕಿದ ತುಂಟಾಟದಲ್ಲಿ ಮತ್ತೆ ನಿನ್ನ ಕಣ್ಣಲ್ಲಿ ಕಾಮನಬಿಲ್ಲು ಕಾಣುವ ಬಯಕೆ.

ಮನೆಗೆ ಬಂದ ಒಂದೇ ತಿಂಗಳಲ್ಲಿ ನಿನ್ನ ದೇಹ ಸುಧಾರಿಸಿತ್ತು. ಎದ್ದೆ, ಕುಳಿತೆ, ನಡೆದೆ. ನಿನ್ನದೆಲ್ಲವನ್ನೂ ಕೀಲಿಕೊಟ್ಟ ಬೊಂಬೆಯಂತೆ ಮಾಡಿಕೊಂಡೆ. ಅದೇ ಮುಖ, ಅದೇ ದೇಹ, ಕೈಕಾಲು, ಉಂಗುಷ್ಟವೂ ಊನವಾಗದೆ ಉಳಿದ ಪರಿಪೂರ್ಣ ದೇಹ. ಆದರೆ ಇಲ್ಲಿ ನೀನಿಲ್ಲ, ಒಳಗೆ ಸದ್ದಿಲ್ಲ, ತಟ್ಟಿದ ಕದಕೆ

ಉತ್ತರವಿಲ್ಲ. ಖಾಲಿ ಖಾಲಿ ಮನೆಯನ್ನು ಬಿಗಿದ ಬೀಗದ ಹಾಗೆ ಬಿಮ್ಮನೆ ಕುಳಿತಿರುವೆ. ನಿನ್ನಿಂದ ನೀ ಹೊರಗೆ ನಿಂತಿರುವೆ.

ನಿನ್ನ ಬದಿ ಕುಳಿತು ಆಲ್ಬಮ್ ತೆಗೆದು ತೋರಿಸಿದ– 'ಸುಧಾ, ನಿನ್ನ ಹೆಸರು ಸುಧಾ. ನಾನು ನಿನ್ನ ಗಂಡ ರಿಪುದಮನ್.... ನಿನ್ನ ರಿಪು...' ದಶಕ ದಶಕಗಳ ಇತಿಹಾಸವನ್ನೆಲ್ಲ ಹರವಿ ನಿನ್ನೆದುರು ಇಟ್ಟೆ. ತನ್ನದಲ್ಲದ ಕತೆಯ ಕೇಳುವಂತೆ ನೀ ಬಿಟ್ಟ ಬಟ್ಟಲುಗಣ್ಣ ಮಿಟುಕಿಸದೆ ಕುಳಿತೆ. ಈ ಕತೆಯ ಪಾತ್ರ ನೀನು, ಈ ಕತೆಯ ನಾಯಕಿ, 'ನೀನು ಸುಧಾ... ನಾನು ರಿಪು... ಇವಳು ನಮ್ಮ ಮಗಳು....' ಕೆಟ್ಟು ಕೊರವ ರೆಕಾರ್ಡಿನಂತೆ ಹೇಳುತ್ತಲೇ ಇರುವೆ. ಆದರೆ ನೆನಪು ಬಾರದು ನಿನಗೆ, ನೀನು ಯಾರೆಂದು, ಸಾವಿನೊಡನೆಯ ಯುದ್ಧದಲ್ಲಿ ಗೆದ್ದು ಬಂದಿರುವೆ. ಬದುಕಿನೊಡನೆಯ ನಿನ್ನ ಕದನ ಈಗ ಆರಂಭ.

* * * * *

ನಾಲ್ಕು ತಿಂಗಳು ಕಳೆದಿತ್ತು. ಒಂದು ಸಂಜೆ ಅಂಗಳದಲ್ಲಿ ಕುರ್ಚಿ ಹಾಕಿ ಕುಳ್ಳರಿಸಿ, ಸಂಜೆ ಗಾಳಿಗೆ ಬೆಚ್ಚಗೆಂದು ಶಾಲು ಹೊದಿಸುವಾಗ ನಿನ್ನ ತುಟಿಗಳು ಅಲುಗಿದವು, ಹಾಲು ಕುಡಿ ಎಂದು ಮತ್ತೆ ಬಲವಂತಿಸುವಾಗ 'ಒಲ್ಲೆ ಒಲ್ಲೆ ಎಂದು ಮುಖ ತಿರುಗಿಸುತ್ತಲೇ ಮೆಲ್ಲನೆ ಏನೋ ಹೇಳಿದಂತಾಯ್ತು. ನಿನ್ನ ಬಾಯಿಗೆ ಕಿವಿ ಇಟ್ಟು ಕೇಳಿದೆ ಅಸ್ಪಷ್ಟ ದನಿ, ಅರ್ಥವಿಲ್ಲದಿದ್ದರೂ ಪದಗಳು ಹೊಮ್ಮಿದ್ದವು. ನನ್ನ ಖುಷಿ ಹೇಳತೀರದು. ಕೆಲವೇ ದಿನ, ದೇಹಕ್ಕೆ ಆಹಾರ ಬಿದ್ದಂತೆ ನೂಕು ಗಾಲಿಯ ಕುರ್ಚಿ ಹಿಡಿದು ಮನೆಯ ತುಂಬಾ ನಡೆದಾಡಿಸಿದೆ. ಹದಿನೈದು ದಿನಕ್ಕೆ ಸೊಂಟಕ್ಕೆ ಕೈಕೊಟದಟೊಡನೆ ಹೊರಗೆ ನಡೆಯತೊಡಗಿದೆ. ಮಾತು ಹೊರಟಿತ್ತು. ಪದಗಳಿಗೆ ವಾಕ್ಯಗಳಿಗೆ ವಾಸ್ತವದಲ್ಲಿ ಅರ್ಥವಿರಲಿಲ್ಲ. ನಾನು ಕೇಳಿದ ಪ್ರಶ್ನೆಗಳಿಗೆ ನಿನ್ನದು ಉತ್ತರವಾಗಿರಲಿಲ್ಲ. ಆದರೆ ನಿನ್ನ ಬಾಯಿಂದ ಹೊರಬಿದ್ದ ಅಸ್ಪಷ್ಟದ ಒಂದೊಂದು ಮಾತಿನಲ್ಲೂ ಬದುಕು ಭರವಸೆಯ ಉನ್ಮಾದ. ನಿನ್ನ ಅರೆಕ್ಷಣದ ಕಣ್ಣ ಮಿಂಚಲ್ಲಿ ನನ್ನ ಕನಸುಗಳು ಜಾಗೃತ.

ನನ್ನ ಪ್ರೀತಿಯ ಹುಡುಗಿ, ನನ್ನೊಡನೆ ದಾಂಪತ್ಯದಲ್ಲಿ ದಶಕ ಕೂಡಿದ ಹುಡುಗಿ, ಐದು ವರ್ಷದ ಪ್ರೇಮಕಥನಕ್ಕೆ ಕತೆಯಾದ ಹುಡುಗಿ, ಸಾವು ಬದುಕಿನೊಡನೆ ಹೋರಾಡಿ ಹೊರಬಂದಿರುವೆ. ತಿಳಿದೋ, ತಿಳಿಯದೆಯೋ

ಅರಿತೋ ಅರಿಯದೆಯೋ ಬದುಕಿನ ಹೊಸಿಲಿನಾಚೆ ಹೆಜ್ಜೆ ಇಟ್ಟವಳನ್ನು ಹಿಡಿದು ಜಗ್ಗಿ ಕರೆತಂದಿರುವೆ. ಮತ್ತೆ ಬಾ ಬದುಕಿಗೆ, ನೆನಪುಗಳ ಬುತ್ತಿ ಬಿಚ್ಚೋಣ ಬಾ. ಮತ್ತೆ ಈ ಅಂಗಳದಲ್ಲಿ ಕುಳಿತು ಸಂಜೆ ಮಲ್ಲಿಗೆಯ ಸವಿಗಂಪಿನಲ್ಲಿ ನಾಳೆಗಳ ಕುರಿತು ಹರಟೋಣ ಬಾ.

ನನ್ನ ದಿನಚರಿ ಪೂರ್ಣ ಬದಲಾಗಿತ್ತು. ನಿನ್ನನ್ನು ಏಳಿಸುವೆ, ಕುಳ್ಳರಿಸುವೆ, ಶೂನ್ಯದತ್ತ ನೆಟ್ಟ ದೃಷ್ಟಿಯನ್ನು ಬಲವಂತಿಸಿ ನನ್ನೆಡೆಗೆ ಸೆಳೆಯುವೆ, ಪುಸ್ತಕದ ಅಕ್ಷರಗಳನ್ನು ತೋರಿಸಿ ಬೆಟ್ಟಿಟ್ಟು 'ಓದು' ಎನ್ನುವೆ. ಪೆನ್ನು ಕೈಗೆ ತುರುಕಿ 'ಬರಿ ಬರಿ' ಗೋಗರೆವೆ. ಯಾವ ಪ್ರತಿಕ್ರಿಯೆ ಇಲ್ಲದೆ ನೀ ಗುಮ್ಮನಂತೆ ಕುಳಿತಿರುವೆ. ಮತ್ತೆ ಯಾವಾಗಲೋ ಯಾವುದೋ ಜನ್ಮದ ಕನವರಿಕೆಯಂತೆ ನಿನ್ನ ಬಾಯಿಂದ ಹೊರಟ ಮಾತುಗಳಲ್ಲಿ, ಹಾಳೆಯ ಮೇಲೆ ಗೀಚಿದ ಗೀಟು ಗೆರೆಗಳಲ್ಲಿ ಆತುರದಿಂದ ಅರ್ಥಗಳನ್ನು ಹುಡುಕುವೆ.

ಸದ್ದಿಲ್ಲದೆ ಕಾಲ ಜಾರುತ್ತದೆ. ಬಂದು ಹೋಗುವ ಜನರ ಗದ್ದಲದಲ್ಲಿ ಹಗಲು ಕಾಡದ ಏಕಾಂಗಿತನ ರಾತ್ರಿ ಕಟಕುತ್ತದೆ. ಕತ್ತಲ ಮೌನದಲ್ಲಿ ಎದೆಯ ಭೀತಿಗಳು ಬುಸುಗುಟ್ಟುತ್ತವೆ. ಅಗಾಧ ಆಶಾವಾದವೂ ಕುಸಿದು, ಎಚ್ಚರವಾಗದ ದುಃಸ್ವಪ್ನದಲ್ಲಿ ಸಿಕ್ಕಿಕೊಂಡಂತೆ ಚಡಪಡಿಸುವೆ. ನಾವು ಉಳಿಸಿಕೊಂಡದ್ದು ಯಾರನ್ನು? ನಿನ್ನನ್ನ, ನೀ ಗೂಡು ಬಿಟ್ಟು ಹಾರಿದ ಅಸ್ಥಿ ಪಂಜರವನ್ನ? ಜೀವ ಇರುವುದೆಲ್ಲ 'ನೀನಲ್ಲ, ನೀನು ದೇಹವಲ್ಲ, ಎದೆಯ ಏರಿಳಿತದ ಉಸಿರಲ್ಲಿ ನೀನಿಲ್ಲ. ಕಣ್ತೆರೆದ ನಿದ್ದೆಗೆಲ್ಲಿ ಎಚ್ಚರ ? ನೀನು ಬಯಸಿದ ಬದುಕು ಇದೇ ಏನು? ಮುಸುಕು ಮುಂಜಾವದಲ್ಲಿ ಮುಸ್ಸಂಜೆ ಕೆಂಪಿನಲ್ಲಿ ರೆಪ್ಪೆಯಪ್ಪಿದ ಇರುಳ ನಿದಿರೆಯಮಲಿನಲ್ಲೂ ಬೇಡವೆಂದರೂ ಬಂದು ಕಾಡುವ ಪ್ರಶ್ನೆ.

ಹೋದ ಜನವರಿ, ನೀನು ಎಂಟು ತಿಂಗಳಿಂದ ದುಡಿದ ಸ್ವೀಡನ್ ಪ್ರಾಜೆಕ್ಟ್ ಮುಗಿದು, ಕಂಪ್ಯೂಟರಿನಲ್ಲಿ ತಿಂಗಳುಗಟ್ಟಲೆ... ನೀನು ಉಣಿಸಿ ತಯಾರಿಸಿದ್ದ ರಿಪೋರ್ಟ್, ಯಾವುದೋ ವೈರಸ್ ಬಡಿದು ಪೂರಾ ಅಳಿಸಿ ಹೋದಾಗ ಕುಸಿದಿದ್ದೆ, ಅತ್ತೆ, ಅದು ಯಾವು ಯಾವುದೋ 'ಕಂಪ್ಯೂಟರ್ ಟೂಲ್ಸ್ ಬಳಸಿ ಎಲ್ಲೆಲ್ಲೋ ಅಡಗಿದ್ದ ತುಂಡು ತುಂಡು ಮಾಹಿತಿಯನ್ನು ಮತ್ತೆ ಹೆಕ್ಕಿ ಪಡೆದು, ಪೇರಿಸಿ ಕೂಡಿಸಿ ಮುಗಿಸಿದ್ದೆ. ಅಂತೂ ಮರುವಾರ ಸ್ವೀಡನ್‌ಗೆ ಹೋಗುವಷ್ಟರಲ್ಲಿ

ಎಲ್ಲ ಸಿದ್ಧವಾಗಿ ನಿಟ್ಟುಸಿರು ಬಿಟ್ಟಿದ್ದೆ. ಒಂದು ಕ್ಷಣದಲ್ಲಿ ವಿಧಿಯ ಕೈ ಅಳಿಸಿದೆ ನಿನ್ನ ದಶಕದಶಕಗಳ ನೆನಪಿನ ಸಂಗ್ರಾಹಕವನ್ನು, ಬದುಕಿನ ಉಗ್ರಾಣವೇ ಚೆಲ್ಲಿ ಖಾಲಿಯಾಗಿದೆ. ಎಲ್ಲವನ್ನೂ ಮತ್ತೆ ಸಂಗ್ರಹಿಸಬಹುದೆ?

"ಏಕೆ ಹೀಗಾಯಿತು, ನಮಗೇ ಏಕೆ ಹೀಗಾಯಿತು ?' ಉತ್ತರವಿಲ್ಲದ ಪ್ರಶ್ನೆಗಳೊಡನೆ ಗುದ್ದಾಡಿದ್ದೇನೆ. ಜಗತ್ತಿನ ದೊಡ್ಡ ದುರಂತ ನನ್ನ ಬಾಳಿನಲ್ಲಿ ಎಂದು ಕುಸಿದ ಕ್ಷಣ, ನನಗೆ ಕಂಡಿತ್ತು ಮತ್ತೊಂದೇ ವಿಶ್ವ. ಈ ಹಾದಿಯ ಪಯಣದಲ್ಲಿ ನಾನು ಒಂಟಿ ಇರಲಿಲ್ಲ. ಅದೆಷ್ಟು ಸಹಯಾತ್ರಿಗಳಿದ್ದರು ಈ ನೋವಿನ ನೆರಳಲ್ಲಿ ಮೂಲೆ ಮನೆಯ ರಂಗಪ್ಪನ ಮಗಳು ಹಿತ್ತಲಿನ ಬದುವಲ್ಲಿ ಜಾರಿ ಬಿದ್ದವಳು, ಎದ್ದಿರಲಿಲ್ಲ ಮೂರು ತಿಂಗಳು. ಒಂದು ವರ್ಷದ ಅಂಚಿಗೆ ಮತ್ತೆ ನಡೆದಳು, ನೋಡು ಎಲ್ಲ ಮೊದಲಿನಂತೆ, ರಾಜು ಚಿಕ್ಕಪ್ಪನ ಮಗ ಲಾರಿ ಗುದ್ದಿ ಬದುಕುಳಿದ. ಎರಡು ವರ್ಷದ ಅಂಚಿಗೆ ಮತ್ತೆ ಕಛೇರಿಗೆ ಹೋಗುವಂತಾದ. ಎಷ್ಟು ಕತೆಗಳಿವೆ. ಇಲ್ಲಿ ಸುತ್ತ ಮುತ್ತ. ನಿನ್ನೆ ಮೊನ್ನೆಯವರೆಗೆ ನನಗೆ ಕಣ್ಣಿದ್ದು ಕಂಡಿರದ, ಕಿವಿಯಿದ್ದು ಕೇಳಿರದ ಎಷ್ಟೊಂದು ಕತೆಗಳು. ನಾವು ನಮ್ಮ ಬದುಕಿನಲ್ಲಿ ಎಷ್ಟು ವ್ಯಸ್ತರಾಗಿದ್ದೆವು. ಹಳಿಯ ಮೇಲೆ ಹೊರಟ ರೈಲಿನಂತೆ ಎಡಬಲ ನೋಡದೆ ಉದ್ದಕ್ಕೆ ಹೊರಟು ಬಿಟ್ಟಿದ್ದೆವು. ಬೆಳಗು ಮಧ್ಯಾಹ್ನ ಸಂಜೆ ರಾತ್ರಿಗಳ ಅದೇ ಬದಲಿಲ್ಲದ ದಿನಚರಿಯಲ್ಲಿ ಕಳೆದು ಹೋಗಿದ್ದೆವು.

ಹುಡುಕಿ ಹೋಗಿ ಎಷ್ಟೆಲ್ಲ ಕತೆಗಳನ್ನು ಕೇಳಿದೆ, ಗಂಟುಕಟ್ಟಿ ಹೊತ್ತು ಮನೆಗೆ ತಂದೆ. ವಾಸಿಯಾಗದೆ, ಮತ್ತೆ ಬಾರದೆ ಸತ್ತು ಮುಗಿದ ಕತೆಗಳ ಮಡಿಕೆ ಬಿಡಿಸದೆಯೇ ಬದಿಗೆ ಸರಿಸಿದೆ. ಇದ್ದು ಗೆದ್ದ ಕತೆಗಳನ್ನು ಆಯ್ದು ಎದೆಗೊತ್ತಿಕೊಂಡೆ. ರಾತ್ರಿಯ ನೀರವ ಕ್ಷಣದಲ್ಲಿ ತಟ್ಟನೆ ಎದ್ದು ಕುಳಿತ ಪುಟ್ಟಿಯೊಡನೆ ಹಂಚಿಕೊಂಡೆ. 'ಅಮ್ಮ ಮತ್ತೆ ಸರಿ ಹೋಗುವುದೇ

ಇಲ್ಲವೆ?' ಅವಳ ಕಣ್ಣ ಪ್ರಶ್ನೆಗಳಿಗೆ ನೂರು ಕತೆಗಳ ಭರವಸೆ ಕೊಟ್ಟೆ. ಸತ್ತವರು ಎದ್ದು ಬಂದಿದ್ದರು, ಮಲಗಿದವರು ಎದ್ದು ನಡೆದಿದ್ದರು. ಪವಾಡವೇನೂ ಇರಲಿಲ್ಲ, ವಿಜ್ಞಾನದ ಸರಹದ್ದಿನಲ್ಲಿ ನಿಂತ ಮನುಷ್ಯನಿಗೂ ತಿಳಿದಿರುವುದು ಎಷ್ಟು ಅಲ್ಪ, ತಿಳಿಯಬೇಕಿರುವುದು ಎಷ್ಟು ಅಗಾಧ ಎಂದು ನೆನಪಿಸಿತ್ತು. ಅಚ್ಚರಿಗಳಿವೆ ಪ್ರಕೃತಿಯಲ್ಲಿ, ಮನುಷ್ಯನ 'ನಾನೆಲ್ಲ ಬಲ್ಲೆನೆಂಬ ಅಹಂಕಾರವನ್ನು ಅಡಗಿಸುವ

ಅದ್ಭುತ ಅಚ್ಚರಿಗಳು. 'ನಿನಗೆ ಗೊತ್ತಿಲ್ಲದ್ದು ಅಖಂಡವಿದೆ' ಎಂದು ಅಣಕಿಸುವುದು. 'ಸಾಧ್ಯತೆ ಸಂಭವನೀಯತೆಯ ಈ ವಿಶ್ವದಲ್ಲಿ ನೀನು ಏನನ್ನೂ ಊಹಿಸಲಾರೆ ಮನುಜ' ಎಂಬ ನೇಗಾಟದ್ದು. ಮಿದುಳೆಂಬ ರಹಸ್ಯದ ಪೆಟ್ಟಿಗೆಯಲ್ಲಿ ಏನೆಲ್ಲ ಅಡಗಿದೆಯೆಂದು ಪೂರ್ಣವಾಗಿ ಯಾರು ಬಲ್ಲರು. ಐನ್‌ಸ್ಟೈನರ ಮಿದುಳು ತೆಗೆದಿಟ್ಟು ಇಂದಿಗೂ ವಿಜ್ಞಾನಿಗಳು ಹುಡುಕುತ್ತಿದ್ದಾರೆ, ಅವರ ಬುದ್ಧಿವಂತಿಕೆ ಎಲ್ಲಿ ಅಡಗಿತ್ತು ಎಂದು. ಯಾರಿಗೆ ಗೊತ್ತು ನಿನ್ನ ಮಿದುಳಿನ ಯಾವ ಮೂಲೆಯಲ್ಲಿ ನೆನಪುಗಳು ಅಡಗಿದೆಯೋ, ಯಾವ ಕ್ಷಣದಲ್ಲಿ ಯಾವ ರೂಪದಲ್ಲಿ ಎದ್ದು ಹೊರಬೀಳುವುವೋ ಕಂಡವರಾರು, ಎಲ್ಲಿ ಹೋದಿರಿ ನೆನಪುಗಳೆ ಮತ್ತೆ ಬನ್ನಿ, ಭೂತ ಭವಿಷ್ಯದ ನಡುವೆ ತೂಗು ಸೇತುವೆ ಕಟ್ಟಬನ್ನಿ. ನೆನಪ ಜೋಲಿಯಲ್ಲೊಮ್ಮೆ ನನ್ನ ಹುಡುಗಿಯ ಜೀಕಿ ಬಿಡಬನ್ನಿ, ಕದಡಿ ಬಗ್ಗಡವಾದ ಬದುಕ ತಿಳಿಗೊಳಿಸಬನ್ನಿ.

* * * * *

ಆರು ತಿಂಗಳು. ನಿನ್ನ ಕೆನ್ನೆಗಳು ತುಂಬಿಕೊಂಡವು. ಬೋಡು ಹೊಡೆದಿದ್ದ ತಲೆಯ ತುಂಬಾ ಜೊಂಪೆ ಕೂದಲು ಚಿಗುರಿತ್ತು. ಮಟ್ಟ ಭಾವದ ಒಡೆದ ದನಿ ಮೆಲ್ಲನೆ ಮೃದುವಾಗಿತ್ತು. ಚೆದುರಿ ಹೋದ ನಿನ್ನ ನೆನಪುಗಳ ಸಂಗ್ರಹಿಸ ಹೊರಟೆ. ಕರೆದೊಯ್ದೆ ನಿನ್ನ ಕಛೇರಿಗೆ, ನಿನ್ನ ದಿನದಿನದ ಪರಿಚಯದ ತಾಣಗಳಿಗೆ, ಕಂಡ ಮುಖಗಳ ಭೆಟ್ಟಿಗೆ.

ವಸಂತದ ಒಂದು ದಿನ, ನಿನ್ನ ತವರಿಗೆ ಕರೆದೊಯ್ದೆ. 'ಇಲ್ಲಿ ನೀನು ಆಡಿದ್ದೆ, ಅಲ್ಲಿ ನೀನು ನಡೆದಿದ್ದೆ, ಇದೋ ನೋಡು ನಿಮ್ಮ ಮನೆ.... ಈ ಜಗುಲಿಯ ಮೇಲೆ ಮಲ್ಲಿಗೆಯ ದಂಡೆ ಕಟ್ಟಿದ್ದೆ. ಅಪ್ಪನ ಶಿವಪೂಜೆಗೆ ತುಂಬೆ ಹೂ ಬಿಡಿಸಿ ಪೋಣಿಸಿದ್ದೆ. ನಾನು ಹೇಳುತ್ತಿದ್ದಂತೆ ನೀನು ಯಾರದೋ ಕತೆಯೆಂಬಂತೆ ಕೇಳಿದೆ. ಇವೆಲ್ಲ ನೀನು ಹೇಳಿದ ಕತೆಗಳು. ಪಂಜಾಬಿನ ನೆಲದ ನನಗೆ ನಿನ್ನ ನೆಲವನ್ನು ಪರಿಚಯಿಸಲೆಂದು ಅದೆಷ್ಟು ಬಾರಿ ಇಲ್ಲಿಗೆ ಕರೆತಂದಿದ್ದೆ. ನನ್ನೊಡನೆ ಪುರುಸೊತ್ತಿನ ನಿನ್ನ ಬಾಲ್ಯವನ್ನು, ಮತ್ತೆಂದೂ ಹಿಂತಿರುಗದ ಬದುಕಿನ ಆ ಹಂತವನ್ನು ಅದೆಷ್ಟು ಬಾರಿ ನೆನೆಸಿಕೊಂಡಿದ್ದೆ. ಇಂದು ಖಾಲಿಯ ನೋಟ. ಈ ಅಂಗಳ, ಈ ನೆಲ, ಹಿತ್ತಿಲ ತುಂಬಾ ಅರಳಿದ ಕಾಕಡ, ಕನಕಾಂಬರ ಯಾವುದೂ ನಿನಗೆ ನೆನಪಿಲ್ಲ. ಯಾರದೋ ಅಂಗಳಕೆ ಅಪರಿಚಿತರು ಬಂದಂತ

ತಟಸ್ಥ ನಿಂತಿರುವೆ. ಕೆಂಡ ಸಂಪಿಗೆ ಕಂಪಿಗೆ ನೆನಪು ಬಾರದು ಹೇಗೆ ? ಈ ಗಲ್ಲಿ, ಈ ಓಣಿ, ಈ ಮನೆಯ ಈ ಜಗುಲಿ, ಮೂಲೆಮೂಲೆಗಳನ್ನು ಹುಡುಕಿ ಬಂದೆ, ತಡಕಿ ನಿಂತ. ಕದದ ಹಿಂದೆ, ಜಂತೆಯ.

ಸಂದಿಯಲ್ಲಿ ಎಲ್ಲಿ ಅಡಗಿವೆ ನಿನ್ನ ನೆನಪುಗಳು ? ಅವ್ವ ಕರೆದಳು, ಜಾಕಾಯಿ ಪೆಟ್ಟಿಗೆಯೊಳಗೆ ಮಡಿಚಿಟ್ಟ ಪೀತಾಂಬರವ ತೆಗೆದಿಟ್ಟಳು. ಮಡಿಕೆ ಮಡಿಕೆಯಲ್ಲಿ ಅಡಗಿದ್ದ ನೆನಪುಗಳ ಹರವಿಟ್ಟಳು, ನಿನ್ನದಲ್ಲವೆಂಬಂತ ಒಲ್ಲೆನೆಂದ. ಹದಿಮೂರರ ಹರೆಯಕ್ಕೆ ಮೈ ನೆರೆದು ಕುಳಿತಾದ ಬಲವಂತವಾಗಿ ಪಟ್ಟ ಪೀತಾಂಬರ ಉಡಿಸಿ ಆರತಿ ಎತ್ತಿದಳೆಂದು ನೀ ಮುನಿದ ಕತೆಯನ್ನು ನೀನೇ ಹೇಳಿದ್ದೆ. ಈ ನೆಲದ ನೂರು ಕತೆಗಳು ನನಗೆ ನೆನಪಿದೆ, ನಿನಗೆ ಮರೆತದ್ದು ಹೇಗೆ? ಇದೋ ನಿನ್ನ ಸೋದರಮಾವ.. ತೂಗು ತೊಟ್ಟಿಲಿನಲ್ಲಿ, ಎಂಟು ವರ್ಷದ ಪೋರ, ಎತ್ತಿ ಆಡಿಸಿದ್ದ, ನೀನೇ ಹೇಳಿದ್ದೆ. ಹೆಸರಿಟ್ಟು ಕೂಗಿದ್ದು, ಹದಿನಾರು ದಾಟಿದ್ದು, ಲಗ್ನ ನಿಶ್ಚಯವಾದದ್ದು, ನೀನು ಒಲ್ಲೆನೆಂದು ಓದಲು ಮೈಸೂರು ಸೇರಿದ್ದು ಎಲ್ಲ ಮರೆತದ್ದು ಹೇಗೆ? ಕನ್ನಡದ ಹುಡುಗಿಯನ್ನು ಕದ್ದು ಕೊಂಡೊಯ್ದನೆಂದು ನಮ್ಮ ಮದುವೆಯ ದಿನ, ನನ್ನ ಮೇಲೆ ಎಗರಿ ಬಿದ್ದವ, ಇಂದು ನೋಡು ನನ್ನ ಕೈತಟ್ಟಿ ಸಮಾಧಾನಿಸುತ್ತಿದ್ದಾನೆ.

* * * * *

ಹಿಂತಿರುಗಿ ಬಂದೆವು ಮನೆಗೆ. ಈಗ ಕರೆದೊಯ್ದೆ, ನನ್ನೂರಿಗೆ ಅಮೃತಸರಕ್ಕೆ. ಅಮ್ಮ ಅಪ್ಪ ನಿನ್ನ ಸ್ಥಿತಿ ನೋಡಿ ಸ್ತಬ್ಧರಾದರು. 'ರಿಪು ಹೀಗಾಯ್ತಲ್ಲೋ ನಿನ್ನ ಬಾಳು' ಅಮ್ಮ ಅಪ್ಪಿ ಅತ್ತಳು. ನೀ ಕೂಡಿಸಿದಲ್ಲಿ ಕುಳಿತೆ, ನಿಲ್ಲಿಸಿದಲ್ಲಿ ನಿಂತೆ. ನಾ ಕೀಲಿ ಕೊಟ್ಟ ಬೊಂಬೆಯಂತೆ ನಡೆದೆ.

ಆದರೆ ನನಗೇಕೋ ಅನಿಸುವುದು, ನೀ ಹೊರಗೆ ಕಂಡಷ್ಟು ಸ್ತಬ್ಧಳಾಗಿಲ್ಲ, ಸುಮ್ಮನಿಲ್ಲ. ನನ್ನ ಹುಡುಗಿ ವಿಧಿಗೆ ಅಂಜಿ ಕೈ ಕುಸಿದು ಕೂಡುವುದನ್ನು ನಾ ಊಹಿಸಲಾರೆ. ನಿನ್ನೊಳಗೆ ನೀ ಗುದ್ದಾಡುತ್ತಿರುವ ಮರೆವು ನೆನಪುಗಳ ನಡುವೆ, ಅರಿವು ಅಜ್ಞಾನದ ನಡುವೆ. ಅಮ್ಮನಿಗೆ ಅಪ್ಪನಿಗೆ ಹಾಗೆನಿಸಲಿಲ್ಲ. ಅವರ ಮಟ್ಟಿಗೆ ರಿಪು, ಅವರ ಮಗ ರಿಪುದಮನ್ ಎಲ್ಲಿಯೋ ಕಳೆದು ಹೋಗಿದ್ದ.

ಇನ್ ಸ್ಟಿಟ್ಯೂಟ್‌ನಲ್ಲಿ ನಮ್ಮ ಭೆಟ್ಟಿಯಾದ ಮೊದಲ ದಿನ ನೀ ಕೇಳಿದ್ದೆ–

'ರಿಪುದಮನ್ ಸಿಂಗ್, ರಿಪುದಮನ್ ಎಂದರೆ ಏನು?' 'ಶತ್ರುಗಳನ್ನು ಸದೆಬಡಿವ ರಣಧೀರ' ಎಂದು ನಾನು ಉತ್ತರಿಸಿದಾಗ ಜೋರು ನಕ್ಕಿದ್ದೆ. 'ನಿಮ್ಮ ಹೆಸರು ಕೇಳೇ ಶತ್ರು ಓಡಿಹೋಗುತ್ತಾನೆ. ಅಷ್ಟು ಮದ್ದು ಗುಂಡಿನ ಗುಡುಗಿದೆ ನಿಮ್ಮ ಹೆಸರಲ್ಲಿ' ಎಂದಿದ್ದೆ. ನಮ್ಮ ಹಿನ್ನೆಲೆಯಲ್ಲಿ ಎಷ್ಟು ಅಂತರವಿತ್ತು. ದಕ್ಷಿಣದ ಒಂದು ತಣ್ಣನೆಯ ಸಣ್ಣ ಊರಿನಲ್ಲಿ ನೀ ಹುಟ್ಟಿದ್ದೆ. ನಾನು ಹತ್ತಿ ಉರಿದ ಪಂಜಾಬಿನ ನೆಲದಿಂದ ಬಂದವನು. ನನ್ನ ತಂದೆ, ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳು ಎಲ್ಲರೂ 'ಆರ್ಮಿ'ಗೆ ಸೇರಿದವರು. 1962ರ ಯುದ್ಧದಲ್ಲಿ ಭಾಗವಹಿಸಿದ ಅಪ್ಪನ ಸೇನೆಯ ಸಾಹಸಗಾಥೆಗಳನ್ನು ಕೇಳುತ್ತಾ ಕಳೆದಿತ್ತು ನನ್ನ ಬಾಲ್ಯ. 'ರಜಪೂತ್ ರೆಜಿಮೆಂಟ್'ನಲ್ಲಿ ಸಿಪಾಯಿಯಾಗಿದ್ದ ಅಪ್ಪ, ಯುದ್ಧದ ಆ ಸಮಯದಲ್ಲಿ ಮೈಲಿ ಮೈಲಿಗಳು ಹಿಮದಲ್ಲಿ ನಡೆದಿದ್ದರು, ಮೂಳೆ ಕೊರೆಯುವ ಚಳಿಯಲ್ಲಿ ಹೋರಾಡಿದ್ದರು. ಸರಹದ್ದಿನ ಯುದ್ಧ ಆರಂಭವಾದಾಗ ಎರಡು ಸಾವಿರ ಯೋಧರಿದ್ದ ರಜಿಮೆಂಟ್ ಅವರದಾಗಿತ್ತು. ಯುದ್ಧದಂಚಿಗೆ ಬದುಕುಳಿದು ಬಂದ ಹನ್ನೊಂದು ಜನರಲ್ಲಿ ಅಪ್ಪ ಒಬ್ಬರಾಗಿದ್ದರು. 'ಫ್ರಾಸ್ಟ್ ಬೈಟ್'ಗೆ ತುತ್ತಾಗಿ ಜಡಗಟ್ಟಿದ ಎಡಗಾಲನ್ನು ಕತ್ತರಿಸಿ ಹಾಕಲಾಗಿತ್ತು. ಅಪ್ಪ ತಮ್ಮ ಮರದ ಕಾಲನ್ನು ಹೆಮ್ಮೆಯಿಂದ ತೋರಿಸುತ್ತಾ ಕತೆ ಹೇಳುತ್ತಿದ್ದರು. ಚಿಕ್ಕಪ್ಪ ಅಜಬೀರ್ ಸಿಂಗ್, 1971ರ ಪಾಕಿಸ್ತಾನದ ಯುದ್ಧದಲ್ಲಿ ಭಾಗವಹಿಸಿದ್ದರು. 'ಜಾಟ್ ರೆಜಿಮೆಂಟ್'ನಲ್ಲಿ ದುಡಿಯುತ್ತಿದ್ದ ಚಿಕ್ಕಪ್ಪ, ಗಾಯಗೊಂಡ ಸಹಯೋಧನನ್ನು ಹೊತ್ತು ಬರುವಾಗ ಶತ್ರುಗಳು ನೆಟ್ಟ "ಲ್ಯಾಂಡಮೈನ್' ಸ್ಫೋಟಿಸಿ ಎಡಗಣ್ಣು ಕಿತ್ತುಕೊಂಡಿತ್ತು. ಅಪ್ಪನಿಗೆ ಹೆಮ್ಮೆಯಿತ್ತು. ತಮ್ಮ ಸಮವಸ್ತ್ರ ತೊಟ್ಟ ಕುಟುಂಬದ ಹಿನ್ನೆಲೆಯಲ್ಲಿ, ಅಪ್ಪ ಬಯಸಿದ್ದರು, ಹಿರಿಯ ಮಗನಾದ ನಾನೂ ಸೇನೆ ಸೇರಬೇಕೆಂದು. ಏಕೋ ಅತ್ತ ಆಸಕ್ತಿಯೇ ಇಲ್ಲದ ನಾನು, ಓದಿದ್ದು ಭೌತಶಾಸ್ತ್ರ, ಹಿಡಿದದ್ದು ಪ್ರಾಧ್ಯಾಪಕ ವೃತ್ತಿ, ಅಪ್ಪನ ಕನಸನ್ನು ನನಸು ಮಾಡುವಂತೆ ತಮ್ಮ ಸತವಿಂದರ್, ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಸೇರಿದ್ದ. ಇಷ್ಟೆಲ್ಲ ವೀರಗಾಥೆಯ ಪಂಜಾಬ್ ತೊರೆದು, ಕನ್ನಡದ ನೆಲದಲ್ಲೆಲ್ಲೋ ಕನ್ನಡದ ಹುಡುಗಿಯ ಕೈ ಹಿಡಿದು ತಣ್ಣಗೆ ನೆಲೆಸಿದ ನನ್ನ ಬಗ್ಗೆ ಒಳಗೆಲ್ಲೋ ಹಬೆಯಾಡಿದ ಅಪ್ಪನ ಅಸಮಾಧಾನವಿತ್ತು.

ಮಧ್ಯಾಹ್ನ ಅಮ್ಮನ ಪಕ್ಕ ಕುಳಿತಂತೆ, ಕೇಳಿದಳು 'ಮುಂದೇನು ಮಾಡ್ತೀಯಾ ರಿಪು ?' 'ಯಾವುದನ್ನು ಏನು ಮಾಡುವುದು?' ಅರ್ಥವಾಗದೆ ಕೇಳಿದೆ. 'ಅಲ್ಲ

ಸುಧಾ ಸ್ಥಿತಿ ಹೀಗಿದೆಯಲ್ಲ...' ಅಮ್ಮ ತಡವರಿಸಿದರು. 'ಇಲ್ಲಮ್ಮ ನೀನು ಆರು ತಿಂಗಳ ಹಿಂದೆ ನೋಡಬೇಕಿತ್ತು. ಈಗ ನೋಡು ಕಣ್ಣಲ್ಲಿ ಎಷ್ಟು ಹೊಳಪಿದೆ. ದಿನದಿನಕ್ಕೆ ಸ್ಥಿತಿ ಸುಧಾರಿಸ್ತಾ ಇದೆ... ಇನ್ನಾರು ತಿಂಗಳು, ಇಲ್ಲ ವರ್ಷ, ನನ್ನ ಸುಧಾ ನನಗೆ ಸಿಗುತ್ತಾಳೆ' ಎಂದೆ. ಅಮ್ಮ ನಿಟ್ಟುಸಿರಿಟ್ಟು 'ಏನೋ ಅಪ್ಪ, ನನಗೇಕೋ ನಿನ್ನದೆಲ್ಲ ವ್ಯರ್ಥ ಶ್ರಮ ಅನಿಸುತ್ತೆ...' ಮುಂದೇನೋ ಹೇಳಬಯಸಿ ಏಕೋ ತಡೆದು ಸುಮ್ಮನಾದಳು. ನಾನು ಮಾತು ಬೆಳೆಸಲು ಹೋಗಲಿಲ್ಲ. ಅಷ್ಟರಲ್ಲಿ ಕೋಣೆಯಿಂದ ಎದ್ದು ನೀ ಹೊರಗೆ ಬಂದಿದ್ದೆ.

"ಬಾ ಸುಧಾ, ಕುಳಿತುಕೋ' ಚಾಪೆ ಹಾಸಿ ಕರೆದೆ. ಸದ್ದಿಲ್ಲದೆ ಬಂದು ಕುಳಿತೆ. ಗ್ಯಾಸ್ ಹಚ್ಚಿ, ಅಮ್ಮ ಬಡಿದು ಹಾಕಿದ ಆಲೂ ಪರೋಠ ನಿನಗೆ ಸೇರದಾಗಿತ್ತು. ಒಲ್ಲೆ ಒಲ್ಲೆನೆಂದೆ. ಬಲವಂತ ಮಾಡಿದಾಗ ಮತ್ತೆ ಮಗುವಿನಂತೆ ಬಾಯ್ದೆರೆದು ಅತ್ತೆ, 'ಸುಧಾ ಅನ್ನ-ರಸಂ ಮಾಡಿ ಕೊಡಲಾ?' ರಮಿಸಿ ಕೇಳಿದಾಗ, ಹುಂಗುಟ್ಟಿದೆ. ಅಡಿಗೆ ಮನೆಗೆ ಹೋಗಿ ಒಂದಿಷ್ಟು ಅನ್ನ ತೊಳೆದಿಟ್ಟು, ರಸಂ ತಯಾರಿಸಲು ತೊಡಗಿದಾಗ ಅಮ್ಮ ಕಲಕಿದಳು. 'ಇದೇನು ಹಣೆಬರಹವೋ ನಿನ್ನದು. ಕತ್ತಿ ಬಂದೂಕ ಹಿಡಿದ ನಮ್ಮ ವಂಶದಲ್ಲಿ ಯಾವ ಗಂಡು ಹುಡುಗರೂ ಸೌಟು ಹಿಡಿದದ್ದಿಲ್ಲ. ಅಮ್ಮ ಗೊಣಗಿದಾಗ ನಾ ಮತ್ತೆ ಮಾತು ಬೆಳೆಸಲಿಲ್ಲ. ನಮ್ಮ ವಂಶದ ಇತಿಹಾಸವನ್ನು ನಾನು ಮರೆಯಲು ಎಲ್ಲಿ ಸಾಧ್ಯವಿತ್ತು. ಎದೆಹಾಲಿನೊಡನೆ ಕುಡಿಸಿ ಬೆಳೆಸಿದ ಕತೆಗಳವು. 1606ರಲ್ಲಿ ಮುಘಲ್ ದೊರೆ ಜಹಂಗೀರ್ ಹಿಂಸಿಸಿ ಕೊಂದು ಹಾಕಿದ್ದ ಗುರು ಅರ್ಜುನರ ಮಗ ಗುರು ಹರಗೋವಿಂದ್, ಕತ್ತಿ ಹಿಡಿದು ಮುಘಲರ ಸರ್ವಾಧಿಕಾರಕ್ಕೆ ಸವಾಲೆಸೆದ ಕತೆಗಳವು. ಆತನ ಸೇನೆಯಲ್ಲಿ ಹೋರಾಡಿ ಹುತಾತ್ಮನಾದವನು ನಮ್ಮ ಪೂರ್ವಜ ತೇಜಿಂದರ್ ಸಿಂಗ್, ದೊಡ್ಡಪ್ಪನ ಮನೆಯ ದೊಡ್ಡ ಟ್ರಂಕಿನಲ್ಲಿ ಈಗಲೂ ಆತ ಬಳಸಿದ್ದೆನ್ನುವ ತುಕ್ಕು ಹಿಡಿದ ಅತಿ ಪುರಾತನ ಕತ್ತಿಯೊಂದಿದೆ. ಆದರೆ ಎಲ್ಲ ಯುದ್ಧಗಳೂ ರಣರಂಗದಲ್ಲಿ ನಡೆಯುವವಲ್ಲ, ಎಲ್ಲ ಕದನಗಳನ್ನು ಕತ್ತಿಯ ಮೊನೆಯಿಂದ, ಬಂದೂಕಿನ ಗುಂಡಿನಿಂದ ಗೆಲ್ಲಲಾಗುವುದಿಲ್ಲ.

ಒಂದು ವಾರ ಇದ್ದದ್ದು ಅಮೃತಸರದಲ್ಲಿ, 'ಸುಧಾ ಇದು ಅಮೃತಸರ, ಪ್ರತಿ ವರ್ಷ ಬೇಸಿಗೆ ರಜೆಗೆ ನಾವು ಬರುವ ತಾಣ' ನಾನು ಹೇಳುತ್ತಿದ್ದಂತೆ ನೀನು ಪಿಳಿ ಪಿಳಿ ಕಣ್ಣು ಬಿಟ್ಟೆ. ಏನೋ ಅಸ್ಪಷ್ಟವಾಗಿ ಅಸಂಬದ್ಧವಾಗಿ ಮಾತು

ಹೊರಟಿತು. ಪ್ರತಿ ಬಾರಿ ನೀನು ಭೆಟ್ಟಿ ಕೊಡುತ್ತಿದ್ದ ಸ್ವರ್ಣ ಮಂದಿರ, ದುರ್ಗ್ಯಾನ ಮಂದಿರ, ಜಲಿಯನವಾಲಾ ಬಾಗ್ ಎಲ್ಲಕ್ಕೂ ಕರೆದೊಯ್ದೆ. ನಿನ್ನ ಕಣ್ಣಲ್ಲಿ ಗುರುತಿಸಿದ ಕಳೆಗೆ ಕಾತರಿಸಿ ನೋಡಿದೆ. ಹುಟ್ಟಿ ಬೆಳೆದ ತವರನ್ನೆ ಮರೆತವಳಿಗೆ, ಆಡಿ ಬೆಳೆದ ತಾಯ್ನಡಿಲೇ ನೆನಪಿಲ್ಲದವಳಿಗೆ, ಅತ್ತೆ ಮನೆಯನ್ನು ನೆನಪಿಸುವುದ್ದೇಗೆ? ಆದರೆ ನನ್ನ ಪ್ರಯತ್ನ ಬಿಡಲೊಲ್ಲೆ, ಯಾರಿಗೆ ಗೊತ್ತು, ಯಾವ ಊರಲ್ಲಿ, ಯಾವ ಗಲ್ಲಿಯ ಮೂಲೆಯಲ್ಲಿ ಅವಿತಿರುವ ನೆನಪುಗಳು ಜಿಗಿದು ನಿನ್ನ ಗಪ್ಪೆಂದು ಹಿಡಿದುಕೊಳ್ಳುವುದೋ ಯಾರು ಬಲ್ಲರು.

ಒಂದು ವಾರದ ಕೊನೆಗೆ ನಾ ಹೊರಟಂತೆ, ಅಪ್ಪ ತಡೆದು ಹೇಳಿದರು 'ಯೋಚಿಸು ರಿಪು, ಅವಳದಂತೂ ವಿಧಿ, ಹಣೆಬರಹ ತಪ್ಪಿಸುವರಾರು. ನಿನ್ನ ಬದುಕು ಹಾಳಾಗಬಾರದು. ಸುಧಾನ ಅವರಮ್ಮನೋ, ಅಣ್ಣನೋ ನೋಡಿಕೊಳ್ತಾರೆ. ಟ್ರೈನ್ ನರ್ಸ್ ಬೇಕಿದ್ದರೆ ಇರಿಸು. ಇಂಥವರಿಗೆಂದೇ ಸಂಸ್ಥೆಗಳೂ ಇವೆ. ಹಣದ ಬಗ್ಗೆ ಯೋಚಿಸಬೇಡ. ನೀನು ಪುಟ್ಟಿ ಇಲ್ಲಿಗೇ ಬಂದು ಬಿಡಿ. ಪುಟ್ಟಿ ಹೇಗೂ ಸೆಂಟ್ರಲ್ ಸ್ಕೂಲಿನಲ್ಲಿದ್ದಾಳೆ...' ಮೆಲ್ಲನೆ ಒಂದು ವಾರದಿಂದ ಹಿಡಿದಿಟ್ಟ ಮಾತುಗಳನ್ನು ಅಪ್ಪ ಹೊರಹಾಕಿದರು. ಒಂದು ಕ್ಷಣ ಗರಬಡಿದಂತೆ ನಿಂತೆ. ಅಷ್ಟೆಲ್ಲ ವೀರವಂಶದ ಅಭಿಮಾನದಲ್ಲಿ ಮೆರೆದ ಅಪ್ಪನ ಬಾಯಲ್ಲಿ ಅಪ್ಪಟ ರಣಹೇಡಿಯ ಮಾತುಗಳನ್ನು ನಿರೀಕ್ಷಿಸಿರಲಿಲ್ಲ. ದೀರ್ಘವಾಗಿ ಉಸಿರೆಳೆದು ಸಾವಧಾನವಾಗಿ ಹೇಳಿದೆ'ಅಪ್ಪ ಈ ರಿಪುದಮನ್ ಸಿಂಗ್ ಧಮನಿಗಳಲ್ಲೂ ತೇಜಿಂದರ್ ಸಿಂಗ್ ರಕ್ತವೇ ಹರಿತಾ ಇದೆ. ಯುದ್ಧದಲ್ಲಿ ಬೆನ್ನು ಕೊಟ್ಟು ಹಿಂತಿರುಗೋಲ್ಲ ಈ ರಿಪು, ಇದು ಬರೀ ಸುಧಾಳ ಕಾಳಗವಲ್ಲ. ಇದು ನಮ್ಮ ಯುದ್ಧ ವಿಧಿಗೆ ಎದುರು ನಿಂತ ನಮ್ಮ ಜೊತೆಯ ಯುದ್ಧ ಅಪ್ಪ, ಹತನಾದ ಜೊತೆಯ ಯೋಧರನ್ನೂ ರಣರಂಗದಲ್ಲಿ ಬಿಟ್ಟು ಬರೋಲ್ಲ, ಜೀವ ಪಣವಿಟ್ಟು ಹೊತ್ತು ತರುತ್ತಾರೆ. ನನ್ನ ಹುಡುಗಿ ಬದುಕಿದ್ದಾಳೆ, ಅವಳನ್ನು ಸಾವಿಗೊಪ್ಪಿಸಿ ನಾ ಸೋತು ಹಿಂತಿರುಗುವುದಿಲ್ಲ.' ಅಪ್ಪ ಮಾತನಾಡಲಿಲ್ಲ. ನಿನ್ನ ಕೈಹಿಡಿದು ನಾ ಹೊರಟು ಬಂದೆ. ಈ ಆರು ತಿಂಗಳಲ್ಲಿ ಎಷ್ಟೊಂದು ಮುಖಗಳನ್ನು, ಮುಖವಾಡಗಳನ್ನು ಕಂಡಿದ್ದೆ!

* * * * *

ರೈಲಿನಲ್ಲಿ ಕುಳಿತಂತ ನೀ ಕೇಳಿದೆ "ಎಲ್ಲಿಗೆ?' 'ಮರಳಿ ಬದುಕಿಗೆ ಸುಧಾ

ಈ ಪಯಣ, ಮರಳಿ ಬದುಕಿಗೆ ನಾನೆಂದೆ. ನಾನು ಮೈಸೂರಿಗೆ' ಎಂದು ಹೇಳಿದನೇನೋ ಎಂಬಷ್ಟು ಸಹಜವಾಗಿ ನೀ 'ಹೂಂ'ಗುಟ್ಟಿ ಮಲಗಿದೆ. ಮಗುವಿನಂತೆ ಸುರುಳಿ ಮಲಗಿದ ನಿನ್ನ ಮೇಲೆ ಮಲ್ಲನೆ ಹೊದಿಕೆ ಹೊದಿಸುತ್ತಾ ಹೇಳಿದೆ 'ಸುಧಾ ನಿನ್ನ ಕದನದಲ್ಲಿ ನಿನ್ನ ಬದಿಗೆ ನಾನಿದ್ದೇನೆ. ನಿನ್ನೊಡನೆ ಜೊತೆ ನಿಂತು ಈ ರಿಪು ಹೋರಾಡುತ್ತಾನೆ. ವಿಚಿತ್ರವೆನಿಸಿದರೂ ಏಕೋ ಎದೆಯ ಭಾರ ಇಳಿದು ನಿರಾಳವಾಯಿತು. ನನ್ನ ಬದುಕಿಗೀಗ ಹೊಸ ಅರ್ಥ, ಹೊಸ ಉದ್ದೇಶ, ಹೊಸ ಧೈಯ ಸಿಕ್ಕಿದಂತೆನಿಸಿತು. ಕಾಲೇಜಿನಲ್ಲಿ ಪಾಠ ಮಾಡಿ ಬಂದು, ಮೆತ್ತನೆಯ ಕುರ್ಚಿಯಲ್ಲಿ ಕುಸಿದು ಟಿ.ವಿ. ನೋಡುತ್ತಾ ಹರವಿಕೊಂಡ ಬದುಕಿಗೊಂದು ನಿರ್ದಿಷ್ಟ ದಿಕ್ಕು ದೊರೆತಿತ್ತು. ನಿನ್ನೆ ಮೊನ್ನೆಯವರೆಗು ನನ್ನ ಅತಿ ದೊಡ್ಡ ದುರಂತವೆನಿಸಿದ್ದು, ಇಂದು ಸವಾಲೆನಿಸಿತ್ತು. ಛಲದಿಂದ ಎದುರಿಸುವ ಉತ್ಸಾಹ ಮೈದುಂಬಿತ್ತು.

ನನ್ನ ಬದುಕು ಪೂರಾ ಈಗ ನಿನ್ನ ಸುತ್ತ ಸುತ್ತಿ ಇಟ್ಟೆ. ನಿನಗೆ ಪನ್ನು ಹಿಡಿದು ಬರೆಸುವೆ. ಕಂಪ್ಯೂಟರ್ ಮುಂದೆ ಕೂಡಿಸಿ ಕೀಲಿ ಒತ್ತಿಸುವೆ. ಕಲಿತದ್ದೆಲ್ಲ ಮರೆತ ಹುಡುಗಿ, ಮರೆತದ್ದೆಲ್ಲ ಮತ್ತೆ ಕಲಿಸುವೆ.

ನನ್ನ ನಿನ್ನ ಪ್ರಯತ್ನ ವ್ಯರ್ಥವಿರಲಿಲ್ಲ. ಎಂಟು ತಿಂಗಳ ಅಂಚಿಗೆ ಎದೆಯ ಕಡಲಲ್ಲಿ ಕಡೆ ಕಡೆದು ಹೊರಬಿದ್ದ ನೆನಪುಗಳಿದ್ದವು. 'ಹೋದ ವರ್ಷ ಅಮ್ಮ ಬಂದಿದ್ದಳಲ್ಲ... ಎನ್ನುವೆ. 'ಹೋದ ವರ್ಷ ಅಲ್ಲ ಸುಧಾ, ನಿನ್ನೆ ಬಂದಿದ್ದರು....' ನಾನು ತಿದ್ದುವೆ. 'ಹಾಂ ನಿನ್ನೆ ವೆಂಕಟೇಶನೂ ಬಂದಿದ್ದನಲ್ಲ...' ಎನ್ನುವೆ. 'ವೆಂಕಟೇಶ ಅಲ್ಲ ಸುಧಾ, ನಿನ್ನ ತಮ್ಮ ಸುರೇಶ..' ನಾ ಹೇಳುವೆ. 'ಹಾಂ.... ಸುರೇಶ.... ಸುರೇಶ...' ನಾ ಹೇಳಿದ ಮಾತುಗಳನ್ನು ನೀ ಮೆಲುಕು ಹಾಕುವೆ. ಮಿದುಳಲ್ಲಿ ಹೆಸರು, ಸಮಯ ಎಲ್ಲ ಕಲಸು ಮೇಲೋಗರವಾದಂತಿತ್ತು. ಆದರೆ ನನಗೆ ಚಿಂತೆಯಿರಲಿಲ್ಲ. ಆ ನೆನಪಿನ ಸಮುದ್ರದಾಳದಿಂದ ಕಡೆಕಡೆದು ಹೊರಬಿದ್ದ ನೆನಪುಗಳಿದ್ದವು, ಭೂತ ವರ್ತಮಾನಕ್ಕೆ ಕೊಂಡಿಯಾದ ನೆನಪುಗಳು. ಅವು ಒಂದೊಂದೇ ಕೂಡಿಕೊಂಡು ಸರಣಿಯಾಗಿ ತಮ್ಮ ತಮ್ಮ ಸ್ಥಾನವನ್ನು ಮೆಲ್ಲಮೆಲ್ಲನೆ ಪಡೆಯುತ್ತಾ, ಚೆದುರಿ ಛಿದ್ರವಾದ ಒಂದು ಚಿತ್ರ, ಮತ್ತೆ ರೂಪು ಪಡೆಯಲಿತ್ತು. ಇನ್ನು ನನಗೆ ಚಿಂತೆ ಇರಲಿಲ್ಲ. ಅಖಂಡ ಆಸೆ ಇರಲಿಲ್ಲ. ಬದುಕಿನ ಅತ್ಯಂತ ನಿಧಾನಗತಿಯಲ್ಲೂ, ಭವಿಷ್ಯದತ್ತ ನೀನಿಟ್ಟ ಒಂದೊಂದು ಹೆಜ್ಜೆಯಲ್ಲಿ ನನಗೆ

ಭರವಸೆ ಇತ್ತು. ನನ್ನ ಹುಡುಗಿ ಮೆಲ್ಲನೆ ಮತ್ತೆ ನನ್ನ ಬದುಕಿನತ್ತ ಹೆಜ್ಜೆ ಹಾಕಿದ ಸ್ಪಷ್ಟ ಗುರುತುಗಳಿತ್ತು.

* * * * *

ಒಂದು ಮುಸ್ಸಂಜೆ ನಾನು ಕಾಲೇಜಿಂದ ಬಂದಾಗ, ಕಿಟಕಿಯ ಬಳಿಯ ಕುರ್ಚಿಯಲ್ಲಿ ಬಗ್ಗಿ ಏನೋ ಬರೆಯುತ್ತಿದ್ದೆ. 'ಏನು ಬರೆದೆ ಸುಧಾ ?" ಮೆಲ್ಲನೆ ಕೇಳಿದೆ. ತಟ್ಟನೆ ಎಕ್ಸರ್‌ಸೈಸ್ ಪುಸ್ತಕ ಮುಚ್ಚಿಟ್ಟು ಗಪ್ಪೆಂದು ಕುಳಿತೆ. 'ಎಲ್ಲಿ ನೋಡಲಾ?' ಕೇಳಿದೆ. 'ಇಲ್ಲ ಸರಿ ಇಲ್ಲ' ಬೆನ್ನ

ಹಿಂದೆ ಪುಸ್ತಕ ಮುಚ್ಚಿಟ್ಟ ನಿನ್ನ ಮುಖದಲ್ಲಿ ಮತ್ತೆ ಮಗುವಿನ ಮುಗ್ಧತೆ ಕಂಡರೂ, ಅಲ್ಲಿ ಎಲ್ಲೋ 'ನಾ ಸರಿ ಬರೆದಿಲ್ಲ' ಎಂಬ ದೊಡ್ಡವರಲ್ಲಿ ಮಾತ್ರ ಕಾಣುವ ಸಂಕೋಚ ಇಣುಕಿತ್ತು. 'ಪರವಾಗಿಲ್ಲ ಕೊಡು ಸುಧಾ' ಎತ್ತಿಕೊಂಡ. 'ಅರೆ, ಅಕ್ಷರ ಮೊದಲಿನಂತೆ ಗುಂಡಾಗ್ತಾ ಇದೆ'. ನಿನ್ನ ಮುಖ ಅರಳಿತು. ಹಾಳೆಗಳನ್ನು ಒಂದೊಂದಾಗಿ ತಿರುಗಿಸಿದೆ. 'ಪಪ್ಪ... ತತ್ತ...'ಗಳಿಂದ ತುಂಬಿದ ಹತ್ತು ಹದಿನೈದು ಹಾಳೆಗಳ ತಿರುವಿದವನು ಗಕ್ಕನೆ ನಿಂತ. ಆ ಬಿಡಿ ಬಿಡಿ ಅಕ್ಷರಗಳ ನಡುವೆ ಒಂದೊಂದೇ ಪದಗಳು, ಅರ್ಥವಿದ್ದ ಪದಗಳು ಮೂಡಿ ಬಂದಿದ್ದವು. 'ನಾನು... ಅಮ್ಮ... ಪುಟ್ಟಿ...' ನೋಡ ನೋಡುತ್ತಾ ಎದೆ ಹೊಡೆದುಕೊಂಡಿತು. ಅರೆ ನೀನು ಪದಗಳನ್ನು ಬರೆದಿದ್ದೀಯ, ಇನ್ನು ವಾಕ್ಯಗಳು ಎಷ್ಟು ದೂರ. ಒಂದೇ ತಿಂಗಳಲ್ಲಿ ನನ್ನ ಹುಡುಗಿ ವರ್ಷವರ್ಷಗಳ ಕಲಿಕೆಯ ಜಿಗಿದು ನಿಂತಿದ್ದಾಳೆ. ನಿಜ ದೂರವಿದೆ, ನಮ್ಮ ನಿಲ್ದಾಣ ಬಲು ದೂರವಿದೆ. ಆದರದು ಅಸಾಧ್ಯವಾಗಿ ಅಸಂಭವವಾಗಿ ಕಾಣುತ್ತಿಲ್ಲ. ತಲುಪುತ್ತೇವೆಂಬ ವಿಶ್ವಾಸವಿದೆ.

'ರಿಪು ದೀಪ ಹಾಕ್ತೀಯ ನಾ ಬರೆಯಬೇಕು...' ಪೆನ್ನು ಹಿಡಿದು ನೀ ಕೇಳಿದೆ. ದೀಪದ ಗುಂಡಿ ಒತ್ತಿ, 'ಕತ್ತಲನ್ನು ಶಪಿಸುವ ಬದಲು ಸಣ್ಣ ಹಣತೆಯನ್ನು ಹಚ್ಚಿಡೋಣ ಅಲ್ಲ?' ಯಾರೋ ಹೇಳಿದ ಮಾತುಗಳನ್ನು ಪುನರುಚ್ಚರಿಸಿದೆ.

# 4. ಮಳೆ

## ಆಶಯ

ವಾತಾವರಣದಲ್ಲಿರುವ ನೀರಾವಿಯು ತಂಪು ಪಡೆದುಕೊಂಡು ಮತ್ತೆ ದ್ರವರೂಪಕ್ಕೆ ಬಂದು ಭೂಮಿಯ ಮೇಲೆ ಬೀಳುವ ಪ್ರಕ್ರಿಯೆಯೇ ಮಳೆ. ವಿಶ್ವದಲ್ಲಿ ಮಳೆಯನ್ನು ಪರಿಗಣಿಸುವ ರೀತಿ ಬೇರೆ ಬೇರೆಯದಾಗಿದೆ. ಸಮಶೀತೋಷ್ಣ ಪ್ರದೇಶವಾದ ಯುರೋಪಿನಲ್ಲಿ ಸಾಂಪ್ರದಾಯಿಕವಾಗಿ ಮಳೆಯನ್ನು ಅನಪೇಕ್ಷಿತ ಮತ್ತು ದುಃಖದ ವಿದ್ಯಮಾನವೆಂಬಂತೆ ಕಾಣುವರು. ಆದರೆ ಆಫ್ರಿಕಾದ ಕೆಲಭಾಗಗಳು ಆಸ್ಟ್ರೇಲಿಯಾ, ಭಾರತ ಮತ್ತು ಮಧ್ಯಪ್ರಾಚ್ಯದ ಬಿಸಿಲು ಹೆಚ್ಚಿರುವ ಹಾಗೂ ಒಣ ಪ್ರದೇಶಗಳಲ್ಲಿ ಮಳೆಯನ್ನು ಆನಂದ ಮತ್ತು ಉಲ್ಲಾಸದಿಂದ ಸ್ವಾಗತಿಸಲಾಗುತ್ತದೆ.

ಮಳೆ ಅಂದರೆ ನಿರೀಕ್ಷೆ, ಸಂಭ್ರಮ, ಆತಂಕ, ಸಮೃದ್ಧಿಯ ಕನಸು, ಹಸಿರು ಹಾಡಿನ ಪಲ್ಲವಿ. ಮಳೆಯ ಆಟದ ಮೋಜು ಮೀನಾಟ, ನೀರು ಹಕ್ಕಿಗಳ ತೇಲು ಮುಳುಗು ಆಟ, ರಮ್ಯ ರಮಣೀಯ ನೋಟ. ಕಮಾನು ಕಾಮನಬಿಲ್ಲು ಬೇಸಾಯದ ಬಾಳಗೀತೆ. ಕವಿ ಎದೆಯಯಲ್ಲಿ ಭಾವಗೀತೆಯ ಹುಟ್ಟು, ಧರೆ ಹಾಸ, ನದಿ ವಿಲಾಸ ಜೀವನದ ಉಲ್ಲಾಸ, ಮಳೆ ಮಣ್ಣು ಸಮ್ಮಿಲನದ ಪರಿಮಳ ಚೇತನ ಗಾನ.

ಮಳೆಯಷ್ಟೇ ಮಳೆ ತರುವ ಮೋಡಗಳು ಕಾವ್ಯ, ಕಥೆ, ಹಾಡು, ಪದ್ಯಗಳ ಹುಟ್ಟಿಗೆ ಕಾರಣ. ಕಾವ್ಯಗಳಲ್ಲಿ ವರ್ಣನೆಗೆ ಪಾತ್ರ ಕಾಳಿದಾಸನ ಮೇಘ ಸಂದೇಶದಲ್ಲಿ ಮೋಡಸುದ್ದಿವಾಹಕ. ಬಿಳಿ ಮೋಡ, ಕರಿ ಮೋಡ, ಹಿರಿ ಮೋಡ, ನಾರು ಮೋಡ, ತುಂಡು ಮೋಡ, ಮಳೆ ಮೋಡ ಬಗೆ ಬಗೆ ಇವೆ.

# ಧಾರವಾಡದಲ್ಲಿ ಮಳೆಗಾಲ

**ಚನ್ನವೀರ ಕಣವಿ**

ಏನಿದೀ ಹನಿಹನಿಯ ತೆನೆತೆನೆ ಸಿವುಡುಗಟ್ಟುತ ಒಗೆವುದು!
ಗುಡ್ಡ ಗುಡ್ಡಕೆ ಗೂಡು ಬಡಿಯುತ ಬೇರೆ ಸುಗ್ಗಿಯ ಬಗೆವುದು
ಸೆಳ ಸೆಳಕು ಬಳೆ ಕೊಯಿದರೂ ಆ ಮೋಡದೊಕ್ಕಲು ತಂಗದು
ಬಾನ ಮೇಟಿಗೆ ಸೋನೆ ತೂರುತ ರಾಶಿ ಮಾಡದೆ ಹಿಂಗದು.

ಏನು ಬೆಳ್ಳಗೆ ಎಷ್ಟು ತೆಳ್ಳಗೆ ಮಳೆಯ ಮಸ್ಲಿನ್ ಪರದೆಯು!
ಒಳಗೆ ಸುಮ್ಮನೆ ಕುಳಿತು ನೋಡುವಳಾರು ಹೇಳಾ ಮುಗುದೆಯು?
ಹೂ ಬಿಸಿಲ ಕರವಸ್ತ್ರದಲಿ ತರತರದ ಹೆಣಿಕೆಯ ನಕ್ಷೆಯು
ದೂರ ಹೋದವರಿಂದು ಬರುವರೆ, ಎಂದು ಬರುವ ನಿರೀಕ್ಷೆಯು?

ನೋಡು ಮೋಡದ ಬಸ್ಸು ಭರ ಭರ ತುಂಬಿಕೊಂಡೇ ಸಾಗಿವೆ
ಯಾವ ಗಿರಿ ಶಿಖರದಲಿ ಜಾತ್ರೆಯೊ, ಏಳುಕೊಳ್ಳಕೆ ಬಾಗಿವೆ.
ದೂರ ದೇಶದ ಯಾತ್ರಿಕರು ತಾ ಬೇರೆ ದೇಶಕ್ಕೆ ಬಂದರು
ಕಂಡ ಗುಡಿ ಗೋಪುರಕೆ ಕೈ ಮುಗಿಯುತ್ತ ಅಲ್ಲಿಯೆ ನಿಂದರು.

ಏನು ಕಳಕೊಂಡಿರುವೆ ಗಾಳಿಯೆ ಏಕೆ ಈ ಪರಿ ಹುಡುಕುವೆ?
ಕಿಡಕಿ ಬಾಗಿಲು ಮುಚ್ಚಿರಲು ಕಿರು ಬಿರುಕಿನಲಿ ಬಿಸುಸುಯ್ಯುವೆ.
ಆ ಹಿಮಾಲಯದಿಂದ ನಿನ್ನನು ಬೀಸಿ ಒಗೆದರೆ ಇಲ್ಲಿಗೆ?
ಸಪ್ತಸಾಗರ ಸುತ್ತಿ ಬಂದೆಯ, ಮತ್ತೆ ಹೋಗುವುದೆಲ್ಲಿಗೆ?

ಮೋಡ ನೂತೇ ನೂಲುವದು ಬಿಳಿ ದಾರ ಧಾರಾಕಾರದಿ
ಗುಡ್ಡ ಮರಡಿಗೆ ಸುತ್ತಿ ಕುಕ್ಕಡಿ ಮಾಡಿ ತುಂಬಿದೆ ಕೊಳ್ಳದಿ.
ಹಳ್ಳ-ಹೊಳೆ ಮಗ್ಗದಲಿ ನೇಯುತ ಹೊರಗೆ ಕಳಿಸಿದೆ ಮಾಲನು
ಗದ್ದೆ ಹೊಲ ತೋಟಕ್ಕೆ ಹೊಚ್ಚಿದ ಕೆಂಪು ಖಾದಿಯ ಶಾಲನು.

ಹಗಲು ಇರುಳು ಕೆಲಸವೇನಿದೆ ಮಳೆಗೆ? – ಬಂದೇ ಬರುವದು,
ನಡುವೆ ಚಕ್ಕನೆ ಹಸುರ ಮಧ್ಯಕೆ ಸೂರ್ಯ ಸರ್ಚ್‌ಲೈಟ್ ಕೆಡವಲು

ಹನುಮನೆದೆಯೊಳು ರಾಮ ಸೀತೆಯರಂತೆ ಕಣ್ಣಿಗೆ ಹೊಳೆವುದು
ಮರು ಚಣವೆ ಆಕಾಶವೆಲ್ಲವು ಹರಿದು ಬಿದ್ದೋಲು ಸುರಿವುದು.

ಕಾರ ಹುಣ್ಣಿಮೆ ಕರಿ ಹರಿದು ಮಣ್ಣೆತ್ತು ನೀರನು ಕುಡಿದವು.
ಬಂತು ಪಂಚಮಿ ಬೋಲಬಗರಿಗೆ, ಹೆಣ್ಣು ತವರಿಗೆ ಮಿಡಿದವು.
'ಅರಳು–ಮರಳಿ'ನ ಕವಿಯು ಕರೆದನು 'ಬಾರೊ ಸಾಧನ ಕೇರಿಗೆ'
ಬಂತು ಶ್ರಾವಣ ಬಳಗದೊಂದಿಗೆ 'ಮಳೆಯು ಎಳೆಯುವ ತೇರಿಗೆ.'

ಗಣಪತಿಯು ಇಲಿಯೇರಿ ಭರ್ಜರಿ ವೇಷದಲ್ಲಿಯೆ ಬಂದನು
ಕರಿಕೆ ಪತ್ರೆಯ ಪೂಜೆ ಸಂದಿತು, ಕಡಬು ಹೋಳಿಗೆ ತಿಂದನು.
ಘಟಸ್ಥಾಪನೆಯಾಯ್ತು; ಮೋಡದ ಕೊಡವು ಬುಡಮೇಲಾಯಿತು.
ಸೀಗೆ ಹುಣ್ಣಿವೆಗಾ ಮಸಾರಿಯು ಹಸುರು ಪುಚ್ಚವ ತೆರೆಯಿತು.

ಗೌರಿ ಹುಣ್ಣಿವೆ ಹಾಲ್ಕುಡಿದು ಬಿಳಿ ಜೋಳ ಧ್ವಜವನ್ನೆತ್ತಿತು.
ಗೋದಿ ಹೊಡೆಗಚ್ಚಿರಲು ಕಡಲೆಯ ಮಡಿಲು ಹೂಮಿಡಿ ತುಂಬಿತು;
ಕುಸುಬೆ ಹೂಗಳ ಜರದ ಪೀತಾಂಬರವ ಹಬ್ಬಕೆ ಉಟ್ಟಿತು
ಮೊದಲೆ ದೀಪಾವಳಿಗೆ ಒಲುಮೆಗೆ ದೀಪ ಬೆಳಗಿಸಿಕೊಂಡಿತು.

ಏನು ಈ ಗಿಡ ಬಳ್ಳಿ ಮರಗಳಿಗೆಲ್ಲ ಎಂತಹ ಜಳಕವು!
ಹಸುರು ಹಚ್ಚನೆ ನಿಮಿರಿ ನಿಂತಿಹ ನೆಲಕೆ ಹರ್ಷದ ಪುಳಕವು,
ಎಲ್ಲಿಯಾದರು ಕಸರು ಕಡ್ಡಿಯ ಹುಡುಕಿ ತೆಗೆಯಿರಿ ನೋಡುವ
ಕೆಸರೂ ಬೇಕಾದಷ್ಟು – ನಡೆಯಿರಿ ನಗರ ಸಭೆಗೇ ತೂರುವ.

ಕೊಡೆ ಹಿಡಿದು ಕಾಯ್‌ಪಲ್ಲೆ ತಂದರೆ ಪ್ಯಾಂಟು ಕೂಡಲೆ
ಪಚಡಿಯು.
ಕಾರು ಹಾಯ್ದರೆ ಬಾಯ್ಗೆ ಸಿಡಿವುದು ಕೆಂಪು ಗೋಧಿಯ
ಕಿಚಡಿಯು.
ಮಳೆಯ ಪಂಜರದಲ್ಲಿ ಸೆರೆಯಾಗಿಹೆವು ಸರ್ಕಸ್ ಹುಲಿಗಳು,
ಅಲ್ಲಿ ಹೊಲ ಗದ್ದೆಯಲಿ ಕೊಪ್ಪೆಯ ಹೊತ್ತು ಗೆಯ್ದರೆ ಕಲಿಗಳು.

ಬೂಟು ಚಪ್ಪಲು ಮಾಡದಲ್ಲಿಯೆ ಬುರುಸುಗಟ್ಟಿವೆ ಥಂಡಿಗೆ

ಕೋಟು ಸ್ವೆಟರಿನ ಮೇಲೆ ಸ್ಕಾರ್ಫನು ಸುತ್ತಿ ಹೊರಟಿರ ದಂಡಿಗೆ?
ಬಿಸಿಲ ಮೋರೆಯ ಕಾಂಬುದಾಯಿತು ಬರಿಯ ಮನಸಿನ ಮಂಡಿಗೆ.
ಜೀವ ಬೇಡಿದೆ ಕಾಫಿ ದೋಸೆಯ ಕರಿದ ಹಪ್ಪಳ ಸಂಡಿಗೆ.

ಒಲೆಯ ಬದಿಯಲಿ ತಲೆಯ ಹುದುಗಿಸಿ ಮಲಗಿಕೊಂಡಿಹ ಬೆಕ್ಕಿಗೆ
ಕನಸಿನಲ್ಲಿಯೂ ಇಲಿಯು ಬಾರದು, ಹಕ್ಕಿ ಗೂಡೊಳು ತೆಪ್ಪಗೆ
ಮೈಯುಡುಗಿ ನಡುಗುತ್ತ ದನಕರು ಮೇದು ಬರುತಿವೆ ಒಟ್ಟಿಗೆ
ಮನೆಯ ಒಳಗೇ ಕುಳಿತು ಕಾತರಿಸಿಹೆನು ಗೆಳೆಯರ ಭೆಟ್ಟಿಗೆ.

ಬಿಸೀ ಚುರುಮರಿ ಕಡಲೆ ಮಾರುವ ಮುದುಕಿ ಬಂದರೆ ಕರೆಯಿರಿ
ಮಕ್ಕಳೊಂದಿಗೆ ಕುಳಿತು, ಕುರುಕುರು ತಿಂದು ಹೊರಜಗ ಮರೆಯಿರಿ.
ಅಷ್ಟು ಮಿಕ್ಕಿ ಬೇಸರಾದರೆ ರೇಡಿಯೋ ಕಿವಿ ತಿರುವಿರಿ.
ರಾತ್ರಿಯಾಗಲು ಊಟ ತೀರಿಸಿ ಜೊತೆಗೆ ಬೆಚ್ಚಗೆ ಮಲಗಿರಿ.

# ಮಳೆ ಬಂದರೆ

**–ಭುವನೇಶ್ವರಿ ಹೆಗಡೆ**

ಬೇಸಿಗೆಯಿಡೀ ಬೆವರು ಸುರಿಯುವ ಮಂಗಳೂರಲ್ಲಿ ಈ ವರ್ಷ ಸುರಿದ ಧಾರಾಕಾರ ಮಳೆಯನ್ನು ನಾನಂತೂ ತ್ರಿಕರಣಪೂರ್ವಕವಾಗಿ ಅನುಭವಿಸಿ ಆನಂದಿಸಿದ್ದೇನೆ. ಬಾನಿನ ತುಂಬ ದಟ್ಟೈಸಿ, ಭೂಮಿಯನ್ನೆಲ್ಲ ಆವರಿಸಿಬಿಡುವಂತೆ ಕವಿಯುವ ಕರಾವಳಿಯ ಘನನೀಳ ಮೋಡಗಳನ್ನು ಮೊಗವತ್ತಿ ಆರಾಧನೆಯ ಭಾವದಲ್ಲಿ ಈಕ್ಷಿಸಿ ಸಂತೋಷಿಸಿದ್ದೇನೆ. ಜೊಯ್ಯೋ ಎಂದು ಸ್ವರವೆಬ್ಬಿಸಿ ಸುರಿಯುವ ಮಳೆಗೆ ಮೈಮನಗಳೆರಡೂ ಒದ್ದೆಯಾದಾಗ ಪುಳಕಿತವಾಗಿ ವರುಣ ರಾಜನ ಧಾರಾಳ ಧಾರಾಕಾರಕ್ಕೆ ಆತ್ಮೀಯತೆಯಿಂದ ಸ್ಪಂದಿಸಿ ಗುನುಗಿದ್ದೇನೆ.

ನಿಜ, ಈ ವರ್ಷ ಜೂನ್ ತಿಂಗಳು ಬಂದು ಕಾಲೇಜು ಪ್ರಾರಂಭವಾಗಿ ತರಗತಿಗಳು ತೆರೆದದ್ದೇ ಮಳೆಗಾಲ ಮೊದಲಿಟ್ಟಾಗ, ನಾವು ವಿದ್ಯಾರ್ಥಿಗಳಿಗೆ ಸಿಲೇಬಸ್ ಬರೆಸಿದ್ದೇ ಧೋ ಎಂಬ ಮಳೆಯ ಹಿಮ್ಮೇಳದಲ್ಲಿ. ಹೊಸದಾಗಿ ಕಾಲೇಜು ಸೇರಿದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸುರಿಯುವ ಮಳೆಯಿಂದ ಒದ್ದೆಯಾಗಿ, ಸಂಕೋಚಮುದ್ದೆಗಳಾಗಿ ಬೆಂಚುಗಳಿಗಂಟಿ ಕುಳಿತ ಕ್ಲಾಸುಗಳಿಗೆ ಹೋಗಿ ಅವರವರ ಹೆಸರು, ಶಾಲೆಗಳನ್ನು । ವಿಚಾರಿಸಿ ಪರಿಚಯಿಸಿಕೊಂಡಿದ್ದೂ ಮೋಡ ಕವಿದ ನಸುಗತ್ತಲಿನ ಆತ್ಮೀಯ ವಾತಾವರಣದಲ್ಲೇ.

ಮಳೆ ಬಂದರೂ ಹೊಳೆ ಏರಿದರೂ ಮೈಯೆಲ್ಲ ತೊಯ್ದು ತೊಪ್ಪಟೆಯಾದರೂ ಪ್ಲಾಸ್ಟಿಕ್ ಚೀಲದಲ್ಲಿಯ ಪುಸ್ತಕ ಹಿಡಿದು ಕೊಡೆ ಹಿಡಿದು ತರಗತಿಗಳಲ್ಲಿ ಬಂದು ಕೂಡುವ ವಿದ್ಯಾರ್ಥಿಗಳ ಜೀವನೋಲ್ಲಾಸದ ಎದುರು ಅಧ್ಯಾಪಕ ವರ್ಗ ಮಳೆಗೆ ಮುದುರಿ ಕೂತರೆ ಆದೀತೆ? ಕೊಡೆಯೊಂದಿಗೆ ಕ್ಲಾಸಿಗೆ ನುಗ್ಗುತ್ತೇವೆ. ಕೊಡೆಯಿಲ್ಲದೇ ಕ್ಲಾಸಿಗೆ ಹೋದ 'ಸರ್' ಇರಲಿ "ಮೇಡಂ' ಇರಲಿ ಕೊಡೆ ಹಿಡಿದು ಸ್ಟಾಫ್ ರೂಮಿನ ತನಕ ವಿದ್ಯಾರ್ಥಿಗಳು ತಂದು ಬಿಡುತ್ತಾರೆ. ಅಂದ ಹಾಗೆ ಈ ಬಗೆಯ ಸಂವೇದನ ಶೀಲ ಸಂಬಂಧಗಳನ್ನು ಮಿದುವಾಗಿಸುವ, ಎದೆಯೊಳಗಿನ ನೋವನ್ನೆಲ್ಲ ಕೊಚ್ಚಿಕೊಂಡು ಹೋಗುವ ಶಕ್ತಿ ಮಳಗಿದೆ ಎಂದೇ ನನಗೆ ಅನೇಕ ಸಲ ಅನ್ನಿಸಿದೆ.

ರಾತ್ರಿಯಿಡೀ ಸುರಿದ ಮಳೆ ಜೋಗುಳವನ್ನು ಒದಗಿಸಿದ ಕರೆಂಟಿಲ್ಲದ,

ಫ್ಯಾನಿಲ್ಲದ ರಾತ್ರಿಗಳನ್ನೂ ತಂಪಾಗಿಸಿದ ಮಳೆ ಬೆಳಗಾಗುವಷ್ಟರಲ್ಲಿ ಹೊಸ ಉತ್ಸಾಹದಿಂದ ಸುರಿಯ ತೊಡಗಿದಾಗ ಎಲ್ಲ ನರಮನುಷ್ಯರೂ ಸಂಭ್ರಮ ಪಡಬೇಕೆಂದೇನೂ ಇಲ್ಲವಲ್ಲ. ಗೊಣಗುವವರು ಇದ್ದೇ ಇರುತ್ತಾರೆ. ಒಳ್ಳೊಳ್ಳೆ ಸೀರೆಗಳನ್ನೆಲ್ಲಾ ಸೂಟಕೇಸಿನಲ್ಲಿಟ್ಟು ಸಾಕಾಯ್ತು. ಮಳೆಗಾಲದ ಸೀರೆ ಅಂತ ಇದ್ದ ಒಂದೆರಡು ಅಜ್ಜಿ ಸೀರೆ ಉಟ್ಟು ಉಟ್ಟು ಬೇಜಾರು ಬಂತ್ರೀ... ಎಂಬುದು ಬ್ಯಾಂಕಿನ ಹುಡುಗಿಯರ ಗೊಣಗಾಟವಾದರೆ, ಸ್ಟೈಲಾಗಿ ಬೆನ್ನಿಗೆ ಬ್ಯಾಗೇರಿಸಿ ಓಡಾಡುವ ಹುಡುಗರಿಗೆ "ಇದೊಂದು ಮಳೆ ಮಾರಾಯಾ ದಿನಾ ಯಾರು ಕೊಡೆ ಹಿಡ್ಕೊಂಡು ಓಡಾಡ್ತಾರೆ?" ಎಂಬ ಗೊಣಗಾಟ, ಗೊಣಗುವುದು ಮನುಷ್ಯನ ಹಣೆಬರಹ ತಾನೆ? ಅದಕ್ಕೆ ಕಿವಿಗೊಡದೆ ಸಲದ 'ಮಳೆರಾಯ' ಸುರಿದೇ ಸುರಿದಿದ್ದಾನೆ. 'ಇಳೆರಾಯ್ತಿ' ಮಿಂದೇ ಮಿಂದಿದ್ದಾಳೆ.

ಬಸ್ಸಿನಲ್ಲಿ ತೊಯ್ದು ತೊಪ್ಪಟೆಯಾದ ಹೆಣ್ಗಂಡುಗಳು, ರಾಕ್ಷಸ ವಾಹನಗಳು ರಾಚಿ ಹೋದ ರಸ್ತೆ ನೀರನ್ನು ಅಭಿಷೇಕ ಮಾಡಿಸಿಕೊಂಡ ಪಾದಚಾರಿಗಳು... ಯಾರನ್ನೇ ನೋಡಿ ಒದ್ದೊದ್ದೆ ಮಡ್ಡಿ, ('ಚಂಡಿ' ಎಂಬುದು ದಕ್ಷಿಣ ಕನ್ನಡಿಗರ ಒದ್ದೆ) ಆದರೆ ರೈನ್ ಕೋಟಿನೊಳಗೆ ಅವಿತಿಟ್ಟುಕೊಂಡು ಕಣ್ಣು ಪಿಳುಕಿಸುವ 'ಕಾನ್ವೆಂಟ್ ಜೋಕ್ಲು'ಗಳ ಲೋಕವೇ ಬೇರೆ. ಮಳೆಯ ಕುರಿತಾಗಿ ಅವರ ಅಪ್ಪ ಅಮ್ಮರಿಗೆ ಇರುವ ಹೆದರಿಕೆ ಅವಕ್ಕೇನೂ ಇಲ್ಲ. ಕೊಡೆಯ ಮೇಲೆ ಬೀಳುವ ಮಳೆ ಹನಿಯ ಸಪ್ಪಳವನ್ನು ಕೇಳಿ ಖುಷಿಪಡುವ ಕೆಲವು ಮಕ್ಕಳು ಹಂಚಿನ ಅಂಚಿಗೆ ಸುರಿಯುವ ಧಬ ಧಬೆಗೆ ಕೊಡೆ ಹಿಡಿದು ಕುಣಿಯುವುದೂ ಉಂಟು. ಇಂಥ ಒಂದು ಬಿರುಮಳೆಯ ಸಂಜೆ ನಾನು ಕಾಫಿ ಹೀರುತ್ತಾ ಕುಳಿತಾಗ ಪಕ್ಕದ ಮನೆಯ ಕಾನ್ವೆಂಟ್ ಬಾಲೆ ಬಂದು "ಆಂಟಿ ನಾನೊಂದು ಹಾಡು ಬರ್ದಿದೀನಿ ನೋಡಿ" ಎಂದಿತು, ನೋಡಿದೆ.

Rain rain come again
Forget about little John;
Let him play some other day
We will get a holiday.

ವಾರೆವ್ಹಾ ಮಳೆಯ ಪ್ರಭಾವವೇ! ಶಿಶುಗಳೂ ಕವಿಗಳಾಗಿದ್ದಾರೆ ಅಂದ್ಕೊಂಡೆ. ಕ್ಲಾಸಿನಲ್ಲಿ ಕಲಿಸಿದ "Rain rain go away" ಎಂಬ ಹಾಡನ್ನು ಈ ಹುಡುಗಿ

ತಮಗೆ ಸಿಗುವ ಖಚಿಟಿ ಿಡಿಟಿಜಚಿಥಿಯ ಆಸೆಯಲ್ಲಿ ರೂಪಾಂತರಿಸಿ ಸ್ವಂತ ಹಾಡು ರಚಿಸಿತ್ತು. ಫಸ್ಟ್ ಕ್ಲಾಸಾಗಿದೆ ಹಾಡು ಎಂದು ಜೋರಾಗಿ ಈ ಹಾಡನ್ನು ನಾನೂ ಅದರೊಟ್ಟಿಗೆ ಹಾಡಿದ ಮೇಲೆ ಕಾನ್ವೆಂಟ್ ಮಗು ತನ್ನ ಮನೆಗೆ ಹೋಯಿತು.

ಆದರೆ ಮಕ್ಕಳಿಗಿರುವ ಈ ಉತ್ಸಾಹ ದೊಡ್ಡವರಿಗೂ ಅಕಸ್ಮಾತ್ ಇದ್ದಿದ್ದರೆ ಹೀಗಿರುತ್ತಿತ್ತೆ? 'ಜಾಡ್ಯ'ಗಳೇ ಕಡಿಮೆಯಾಗಿ ಅನೇಕ ಡಾಕ್ಟರುಗಳು ಬಾಗಿಲು ಹಾಕಬೇಕಾಗುತ್ತಿತ್ತು. ಉದಾಹರಣೆಗೆ ನಮ್ಮ ಎದುರು ಮನೆಯ ವನಿತೆ. ಮಧ್ಯಾಹ್ನ ನಾಲ್ಕು ಗಂಟೆಗೆ ಒಂದು ಭಯಂಕರ ಆಕಳಿಕೆ ಅವರ ಮನೆಯ ಕಡೆಯಿಂದ ಕೇಳಿ ಬರುತ್ತದೆ. ಆಗ ಪ್ರಾಣಿ ಎದ್ದಿದೆ ಅಂತ ಗೊತ್ತಾಗುತ್ತದೆ. ಅನಂತರ ರಾತ್ರಿ ಮತ್ತೆ ಮಲಗುವ ತನಕ ಬೇಜಾರು ಮಾರಾಯ್ತಿ ಎಂಬ ಹಾಡು. ಮಳೆ ಹೆಚ್ಚಾದಂತೆ ಈ ಹಾಡು ಜೋರು. "ಎಂಥಾ ಮಳೇರೀ ಬೋರಾಗಿ ಹೋಯ್ತು' ಎಂಬ ಸೊಲ್ಲನ್ನು ಕೇಳಿ ಕೇಳಿ ನಾನು ಒಂದು ದಿನ ಸಲಹೆ ಕೊಟ್ಟೆ. 'ಬೇಜಾರು ಅಂತ ಮನೆ ಒಳಗೆ ಕೂತರೆ ಆಗುತ್ತೇನ್ರಿ, ಸೀದಾ ಎದ್ದು ಮಳೆಯಲ್ಲಿ ಪಚಪಚ ನೀರು ಸಿಡಿಸುತ್ತ ಒಂದು ರೌಂಡು ಹೋಗಿ ಬಂದು ಒದ್ದೆ ಮೈಯಲ್ಲಿ ಬಿಸಿ ಕಾಫಿ ಕುಡಿಯಿರಿ. ಸುರಿಯುವ ಮಳೆಗೆ ಮೈಯೊಡ್ಡಿದರೆ ವರ್ಷಾಂತರ ಗಳಿಂದ ಬಂದಿರೋ ಬೇಜಾರು ಸಹ ಹೋಗಿಬಿಟ್ಟು ಫ್ರೆಶ್ ಆಗಿಬಿಡುತ್ತೀರಿ" ಎಂದು ತಣ್ಣಗೆ ನಾನು ಹೇಳಿದಾಗ ಒಂಥರಾ ಹುಚ್ಚರನ್ನು ನೋಡುವ ಹಾಗೆ ನನ್ನತ್ತ ನೋಡಿ ಹೊರಟು ಹೋದರು.

ಇನ್ನೊಂದು ದಿನ ಕಾಲೇಜಿನಿಂದ ಬರುವಾಗ ಮನೆ ಹತ್ತಿರವಾಗುತ್ತಿದ್ದಂತೇ ಮಳೆ ಜೋರಾಗಿತ್ತು. ಹಿಂದೂ ಮುಂದೂ ಯಾರೂ ಇಲ್ಲವೆಂಬ ಧೈರ್ಯದಲ್ಲಿ ನನ್ನ ದೈವದತ್ತ ಸ್ವರದಲ್ಲಿ 'ಜಿಂದಗೀ ಭರ್ ನಹೀ ಭೂಲೇಂಗೆ ಓ ಬರಸಾತ್ ಕೀ ರಾತ್...' ಎಂದು – ಹಾಡುತ್ತಾ ರಫಿಗೆ ಅಪಚಾರವಾದರೂ ಚಿಂತಿಲ್ಲವೆಂದು ಮಳೆಯ ರಾಗಕ್ಕೆ ನನ್ನ ರಾಗ ಸೇರಿಸಿಕೊಂಡು ಹೆಚ್ಚು ಕಡಿಮೆ ತೇಲುತ್ತಲೇ ಬರುತ್ತಿದ್ದೆ. ಎದುರು ಮನೆಯಿಂದ ಆಕಳಿಕೆ ಸದ್ದೂ ಕೇಳಲಾರದಷ್ಟು ನನ್ನ ಕುರಿತು ಅನುಮಾನವೆದ್ದಿತು ಎಂಬುದು ಅವರು ನನ್ನತ್ತ ಬೀರಿದ ಕರುಣಾಪೂರ್ಣ ನೋಟದಿಂದಲೇ ತಿಳಿಯಿತು. ಏನು ಮಾಡುವುದು? ಜಗತ್ತಿನ ಅನುಕಂಪಕ್ಕೆ ಹೆದರಿ ಯಾವಾಗಲೂ ನೆಟ್ಟಗೆ ಇದ್ದರೆ ಸೊಟ್ಟಗಿರುವ ಸುಖ ಎಂಬುದು ಒಂದಿದೆ ಎಂದು ತಿಳಿಯಬೇಕಾದರೂ ಹೇಗೆ? ಸೊಟ್ಟದಾಗಿ ಹಾಡುತ್ತಲೇ ಒಳಹೊಕ್ಕೆ ನಾನು.

ಹಾಗೆ ಸುರಿಯುವ ಮಳೆಯಲ್ಲಿ ನೆನೆಸಿಕೊಂಡು ಹಾಡುತ್ತ ಬಂದು ಒಳಸೇರಿ ಬೆಚ್ಚಗೆ ಬಟ್ಟೆ ಬದಲಾಯಿಸಿ ಮಾರುದ್ದ ಲೋಟ ತುಂಬ ನೊರೆಕಾಫಿ ತುಂಬಿ ಸೊರ್ರೆನಿ ಸುತ್ತಾ ಕುಳಿತೆನೆಂದರೆ ಮಳೆಯಲ್ಲಿ ಅದು ಬ್ರಹ್ಮರಂಧ್ರಕ್ಕೆ ಏರಿದಂತೆಲ್ಲಾ ತೀರಾ ಗದ್ಯಗಂಧಿ ಯಾದ ನನಗೂ ಒಂದು ಬಗೆಯ ದಿಢೀರ್ 'ಆಂಗ್ಲಾಶುಕವಿತ್ವ' ಜಾಗೃತವಾಗಿ ಬಿಡುತ್ತದೆ.

Ah! Coffee
I am. Because
Thou are

ಎಂದು ಮೊದಲಾದ ಕವನವೆಂದುಕೊಂಡ ಸಾಲುಗಳನ್ನು ಬರೆದೇ ಬಿಡುತ್ತೇನೆ. ಹೊರಗೆ ಕತ್ತಲೆ ಕವಿದಿದ್ದರಂತೂ ಒಳಗೆ ಕೃತ್ರಿಮ ಕತ್ತಲು, ಟೇಬಲ್‌ಲ್ಯಾಂಪ್ ಉರಿಸಿ ಚಂದಮಾಮ ಓದಿದರೂ ಒಂದು ಬಗೆಯ ದಿವ್ಯಾನುಭೂತಿ!

ಈ ಬಗೆಯ ದಿವ್ಯಾನುಭೂತಿಯಲ್ಲಿ ಮುಳುಗಿದ್ದೆ ಒಂದು ದಿನ, ನರಪಿಳ್ಳೆಯ ಸ್ವರವೊಂದು ಕರೆಯುತ್ತಿದೆ. ನನಗೋ ನನ್ನ ಟೇಬಲ್ ಪಕ್ಕ ಒಂದು ಡ್ರಮ್ ನೊರೆಕಾಫಿ ಇದ್ದಂತೆ. ಅದಕ್ಕೆ ಎರಡು ಪೈಪುಗಳು ಜೋಡಿಸಲ್ಪಟ್ಟಿವೆ. ಒಂದು ಸೀದಾ ನನ್ನ ಕುರ್ಚಿಗೆ, ಇನ್ನೊಂದು ಬೆಡ್ ಮೇಲ್ಗಡೆ. ಇನ್ನು ಮೇಲೆ ಇಡೀ ವರ್ಷ ಮಳೆಗಾಲ ಎಂದು ವ್ಯವಸ್ಥೆ ಯಾದ್ದರಿಂದ ಒಂದು ವರ್ಷ ಪೂರ್ತಿ ಕಾಲೇಜಿಗೆ 'ರೈನ್ ಹಾಲಿಡೇ' ಘೋಷಿಸಿದ್ದಾರೆ...

ಹೀಗೆ ಒಂದಲ್ಲ ಎರಡಲ್ಲ ಸಾಲು ಸಾಲಾಗಿ ಬರುತ್ತಿರುವ ಹಗಲು (ಗತ್ತಲಿನ) ಕನಸುಗಳಲ್ಲಿ ನಾನು ಹೂತು ಹೋಗಿದ್ದ. ಹೊರಗಿನಿಂದ ಕರೆಯುತ್ತಿರುವ ನರಪಿಳ್ಳೆಯ ಸ್ವರ ಏಕೋ ಅಪಶಕುನದ ಸ್ವರದಂತ ಕೇಳಿಸಿತು. ಬಾಗಿಲು ತೆಗೆದರೆ ಪಿಳ್ಳೆಯೊಂದು ಕೊಡೆ ಹಿಡಿದೇ ನಿಂತು "ಹಸಿ ಮೆಣಸಿನಕಾಯಿ ಇದ್ರೆ ಕೊಡೇಕಂತೆ; ಮಾರ್ಕೆಟಿಗೆ ಹೋಗಲು ಅಮ್ಮನಿಗೆ ಬೇಜಾರಂತೆ" ಎಂದಿತು,

ಆ ಪಿಳ್ಳೆ ಮಗುವೇನಾದರೂ ಆಗಿರದಿದ್ದರೆ ಅದರ ಕುತ್ತಿಗೆ ಹಿಚುಕಿ ಬಿಡುತ್ತಿದ್ದೆ. ಅವರಮ್ಮನ ಕುತ್ತಿಗೆ ಹಿಚುಕುವುದೇ ಸೂಕ್ತವೆಂದು ತೋರಿದ್ದರಿಂದ... "ಹಸಿಮೆಣಸು ಅಂದ್ರ ಏನೆಂದೇ ಅವರಿಗೆ ಗೊತ್ತಿಲ್ಲವಂತೆ. ಅಂಥದ್ದಲ್ಲ ಹುಡುಕುವ ಮನಸ್ಥಿತಿಯಲ್ಲಿ ಅವರಿಲ್ಲವಂತೆ" ಎಂದು ಹೇಳು ಹೋಗು ಎಂದು ದಬ್ಬಿ ಬಾಗಿಲು ಹಾಕಿಕೊಂಡೆ.

ಆ ಮಗು ಹೋಗಿ ಅದರಮ್ಮನ ಬಳಿ "ಅವರಿಗೆ ಹಸಿಮೆಣಸು ಅಂದ್ರೆ ಏನೆಂದೇ ಗೊತ್ತಿಲ್ಲವಂತ" ಎಂದು ಹೇಳಿದಾಗ ಮೊದಲೇ ಒಂದೆರಡು ಪ್ರಕರಣಗಳಲ್ಲಿ ನನ್ನ ತಲೆಯ ಸೊಟ್ಟದ ಕುರಿತು ಅನುಮಾನವೆದ್ದಿದ್ದ ಆಕೆಗೆ ಈಗಂತೂ ಪ್ರಮಾಣಪೂರ್ಣ ಆಧಾರವೇ ದೊರಕಿದಂತಾಯ್ತಿರಬೇಕು. ಮರುದಿನದಿಂದ ಆಕೆ ನನ್ನತ್ತ ಬೀರುತ್ತಿದ್ದ ಕರುಣಾಪೂರ್ಣ ನೋಟದಲ್ಲಿ ಕರುಣೆಯ ಸಾಂದ್ರತೆ ಮತ್ತೂ ಹೆಚ್ಚಾದಂತೆನ್ನಿಸಿತು.

ಯಾರು ನೆಟ್ಟಗಿರಲಿ ಸೊಟ್ಟಗಿರಲಿ ಮಳೆರಾಯನಿಗೆ ಅದೆಲ್ಲ ಲೆಕ್ಕಕ್ಕಿಲ್ಲ. ತನ್ನ ಮನಸ್ಸಿಗೆ ಬಂದಂತೆ ವಿವಿಧ ರೂಪತಾಳಿ ಸುರಿಯುವುದೇ ಮಳೆಯ ಗುರಿ. ಒಂದೊಂದು ದಿನ ಒಂದೊಂದು ರೂಪ ಈ ಮಳೆಗೆ, ಧೋ ಎಂದು ಸುರಿಯುವ ಉದ್ದ ದಪ್ಪ ಹನಿಗಳ ಮುಸಲಧಾರೆ. ರಪ ರಪ ಎಂದು ರಾಚುವ ಭಾರಿ ಬಿರುಮಳೆ. ಜಿಟಿಜಿಟಿ ಎಂದು ಹಿಡಿದು ಬಿಡದೇ ಸೋನೆ ಹಿಡಿಯುವ ತಿರಿತಿರಿ ಮಳೆ. ಎಲ್ಲ ಬಗೆಯ ಮಳೆಯ ದಿನಗಳನ್ನು ಈ ಬಾರಿ ಕಂಡದ್ದಾಯ್ತು. ಒಂದೊಂದು ದಿನವಂತೂ ಬೆಳಗೋ ಸಂಜೆಯೋ ತಿಳಿಯದ ಹಗಲುಗತ್ತಲು. ಮತ್ತೆ ಮಳೆ, ಮತ್ತೆ ಕತ್ತಲು... ಹೀಗೆ ಮಳೆ ಮೋಡದಾಟ, ಅದನ್ನು ನೋಡುತ್ತಾ ಕುಳಿತರೆ ಪಾಠ ಮಾಡುವವರಾರು? 'ಕ್ಲಾಸೊಂದಕ್ಕೆ ಹೋಗಿ ನಿಂತೆ.

ಆ ರೂಮಿದ್ದುದೇ ಒಂದು ಮೂಲೆಯಲ್ಲಿ ಗಾರ್ಡನಿನ ಆಚೆ. ಗಿಡಮರದ ಕತ್ತಲು, ಕವಿದ ಮೋಡಗಳ ಕತ್ತಲು, ಕ್ಲಾಸು ರೂಮು ಕತ್ತಲೆ ಕೋಣೆಯಂತೆ ಇತ್ತು. ಒಣ ಇಂಗ್ಲಿಷ್ ಗದ್ಯದಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ಇತ್ಯಾದಿಗಳ ಬಗ್ಗೆ ಕೊರೆಯಲು ಮನಸ್ಸೇ ಬರುವಂತಿರಲಿಲ್ಲ. ಯಾರಾದರೂ ಭಾವಗೀತೆ ಹಾಡುವವರಿದ್ದರೆ ಹಾಡಿಸಿ ಬಿಡುವ ಎಂಬಷ್ಟು ಮನಸ್ಸು 'ಗದ್ಯ ವಿಮುಖಿ ಧೋರಣೆ' ತಾಳಿಬಿಟ್ಟಿತ್ತು. ಆದರೆ "ಹಾಡೇಳಿಸೋಕೆ ಇದೇನು ಪ್ರೈಮರಿ ಸ್ಕೂಲ್ ಕೆಟ್ಟೋಯ್ತ್ತ" ಎಂದು ಯಾರಾದರು ಬೈದರೆ? ನಿತ್ಯದ ಗೋಳುಕರೆಯನ್ನೇ ಪ್ರಾರಂಭಿಸುವುದೆಂದಿದ್ದೆ.

ಆದರೆ ಮುಂದಿನ ಸಾಲಿನ ಹುಡುಗ ಹುಡುಗಿಯರನ್ನು ಬಿಟ್ಟರೆ ಹಿಂದಿನವರಾರೂ ಕಾಣುತ್ತಲೇ ಇಲ್ಲ. ಅನುಮಾನವಾಯ್ತು. "ಲೋ, ಲಾಸ್ಟ್ ಬೆಂಚ್, ನಾನು ಕಾಣ್ತಿದೀನೇನ್ರೋ?" ಎಂದು ಕೇಳಿದೆ, "ಇಲ್ಲಾ ಮೇಡಂ" ಎಂದವು ಕೋರಸ್ಸಿನಲ್ಲಿ ಹಿಂದಿನ ಬೆಂಚಿನಲ್ಲಿ ಮಕ್ಕಳು ಕೂತಿದ್ದು ನಿಜ ಅಂತಾಯ್ತು. ಕಾಣಿಸದಿದ್ರೇನಾಯ್ತು ಪಾಠ ಮಾಡಿದ್ರಾಯ್ತು. ನಾನು ಕೇಳಿಸಿಯಾದ್ರೂ

ಕೇಳಿಸ್ತೀನಾ?" ಎಂದು ಕೇಳಿದೆ.

"ಕೇಳಿಸ್ತೀರಿ ಮೇಡಂ" ಎಂದವು ಕೋರಸ್ಸಿನಲ್ಲಿ, ಸರಿ ಪಾಠ ಪ್ರಾರಂಭ ಮಾಡಿದೆ. ಅಷ್ಟರಲ್ಲಿ ಮಾಡು ಹರಿದು ಬೀಳುವಷ್ಟು ಸಪ್ಪಳ ಮಾಡುತ್ತ ಮುಸಲಧಾರೆ ನಿಜಕ್ಕೂ ಒನಕೆ ಕುಟ್ಟಿದ ಸಪ್ಪಳದೊಂದಿಗೆ ಧಪಧಪನೆ ಬೀಳತೊಡಗಿತು. ನನ್ನ ಸ್ವರ ನನಗೇ ಕೇಳದಾಯ್ತು. ಇನ್ನು ಮಕ್ಕಳಿಗೆಲ್ಲಿ ಕೇಳಬೇಕು. ಕಿಟಕಿಯಿಂದ ಒಳಗೂ ತೂರಿ ಬಂದ ಮಳೆ ಹುಡುಗಿಯರನ್ನು ತೋಯಿಸಿ ಹಾಕಿತು. ಹುಡುಗಿಯರು 'ಅಯ್ಯಯ್ಯೋ' ಎಂದರೆ ಹುಡುಗರು 'ಹೋ' ಎನ್ನತೊಡಗಿದರು. ರೈನ್ ಹಾಲಿಡೇ ಡಿಕ್ಲರ್ ಆಗಿತ್ತು.

ಹೊರಗೆ ಬಂದರೆ ಆವತ್ತಿನ ಮಳೆ ಹುಚ್ಚು ಮಳೆ, "ಮಳೆಯಲ್ಲಿ ನಡೆಯ ಬೇಕನ್ನುತ್ತಿದ್ದೆಯಲ್ಲ. ಧೈರ್ಯವಿದ್ದರೆ ಇವತ್ತು ತಿಚಿಟಙ ಮಾಡು ನೋಡೋಣ" ಎಂದು ದೇಹಕ್ಕೆ ಮನಸ್ಸು ಚಾಲೆಂಜ್ ಎಸೆಯಿತು. ದೇಹ ರೆಡಿ ಎಂದಿತು. ಹೇಗೂ ಗೆಣಗಲದ 'ಕೊಡೆ' ಎಂಬ ವಸ್ತುವಂತೂ ಇದೆಯಲ್ಲ; ತಲೆಯ ಮೇಲೆ ಹಿಡಿದು ನಡೆಯತೊಡಗಿದೆ. ಒಮ್ಮೆಲೆ ನಮ್ಮೂರಿನ ಅಡಿಕೆ ತೋಟದ ಹೆಗ್ಗಾದಿಗೆಗಳಲ್ಲಿ ತುಂಬಿ ಹರಿಯುವ ನೀರಿನ ಸಪ್ಪಳ ಮನಸ್ಸಿನೊಳಗೆ ರಿಂಗುಣಿಸತೊಡಗಿತು. ತೇಲತೊಡಗಿದೆ ಮನೆಯತ್ತ. ಮಳೆಗಾಲ ಪ್ರಾರಂಭವಾದಂದಿನಿಂದಲೂ ನನಗೆ ಆಗಾಗ ಒಂದು ಹುಚ್ಚು ಬಯಕೆ ಏಳುತ್ತಿತ್ತು.

ಸುಳ್ಳೇ ಸಮಾಧಾನ ನೀಡುವ ಈ ಗೇಣಗಲದ ನೈಲಾನ್ ಕೊಡೆಯನ್ನೊಮ್ಮೆ ಬಿಸಾಕಿ ಬೀಸಾಗಿ ಹೆಜ್ಜೆ ಹಾಕಬೇಕು. ಚೂರೂ ಮರೆಯಿಲ್ಲದ ನೇರ ಮಳೆಯ ಪ್ರಹಾರಕ್ಕೆ ಈ ಹುಲುದೇಹ ಹೇಗೆ ಪ್ರತಿಕ್ರಿಯಿಸುತ್ತದೆಯೋ ನೋಡಬೇಕು. ಹಳ್ಳಿಗಳಲ್ಲಿ ಆದರೆ ಹಾಗೆಲ್ಲ ಮಾಡಬಹುದು. ಈ ನಗರದಲ್ಲಿ ಗಿಜಿಗುಟ್ಟುವ ನಾಗರಿಕರ ನಡುವೆ! "ಛೇ ಎಂತಹ ಅಸಾಧು ಯೋಚನೆಗಳು, ತೆಪ್ಪಗೆ ಬಿದ್ದಿರುವ ಮನಸ್ಸೇ ನಿನಗೆನ್ನಿಸಿದ್ದನ್ನೆಲ್ಲ ಮಾಡಿದರೆ ಮುಗಿಯಿತು ಕಥೆ" ಎಂದು ಗದರಿಸಿ ಕೊಡೆ ಹಿಡಿದೇ ಓಡಾಡುತ್ತಿದ್ದೆ. ಆದರೆ ಮನಸ್ಸಿಗೆ ಅಪಾರ ಶಕ್ತಿ ಇದೆ. ತನಗೆ ಬೇಕನಿಸಿದ್ದನ್ನು ಹೇಗಾದರೂ ಮಾಡಿ ಪಡೆದೇ ತೀರುತ್ತದೆ ಎಂಬುದು ಅವತ್ತು ಗೊತ್ತಾಯ್ತು.

ನಾಗರಿಕರ ಕೇಂದ್ರ ತಾಣಗಳನ್ನೆಲ್ಲ ಹಾದು ಜನ ಸಂಚಾರ ಅಷ್ಟಿಲ್ಲದ ಮನೆಯ ದಾರಿಯತ್ತ ಹೆಜ್ಜೆ ಹಾಕುತ್ತಿದ್ದೆ. ಮಳೆ ಸುರಿಯುತ್ತಲೇ ಇತ್ತು. ಸಮುದ್ರದಿಂದ

ನೇರ ಎದ್ದ ಗಾಳಿಯೊಂದು ನನ್ನನ್ನು ಸವರಿಕೊಂಡು ಅಲ್ಲಾಡಿಸಿ ಮುಂದೆ ಹೋದಂತಾಯ್ತು. ನೋಡುವಷ್ಟರಲ್ಲಿ ನನ್ನ ಗೇಣಗಲದ ಕೊಡೆ ನನಗೆ ತಿರುಗಿ ಬಿದ್ದಿದೆ. ಕತೆ ಕಾದಂಬರಿ ನಾಟಕಗಳಲ್ಲಿ ಪಾತ್ರಗಳು 'ತಿರುಗಿ ಬಿದ್ದವು' ಎನ್ನುತ್ತಾರಲ್ಲ ಹಾಗೆ ನಡುದಾರಿಯ ಬಟ್ಟ ಬಯಲಲ್ಲಿ ನನ್ನ ಕೊಡೆ ಬಂಡಾಯ ಮಾಡಿ ತಿರುಗಿಬಿದ್ದು ನನ್ನನ್ನು ಮಳೆಯಲ್ಲಿ ತೆರೆದಿಟ್ಟಿದೆ. ಹೀಗೆ ಬಿರುಗಾಳಿ, ಬಂಡಾಯ, ತಿರುಗಿ ಬೀಳುವುದು... ಎಲ್ಲಾ ಒಮ್ಮೆಲೆ ಘಟಿಸಿ ಕ್ರಾಂತಿಯಾಗಿತ್ತು. ಮನಸ್ಸಿಗೆ ಮಾತ್ರ ಹುಚ್ಚು ಸಂತೋಷ (ಕ್ರಾಂತಿಯಾದ ಬಳಿಕ ಬದಲಾವಣೆ ತರುವ ಸಂತೋಷವೆಂದರೆ ಹೀಗೆ ಇರಬಹುದೆ?) ತಾನಾಗಿಯೇ ಬಂದ ಅವಕಾಶ. ಆಚೀಚೆ ನೋಡಿದೆ. ಬಟ್ಟ ಬಯಲಿನ ಟಾರು ರೋದು, ನರಸಂಚಾರವಿಲ್ಲ. ಮಳೆಯ ಧಾರೆ ಭುವಿಬಾನುಗಳಿಗೆ ಸೇತುವೆಯಾಗಿದೆ, 'ಪಂಛಿ ಬಂ ಉಡತಿ ಒರೂ ಮಸ್ ಗಗನ್‌ಮೇ' ಎಂದೆನ್ನಿಸತೊಡಗಿತು. ತಿರುಗಿಬಿದ್ದ ಕೊಡೆಯ ಕಳೇಬರ ಹೊತ್ತು ಗತ್ತಿನಲ್ಲಿ ಹೆಜ್ಜೆ ಹಾಕತೊಡಗಿದೆ.

"ಹುಚ್ಚು ಮಳೆಯಲ್ಲಿ ಹೊತ್ತು ನಡೆದಳು ಕೆಟ್ಟ ಕೊಡೆಯಾ ಅಸ್ಥಿಪಂಜರ..."ಎಂದಲ್ಲಾ ಏನೇನೋ ಹಾಡುಗಳು ಯಕ್ಷಗಾನದ ಧಾಟಿಯಲ್ಲಿ ಹುಟ್ಟಿಬರತೊಡಗಿದವು. ಅಂತೂ ಬಲು ದಿನದ ಆಸೆಯೊಂದು ನೆರವೇರಿದ ಮತ್ತಿನಲ್ಲಿ ತೇಲುತ್ತಿದ್ದೇನೆಂದು ಭಾವಿಸಿಕೊಳ್ಳುತ್ತಾ ಹೆಜ್ಜೆ ಹಾಕುತ್ತಿದ್ದೆ. ನಿಮ್ಮ ಪಾಡಿಗೆ ನೀವು ನಿಮಗಿಷ್ಟ ಬಂದ ಹಾಗೆ ಸಂತೋಷಿಸುತ್ತೇನೆ ಎಂದರೆ ಬಿಟ್ಟರೆ ಈ ನರಲೋಕ?

ನನ್ನ ಬಳಿಯೇ ಆಟೋವೊಂದು ಬಂದು ನಿಂತಿತು. "ಹತ್ಕೊಳ್ಳಿ ಮೇಡಂ, ಎಲ್ಲಿಗೆ ಬಿಡಬೇಕು ಹೇಳಿ" ಎಂದಿತು ಪರೋಪಕಾರಿ ದನಿ, "ತಂದ್ಯಲ್ಲಪ್ಪ ಸಂಚಕಾರ" ಎಂದು ಕೊಂಡನಾದರೂ ಹಾಗೆ ಹೇಳಲಾದೀತೆ? ತಡಬಡಿಸಿದನಿರಬೇಕು. "ಪರ್ವಾಗಿಲ್ಲ ಮೇಡಂ. ದುಡ್ಡು ಎಷ್ಟು ಬೇಕಾದ್ರು ಕೊಡಿ. ಮಳೆ ನೋಡಿ ಹೇಗೆ ಸುರೀತಿದೆ' ಅಂದ ಆಟೋ ಡ್ರೈವರ್. ಮಾಡುವುದೇನು? ಹತ್ತಿ ಕೂತು ಇಂತಲ್ಲಿಗೆ ಬಿಡು ಎನ್ನಬೇಕಾಯ್ತು. ಮನೆಯ ಗೇಟಿನ ತನಕ ರಿಕ್ಷಾ ಹೋಗುವುದಿಲ್ಲವಾದ್ದರಿಂದ ಹಿಂದೇ ಇಳಿದು ಒದ್ದೆ ಹಣ ಕೊಟ್ಟು ಮತ್ತೆ ಮನೆಯ ತನಕ "ಮಳೆಯಲ್ಲಿಯೇ ಮನೆಗೆ ಬಂದಳು" ಎಂಬಂತೆ ತೇಲ ತೊಡಗಿದೆ.

ದೂರದಿಂದಲೇ ನನ್ನನ್ನು ಗಮನಿಸುತ್ತ ನಿಂತಿದ್ದರು ಎದುರು ಮನೆಯ ಹಸಿಮೆಣಸಿನಾಕೆ, ಕೊಡೆ ಹಾಳಾಗಿದ್ದಕ್ಕೆ ಚೂರೂ ಬೇಸರಿಸದೇ ಓಡುತ್ತಲೂ ಬರದೇ ನೆನೆಯುವುದೇ ಪರಮೋದ್ದೇಶವೆಂಬಂತೆ ನಿಧಾನಕ್ಕೆ ಬರುತ್ತಿರುವ ನನ್ನನ್ನು ನೋಡಿದ ಅವರಿಗೀಗ ಚೂರು ಅನುಮಾನವೂ ಉಳಿಯಲಿಲ್ಲ ಎಂಬುದು ಅವರು ನನ್ನತ್ತ ಬೀರಿದ ಕರುಣಾತಿಶಯದ ದಷ್ಟಿಯಲ್ಲೇ ವ್ಯಕ್ತವಾಗುತ್ತಿತ್ತು. ಅಂತೂ ಈ ಬಾರಿಯ ಮಳೆಗಾಲ ಎಲ್ಲೆಲ್ಲಿ ಎಂತೆಂತಹ ಅನಾಹುತ ಮಾಡಿದೆಯೋ...!

# ಹೊರಗೂ ಮಳೆ ಒಳಗೂ ಮಳೆ

**–ಚ.ಹ. ರಘುನಾಥ್**

ಪಾರದರ್ಶಕ ಗೋಡೆ ದಾಟಿಬರಲು ಹವಣಿಸುತ್ತಿದ್ದ ಮಳೆ ಒಂದು ಜೀವಂತ ಪೇಯಿಂಟಿಂಗ್‌ನಂತೆ ಕಾಣುತ್ತಿತ್ತು. ಆಕೆಗೂ ಮಳೆಗೂ ಗಾಜಿನ ಗೋಡೆಯಷ್ಟೇ ಅಡ್ಡವಾಗಿತ್ತು. ಗೋಡೆಯನ್ನು ಒಡೆದು ಮಳೆಗೆ ಮೈಯೊಡ್ಡಬೇಕನ್ನಿಸಿತು. ತಾವಾಗಿಯೇ ನಿರ್ಮಿಸಿಕೊಂಡ ತಡೆ ನಿವಾರಿಸಿಕೊಳ್ಳುವುದು ಹೇಗೆ ಸಾಧ್ಯ?ಗಾಜಿನ ಗೋಡೆಯನ್ನು ಭೇದಿಸಿ ಒಳನುಗ್ಗಲು ಮಳೆ ಸೈನಿಕರು ಅವಿರತ ಪ್ರಯತ್ನ ನಡೆಸುವುದನ್ನು ಎವೆಯಿಕ್ಕದೆ ನೋಡತೊಡಗಿದಳು. ಆ ಸೈನಿಕರ ದಾಳಿ ರಾಜಕುಮಾರಿಯಾದ ತನ್ನನ್ನು ಅಪಹರಿಸುವ ಹುನ್ನಾರದಂತೆ ಕಾಣಿಸಿತು.

ಎರಡೂ ಕೈಗಳಿಂದ ಗಾಜು ಸವರಿದಳು. ಒಂದಿಷ್ಟೂ ದೂಳಿಲ್ಲ, ಊಹುಂ, ಕೈ ಒದ್ದೆಯಾಗಲಿಲ್ಲ. ಮನಸ್ಸು ಬಿಸಿಯಾಯಿತು. ಏನೋ ನೆನಪಾದವಳಂತೆ, ಗಾಜಿನ ಗೋಡೆಯ ಹಂಗು ಮೀರಿದವಳಂತೆ ಟೆರೇಸಿಗೆ ಓಡಿದಳು. ಮಳೆಗೆ ಮತ್ತಷ್ಟು ಸಮೀಪವಾಗಲು, ಮಳೆಯನ್ನು ಮೈದುಂಬಿಸಿಕೊಳ್ಳಲು, ಐದಂತಸ್ತಿನ ಕಟ್ಟಡದ ನೆತ್ತಿಯೇರಿದಳು. ಮಳೆ ಹುಯ್ಯುತ್ತಲೇ ಇತ್ತು; ಹುಚ್ಚುಹುಚ್ಚಾಗಿ, ಕುರುಡಾಗಿ, ಕಿವುಡಾಗಿ.

ಕಟ್ಟಡದ ನೆತ್ತಿಯ ಮೇಲೆ ನಿಂತು ಮುಗಿಲಿಗೆ ಕಣ್ಣು ಕೀಲಿಸಿ ದಣಿದವಳು ದೃಷ್ಟಿ ಇಳಿಸಿದಳು. ಅಲ್ಲಿ ನೆಲವೆಲ್ಲಿದೆ? ರಸ್ತೆಯ ತುಂಬಾ ನೀರು, ರಸ್ತೆ ನದಿಯಾಗಿತ್ತು. ನದಿಗೆ ಕಟ್ಟಿದ ಸೇತುವೆಯಂತೆ ಫ್ಲೈಓವರ್ ಕಾಣುತ್ತಿತ್ತು. ಆಗೊಂದು ಈಗೊಂದು ಮಂದಗತಿಯಲ್ಲಿ ಸಾಗುವ ವಾಹನಗಳು ನೀರ ಸೀಳಿಕೊಂಡು ಸಾಗುವ ದೋಣಿಗಳಂತೆ ಕಾಣುತ್ತಿದ್ದವು. ಅವಳಿಗೆ ದೋಣಿಯ ನೆನಪಾಯಿತು. ನೀಟುನೋಟಿನ ಮಧ್ಯದ ಹಾಳೆ ಕಿತ್ತು ದೋಣಿ ಮಾಡಿ ಕೆಂಪುನೀರಿನಲ್ಲಿ ಬಿಡುತ್ತಿದುದು ನೆನಪಾಯಿತು.

ಎಷ್ಟೊಂದು ಮಳೆಗಾಲಗಳು! ಎಷ್ಟೊಂದು ದೋಣಿಗಳು! ಅಷ್ಟೂ ದೋಣಿಗಳು ಜಲಗರ್ಭದಿಂದ ಮೇಲೆದ್ದು ತೇಲುತ್ತಿವೆಯೆನ್ನಿಸಿತು. ತಾನು ಯಾವ ದೋಣಿಯಲ್ಲಿ ಕೂರುವುದು?

ಉಹುಂ, ಮುಳುಗಿದ ದೋಣಿಗಳು ತೇಲುವುದಿಲ್ಲ, ತೇಲಿದರೂ ಅಸ್ಥಿಪಂಜರವಷ್ಟೆ! ಉಳಿದಿರುತ್ತದೆ. ಎಲುಬಿನ ಹಂದರಕ್ಕೆ ರಕ್ತ ಮಾಂಸ ತುಂಬುವುದು, ಪ್ರಾಣಧಾರಣೆ ಮಾಡುವುದು ಯಾರಿಗೆ ಸಾಧ್ಯ? ತೇಲಿದ ದೋಣಿಗಳು ಮತ್ತೆ ಪಲ್ಟಿ ಹೊಡೆಯತೊಡಗಿದವು

ಏರುತ್ತಿರುವ ಜ್ವರದಂತೆ ಮಳೆ ಬಿರುಸಾಗುತ್ತಿತ್ತು. ಅವಳಿಗೆ ಹೊಸದೊಂದು ದೋಣಿ ಬಿಡಬೇಕನ್ನಿಸಿತು. ಸದ್ಯ, ದೋಣಿ ಮಾಡುವ ಚಾಲಾಕಿತನ ಇನ್ನೂ ಮರೆತಿಲ್ಲ, ದೋಣಿ ಮಾಡಲು ಬೇಕಾದ ಕಾಗದ ತರಲಿಕ್ಕಾಗಿ ಕೆಳಗೆ ಓಡಿದಳು. ನೋಟುಬುಕ್ಕು ತಕ್ಷಣ ಕೈಗೆ ಸಿಗಲಿಲ್ಲ ಟೇಬಲ್ ಮೇಲಿದ್ದ ಪರ್ಸ್‌ನಿಂದ ನೋಟೊಂದನ್ನು ಎಳೆದುಕೊಂಡವಳೇ ಮತ್ತೆ ಟೆರೇಸಿಗೆ ಓಡಿದಳು. ದೋಣಿ ಅರೆಕ್ಷಣದಲ್ಲಿ ಸಿದ್ಧವಾಯಿತು. ಟೆರೇಸಿನಲ್ಲಿ ಹರಿಯುತ್ತಿದ್ದ ಸಣ್ಣ ಹಳ್ಳವೊಂದರಲ್ಲಿ ದೋಣಿಯ ಬಿಟ್ಟು ಹುಟ್ಟು ಹಾಕಿದಳು. ನೀರ ಹರಿವಿನಗುಂಟ ಸಾಗುತ್ತಿದ್ದ ದೋಣಿಯನ್ನು ನೋಡಿ ಚಪ್ಪಾಳೆ ತಟ್ಟಿ ನಗತೊಡಗಿದಳು. ದೋಣಿ ಮಳೆಯ ಹೊಡೆತ ಸಿಕ್ಕಿ ಮಗುಚಿಕೊಂಡಿತ್ತು. ನೀರಿನಲ್ಲಿ ಒಂದಾಗಿ ಟೆರೇಸಿನಿಂದ ನೆಲಕ್ಕೆ ಇಳಿದಿದ್ದ ಪೈಪಿನ ಮೂಲಕ ದೋಣಿ ನೆಲ ಸೇರಿತು.

ಆಫೀಸಿನ ನೆನಪಾಯಿತು. ಅಲ್ಲಿನ ಕಂಪ್ಯೂಟರ್‌ಗಳೆಲ್ಲ ನೀರಿನಲ್ಲಿ ದೋಣಿಗಳಾಗಿ ತೇವ ಅನ್ನಿಸಿತು. ಆ ಕಂಪ್ಯೂಟರ್‌ನಲ್ಲಿ ಜತನವಾಗಿರಿಸಿದ್ದ ಒಲವು-ಸೆಡವು-ಬಯ್ಗುಳ-ತಪ್ಪೊಪ್ಪಿಗೆ ಎಷ್ಟೊಂದು ಪತ್ರಗಳಿದ್ದವು. ಎಷ್ಟೊಂದು ಭಾವಗಳಿದ್ದವು. ನೀರು ಎಲ್ಲವನ್ನೂ ಆಪೂಸನ ಮಾಡಿಕೊಂಡು ವಿಕಾರವಾಗಿ ಹರಿಯುತ್ತಿದೆ ಅನ್ನಿಸಿತು.

ಭೂಗೋಳದ ಮತ್ತೊಂದು ಮೂಲೆಯಲ್ಲಿನ ಕಚೇರಿಯಲ್ಲಿ ಏನಾಗುತ್ತಿದೆ? ಅವನು ನೆನಪಾದ. ಅಲ್ಲೂ ಮಳೆಯಾ? ಅವನಲ್ಲೂ ಮಳೆಯಾ? ಬಿಸಿಲಾ ಚಳಿಯಾ? ಅವನು ನನ್ನ ನೆನಪಿಸಿಕೊಳ್ಳುತ್ತಿದಾನಾ? ಯಾವುದಾದರೂ ಹುಚ್ಚು ಮಳೆಯಲ್ಲಿ ತೋಯ್ದು ಬರಿದಾಗಿದ್ದಾನಾ? ಅವನ ಮೈಗಂಟಿದ ಬೆವರು-ಕಮಟುಗಳನ್ನು ಆ ಮಳೆ ತೊಳೆದುಹಾಕಿದೆಯಾ? ಅಥವ ಹುಡುಗ ಆ ಹುಚ್ಚುಮಳೆಗೆ ನೆನಪುಗಳ ಛತ್ರಿ ಹಿಡಿದನಾ?

ಮಳೆಯಲ್ಲಿ ಎಷ್ಟು ತೊಯ್ದರೂ ಸಮಾಧಾನವೆನ್ನಿಸುತ್ತಿಲ್ಲ, ಅಥವಾ ಇಷ್ಟು

ಕಾಲದ ಮಳೆಯನ್ನು ದೂರವಿಟ್ಟ ತನ್ನನ್ನು ಈಗ ಮಳೆ ದೂರವಿಡುತ್ತಿದೆಯಾ? ಮಳೆಮಾಯಿ, ಕ್ಷಮಿಸು. ದಯವಿಟ್ಟು ಬಾ, ಅಪ್ಪಿಕೋ. ಎದೆಯ ಒಳಗೂ ಸುರಿ, ಒಳಗಿನ ಮಳೆಯಂಗ್ ಬೆರೆತು ಎದೆಯ ಕಾವನ್ನು ಆರಿಸು, ಬಾ ಮಳೆಯೇ, ದಯವಿಟ್ಟು ಬಾ.

ಅಂದೂ ಮಳೆ ಬಂದಿತ್ತು.

ಅಮ್ಮನನ್ನು ನೋಡಿ ತುಂಬಾ ದಿನವಾಯಿತು ಅನ್ನಿಸಿದ್ದೇ ತಡ ಮಧ್ಯಾಹ್ನದ ಕ್ಲಾಸ್‌ಗೆ ಚಕ್ಕರ್ ಹೊಡೆದು ಊರಿನ ಬಸ್ ಹತ್ತಿದ್ದಳು. ಬಸ್ಸಿನಲ್ಲಿ ಕೂತವಳು ಕಪ್ಪಡರುತ್ತಿದ್ದ ಆಕಾಶವನ್ನು ನೋಡತೊಡಗಿದಳು. ಪ್ರಯಾಣದ ವೇಳೆ ಮಳೆ ಬಂದರೆ ಅವಳಿಗೆ ಖುಷಿ, ಕಿಟಕಿಯ ಗಾಜನ್ನು ತೊಳೆವ ಮಳೆ, ಗಾಜಿನ ಸಂದಿಯಲ್ಲಿ ನುಸುಳಿ ಒಳನುಗ್ಗಿ ಕಚಗುಳಿಯಿಡುವ ಹನಿಗಳು, ಬಸ್ಸಿನ ಮುಂಭಾಗದ ಗಾಜಿನ ಪರದೆಯ ಮೇಲೆ ಚೆಲ್ಲಾಪಿಲ್ಲಿಯಾಗುವ ಮಳೆಹನಿಗಳ ಅಳಿಸುವ ವೈಪರ್‌ನ ಲಯಬದ್ಧ ಓಲಾಟ, ಎಲ್ಲವೂ ಅವಳಿಗೆ ಇಷ್ಟ

ಮೋಡಗಳು ಹುಸಿಯಾಗಲಿಲ್ಲ ಮಳೆ ಸುರಿಯತೊಡಗಿತು. ಮಳೆಯ ಮುದ್ದಿನಿಂದ ಬಸ್ಸಿನ ವೇಗ ಕಾವುಗುಂದಿತು. ಕಪ್ಪು ರಸ್ತೆಯ ಮೇಲೆ ಬಿದ್ದು ಹರಿದುಹೋಗುವ ನೀರು, ರಸ್ತೆಯ ಬದಿಗಳಲ್ಲಿ ಕಿರು ಹಳ್ಳದ ಎಳೆಗಳಾಗಿ ಸಾಗುವ ನೀರು, ಮಾಸಿದ ವಾಹನ–ಕಟ್ಟಡಗಳ ಮೀಯಿಸುವ ನೀರು, ಬಣ್ಣಬಣ್ಣದ ಕೊಡೆ ಕಮಾನುಗಳ ಮೇಲೆ ಇಳಿವ ನೀರು, ಮಳೆಯ ಚಿತ್ರಗಳನ್ನು ಸವಿಯತೊಡಗಿದಂತೆ ಅವಳೇ ಮಳೆಯಾಗಿ ಬದಲಾಗತೊಡಗಿದಳು. ಅಮ್ಮ ನೆನಪಿಗೆ ಬಂದದ್ದೇ ಆಗ.

ಮಳೆಯ ದಿನಗಳೆಂದರೆ ಅವಳಿಗೆ ಖುಷಿ ಹಾಗೂ ಕಸಿವಿಸಿ. ಅಮ್ಮನ ಕಣ್ತಪ್ಪಿಸಿ ನೀರಿನಲ್ಲಿ ಆಡುವುದು, ದೋಣಿ ಬಿಡುವುದು ಖುಷಿಗೆ ಕಾರಣ. ಅಮ್ಮನ ಪೆಟ್ಟು ನೆನಪಿಗೆ ಬಂದರೂ ಮಳೆಯಲ್ಲಿ ನೆನೆಯುವುದನ್ನು ಅವಳು ತಪ್ಪಿಸಿಕೊಳ್ಳುತ್ತಿರಲಿಲ್ಲ. ಒಮ್ಮೆ ಮಳೆಯಲ್ಲಿ ನೆಂದು ಜ್ವರ ಬಂದು ವಾರ ಮಲಗಿದ್ದಳು. ಆಗ ಅಮ್ಮ ಕಂಗಾಲಾಗಿದ್ದಳು. 'ನೀನು ನನ್ನ ಮಗಳೋ, ಮಳೆಯ ಮಗಳೇ' ಎಂದು ಪ್ರಶ್ನಿಸಿದ್ದಳು.

ಸೂರಿನಿಂದಿಳಿವ ದಾಳಿಕೋರ ಹನಿಗಳಿಗೆ ತಪ್ಪಲೆಗಳ ಗುರಾಣಿಯಾಗಿಸುತ್ತ, ದಾಳಿಮುಕ್ತ ಜಾಗದಲ್ಲಿ ಅಡುಗೆ ಬೇಯಿಸಲು ಹೆಣಗುತ್ತಿದ್ದ ಅಮ್ಮನನ್ನು ಕಂಡಾಗ

ಮಳೆಯ ಬಗ್ಗೆ ಬೇಜಾರಾಗುತ್ತಿತ್ತು. ಎಷ್ಟೋ ರಾತ್ರಿಗಳ ನಿದ್ದೆ ಮಳೆಪಾಲಾಗುತ್ತಿತ್ತು. 'ಬರೀ ಬಯಲಿನಲ್ಲಿ ಹೊಲಗಳಲ್ಲಿ ಮಾತ್ರ ಸುರಿಯಪ್ಪ ಎಂದು ಮಳೆರಾಯನನ್ನು ಅವಳು ಸಾವಿರ ಸಲ ಪ್ರಾರ್ಥಿಸಿದ್ದಳು. ತನ್ನ ಪ್ರಾರ್ಥನೆ ನೀರುಪಾಲಾದುದನ್ನು ಪ್ರತ್ಯಕ್ಷ ಕಂಡಾಗ ಬೇಜಾರು ಇನ್ನಷ್ಟು ಹೆಚ್ಚುತ್ತಿತ್ತು.

ಅಜ್ಜನ ಊರಲ್ಲಿ ಬೇರೆಯದೇ ಮಳೆಯ ಚಿತ್ರ. ಅಲ್ಲಿ ಮಳೆಗಾಗಿ ಜನರು ಕಾಯುತ್ತಿದ್ದರು. ಮಳೆ ಬಂದಿತೆಂದರೆ ಗೋಣಿಚೀಲದ ರೇನ್‌ಕೋಟ್ ಬೆನ್ನಿಗೇರಿಸಿ ಸರಬರ ಏಣಿ ಏರುತ್ತಿದ್ದರು, ಗವಾಕ್ಷಿ ಮುಚ್ಚುತ್ತಿದ್ದರು. ಮಳೆಯ ವೈಭವವನ್ನು ನೋಡುತ್ತ, ಈ ಮಳೆಯಿಂದಾಗಿ ಕೆರೆಗೆ ಎಷ್ಟು ದಿನದ ನೀರು ಬರಬಹುದು ಎನ್ನುವ ಅಂದಾಜು ನಡೆಯುತ್ತಿತ್ತು. 'ಕೆರೆ ಕಡೆ ಹೋಗಿಬಂದ್ರಾ?' ಎನ್ನುವ ಮಾತು ಮಳೆ ನಿಂತ ನಂತರ ಉಭಯಕುಶಲೋಪರಿಯ ಮುನ್ನುಡಿಯಾಗಿರುತ್ತಿತ್ತು.

ಮಳೆ ಋತು ಪ್ರಾರಂಭವಾಗುವ ಮುನ್ನವೇ ವರ್ಷ ಪಂಚಾಂಗದ ಲೆಕ್ಕಾಚಾರ ನಡೆಯುತ್ತಿತ್ತು. ಉತ್ಸವದ ಸಂದರ್ಭದಲ್ಲಿ ಮಹಾಮಂಗಳಾರತಿ ನಂತರ ನಿರ್ದಿಷ್ಟ ವ್ಯಕ್ತಿಯ ಮೈದುಂಬುತ್ತಿದ್ದ ದೇವರು ಈ ವರ್ಷದ ಮಳೆಯ ಸಾಧ್ಯಾಸಾಧ್ಯತೆಗಳ ಬಗ್ಗೆ ಭವಿಷ್ಯವಾಣಿ ನುಡಿಯುತ್ತಿದ್ದರು. ಆ ಭವಿಷ್ಯವಾಕ್ಯವನ್ನು ಅರ್ಥೈಸುವ ಒಂದು ಗುಂಪೂ ಇತ್ತು.

ಅಜ್ಜನ ಮನೆಯ ಬಾಗಿಲು ಇದ್ದಕ್ಕಿದ್ದಂತೆ ಮುಚ್ಚಿಕೊಂಡಿತ್ತು. ಅಪ್ಪನ ಜೊತೆಗೆ ಅಜ್ಜನ ಮನೆಯ ಚಿತ್ರಗಳ ಮೇಲೂ ದೂಳು ಕವಿಯತೊಡಗಿತು. ಅಮ್ಮ ಏನನ್ನೂ ಹೇಳುತ್ತಿರಲಿಲ್ಲ "ನನಗೆ ನೀನು, ನಿನಗೆ ನಾನು' ಎಂದಷ್ಟೇ ಹೇಳುತ್ತಿದ್ದಳು. ಅವಳು ಸ್ವಾಭಿಮಾನಿ. ದಿನದೂಡಲಿಕ್ಕೆ ಯಾರ ಮುಂದೂ ಕೈಚಾಚದೆ, ಅಪ್ಪ ಬಿಟ್ಟು ಹೋಗಿದ್ದ ಆಸ್ತಿಯಲ್ಲಿ ಅನ್ನ ಹುಟ್ಟಿಸಿಕೊಳ್ಳುತ್ತಿದ್ದ ಗಟ್ಟಿಗಿತ್ತಿ. ಮಗಳಿಗೆ ಕಷ್ಟದ ಲವಲೇಶವೂ ತಗುಲದಂತೆ ಎಚ್ಚರವಹಿಸಿದ ಮಮತಾಮಯಿ ಮಾಯಿ, ಮನೆಯ ಸೂರು– ಬಾಗಿಲು ಭದ್ರಪಡಿಸಿದಳು.

ಬಸ್ಸಿನ ಛಾವಣಿಯ ಕಂಡಿಗಳಿಂದ ತೂರತೊಡಗಿದ ಮಳೆಯ ಹನಿಗಳು ನೆತ್ತಿಯ ಮೇಲೆ ಒಂದೊಂದಾಗಿ ಇಳಿಯತೊಡಗಿದ್ದವು. ನೆತ್ತಿಯ ಮೇಲಿನಿಂದ ಮುಖದ ಮೇಲೆ ಇಳಿಯುತ್ತಿದ್ದ ಹನಿಗಳ ಒರೆಸಿಕೊಂಡಳು. ಊರು ಹತ್ತಿರವಾಗಿತ್ತು.

ಬಸ್ಸಿನಿಂದ ಇಳಿದಾಗ ಊರಿನಲ್ಲಿ ಸಂಜೆಯ ಮೊದಲ ಪಾದ, ಮಳೆಯ

ತೀವ್ರತೆ ಕಡಿಮೆಯಾದೀತೇನೋ ಎಂದು ಅಂಗಡಿಯೊಂದರ ಸೂರಿನಡಿ ಕಾದದ್ದು ವ್ಯರ್ಥವಾಯಿತು. ಸಂಜೆ ಮಳೆ ಬೇಗನೆ ಬಿಡುವುದಿಲ್ಲ ಎನ್ನುವ ಮಾತು ನೆನಪಾಯಿತು. ಬ್ಯಾಗು ಹೆಗಲಿಗೇರಿಸಿ ರಸ್ತೆಗಿಳಿದೇಬಿಟ್ಟಳು. ಹತ್ತು ಹೆಜ್ಜೆ ನಡೆಯುವಷ್ಟರಲ್ಲಿ ಮೈಯೆಲ್ಲಾ ಒದ್ದೆಮುದ್ದೆ ಬಹುದಿನಗಳ ನಂತರ ಆಪ್ತ ಮಿತ್ರನನ್ನು ಭೇಟಿಯಾದಂತನ್ನಿಸಿತು. ಸ್ವಲ್ಪದೂರ ನಡೆದವಳಿಗೆ, ಅಂಗಡಿಮುಂಗಟ್ಟು ಮರಗಳಡಿ ಆಶ್ರಯ ಪಡೆದ ಜನರ ಕಣ್ಣುಗಳೆಲ್ಲ ಬಟ್ಟೆ ಮೈಗಂಟಿಕೊಂಡ ತನ್ನನ್ನೇ ನೋಡುತ್ತಿವೆ ಅನ್ನಿಸಿತು. ಮರುಕ್ಷಣ ಅವಳಿಗೆ ನಗುಬಂತು.

ಮಳೆ ನಿಲ್ಲುವವರೆಗೂ ಕಾಯದೆ ಒದ್ದೆಯಾಗಿ ಬಂದದ್ದಕ್ಕೆ ಅಮ್ಮ ಬಯ್ಯುತ್ತಾಳಾ? ಬಯ್ಯಿಸಿಕೊಳ್ಳುವುದೂ ಖುಷಿ ಅನ್ನಿಸಿತು.

ಎರಡು ಬಾರಿ ಬಾಗಿಲು ತಟ್ಟಿದರೂ ಅಮ್ಮ ಬಾಗಿಲು ತೆಗೆಯಲಿಲ್ಲ, ಮಲಗಿದ್ದಾಳಾ? ಹುಷಾರು ತಪ್ಪಿದ್ದಾಳಾ?

ಬಾಗಿಲು ತೆರೆಯಿತು. ಅಮ್ಮನ ಕಣ್ಣುಗಳಲ್ಲಿ ಅಚ್ಚರಿ. ಗಾಬರಿಯೂ ಇತ್ತಾ? ಏನೊಂದೂ ಮಾತನಾಡದೆ ಬಾಗಿಲಿಗಡ್ಡ ನಿಂತಿದ್ದ ಅಮ್ಮನನ್ನು ತಳ್ಳಿಕೊಂಡು ಒಳಗೆ ಹೋದಳು.

'ಚೆನ್ನಾಗಿದ್ದೀಯೇನಮ್ಮ?' ಎಂದ ಆತ. ಅಪ್ಪನಿದ್ದಾಗ ಆತ ಮನೆಯ ಸುಖದುಃಖಗಳ ಪಾಲುದಾರನಂತಿದ್ದ.

ಅಮ್ಮ ಏನೂ ಹೇಳಲಿಲ್ಲ. ಮಗಳು ಏನನ್ನೂ ಕೇಳಲಿಲ್ಲ,

ವಾರ ಇರಲು ಬಂದವಳು ಮಾರನೆಯ ಬೆಳಗ್ಗೆಯೇ ವಾಪಸ್ಸಾದಳು. 'ಇರು' ಎಂದು ಅಮ್ಮ ಬಲವಂತ ಮಾಡಲಿಲ್ಲ,

ಅದೇ ಮಳೆ. ಅದೇ ಅಮ್ಮ. ಮಗಳು ಮಾತ್ರ ಬದಲಾಗಿದ್ದಳು, ತನಗೆ ತಾನೆ ಹೊಸಬಳೆನ್ನಿಸುವಷ್ಟು ಅವಳಿಗೆ ಮಳೆಯೆಂದರೀಗ ರುಚಿಸುವುದಿಲ್ಲ, ಮಳೆಯಲ್ಲಿ ನೆನೆಯುವುದಂತೂ ಮಹಾನ್ ಕಿರಿಕಿರಿಯ ಸಂಗತಿ. ಮಳೆಯ ಹೊತ್ತು ಮನೆಯ ಕಿಟಕಿ–ಬಾಗಿಲುಗಳನ್ನು ಮುಚ್ಚಿ ಪರದೆ ಇಳಿಬಿಟ್ಟು ಟೀವಿ ವಾಲ್ಯೂಂ ಜಾಸ್ತಿ ಮಾಡಿಬಿಡುತ್ತಿದ್ದಳು; ಮಳೆಯನ್ನಷ್ಟೇ ಅಲ್ಲ ಅದರ ಸದ್ದನ್ನೂ ದೂರವಿಡುವವಳಂತೆ. ಆದರೂ ಮಾಯಾವಿ ಮಳೆ ಕೆಲವೊಮ್ಮೆ ದೇಹವನ್ನು

ಒದ್ದೆ ಮಾಡಿಬಿಡುತ್ತಿತ್ತು. ಮನಸ್ಸಿನೊಳಗೆ ತೂರಿ ನೆನಪಿನ ಪುಟಗಳ ದೂಳು ತೊಳೆಯುತ್ತಿತ್ತು.

'ಮಳೆಯ ಮಗಳು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದವಳು ಮಳೆಯಿಂದ ದೂರವಾಗಲು ಬಯಸತೊಡಗಿದಳು. ಮಳೆ ನೆನಪುಗಳ ವಾಹಕವಾಗಿ ಆ ನೆನಪುಗಳು ಇಂದಿನ ಬದುಕನ್ನು ಅಣಕಿಸುತ್ತವೆ ಅನ್ನಿಸುತ್ತಿತ್ತು. ಆ ಕಾರಣದಿಂದಲೇ ಅವಳು ಮಳೆಯ–ನೆನಪುಗಳ ಹಂಗು ಮೀರತೊಡಗಿದ್ದಳು.

ಕಾಲೇಜು ಮುಗಿಯಿತು. ಮಾರ್ಕ್ಸ್ ಕಾರ್ಡ್ ಕೈಗೆ ಬರುವುದರೊಳಗೇ ಕೆಲಸವೂ ಸಿಕ್ಕಿತು. ಕಂಪ್ಯೂಟರ್‌ನ ಮುಂದೆ ಕುಳಿತರೆ ಊರು, ಮಳೆ, ಅಮ್ಮ ಒಂದೂ ನೆನಪಾಗುತ್ತಿರಲಿಲ್ಲ, ಇಡೀ ಜಗತ್ತು ತನ್ನ ಮುಷ್ಠಿಯಲ್ಲಿದೆ ಅನ್ನಿಸುತ್ತಿತ್ತು. ಆ ಮುಷ್ಠಿಯಲ್ಲಿನ ಬ್ರಹ್ಮಾಂಡದಲ್ಲಿ ತನ್ನ ಊರು, ಮಳೆ, ಅಮ್ಮ ಇವರಿಗೆಲ್ಲ ಎದ್ದು ಕಾಣುವ ಅಸ್ತಿತ್ವವಾದರೂ ಎಲ್ಲಿದೆ? ಅಥವಾ ತನ್ನ ಅಸ್ತಿತ್ವವೇ ಸುಳ್ಳಾ? ತನ್ನದು ಕೂಪದೊಳಗಿನ ಮಂಡೂಕದ ಭ್ರಮೆಯಾ?

ಅವಳು ಕಳೆದುಹೋದ ಮಳೆಗಾಲಗಳ ಲೆಕ್ಕ ಇಟ್ಟಿರಲಿಲ್ಲ, ಆದರೆ ಅಮ್ಮ ಸತ್ತುಹೋದ ದಿನ ನೆನಪಿತ್ತು. ಅಂದು ಅವಳು ಊರಿಗೆ ಹೋಗಿದ್ದಳು, ಮಗಳಾಗಿ, ಸಾಯುವಾಗ ಅಮ್ಮ ತನ್ನನ್ನು ಕನವರಿಸಿದ್ದಳಂತೆ. ಹಾಗೆಂದು ಯಾರೋ ಹೇಳಿದರು. ಬದುಕಿದ್ದಾಗ ಕನವರಿಸಿದ್ದಳಾ? ಅಮ್ಮ ಯಾರ ಬಳಿಯೂ ಮನಸ್ಸು ಬಿಚ್ಚಿಟ್ಟವಳಲ್ಲ, ಅಮ್ಮನಿಗೆ ಸಂಬಂಧಪಟ್ಟವರು, ಸಂಬಂಧ ಇಲ್ಲದವರು ಕಣ್ಣೀರು ಸುರಿಸುತ್ತಿದ್ದರು. ಅವಳ ಕಣ್ಣುಗಳು ಒಣಗಿ ಹೋಗಿದ್ದವು, ಮಳೆಯ ಸಂಗ ತೊರೆದು ಬತ್ತಿದ ಕೊಳಗಳಂತೆ. ಆದರೆ ಅವಳ ಎದೆ ಭಾರವಾಗಿತ್ತು. ಕೊನೆಯ ಮಳೆಗಾಲವೂ ಮುಗಿದುಹೋಯಿತು ಅನ್ನಿಸಿತು.

ಅಮ್ಮನ ಚಿತೆ ಉರಿಯುತ್ತಿದ್ದಾಗ 'ಈಗ ಮಳೆ ಬರಬಾರದೇ' ಎಂದುಕೊಂಡಳು. ಪಕ್ಕ ನಿಂತಿದ್ದ ಆತ 'ಅತ್ತು ಬಿಡು ಮಗಳೇ, ಮನಸ್ಸು ಹಗುರ ಮಾಡಿಕೊ' ಎಂದ. ಆತನ ಕಣ್ಣುಗಳನ್ನು ನೋಡಿದಳು. ಆ ಕಣ್ಣುಗಳು ದೃಷ್ಟಿ ಬದಲಿಸಿದವು.

'ಅಮ್ಮ ನನ್ನನ್ನು ಕ್ಷಮಿಸಿಬಿಡು' ಎಂದು ಬಸ್ಸಿನಲ್ಲಿ ಕೂತವಳು ಹೇಳಿಕೊಂಡಳು. ರಾತ್ರಿ ಕನಸಿನಲ್ಲಿ ಅಮ್ಮ ಬಂದಳು. 'ಕ್ಷಮಿಸುವ ಮಾತೆಲ್ಲಿಂದ ಬಂತು ಮಗಳೇ, ಸೆಟೆದುಕೊಂಡಿದ್ದವಳು ನೀನು. ಇಷ್ಟಕ್ಕೂ ಅಮ್ಮಂದಿರಿಗೆ ಕೋಪ ಮಾಡಿಕೊಳ್ಳುವ

ಹಕ್ಕಾದರೂ ಎಲ್ಲಿದೆ?' ಥಟ್ಟನೆ ಎಚ್ಚರವಾಗಿತ್ತು. ಮತ್ತೆಂದೂ ಅಮ್ಮ ಸಿಕ್ಕುವುದಿಲ್ಲ ಅನ್ನಿಸಿತು. ಅರ್ಧರಾತ್ರಿಯಲ್ಲಿ ಅಳುತ್ತಾ ಕೂತಿರುವ ತನ್ನೊಂದಿಗೆ ಅಮ್ಮನೂ ಕೂತು ಅಳುವಂತಿದ್ದರೆ ಎಷ್ಟು ಚೆನ್ನಾಗಿತ್ತು ಅನ್ನಿಸಿತು. ಒಂದು ಅಳುವಿಗೆ, ಒಂದು ಬಿಕ್ಕುವಿಕೆಗೆ ಎಲ್ಲವನ್ನೂ ಸರಿ ಮಾಡುವ ಶಕ್ತಿ ಇತ್ತೇನೋ? ಆದರೆ ಮಳೆಗೆ ಮುಖ ತಿರುಗಿಸಿಯಾಗಿತ್ತಲ್ಲ?

ಉಹುಂ, ಮಳೆ ಸೋಲಲಿಲ್ಲ, ಅದು ವೇಷ ಬದಲಿಸಿಕೊಂಡಿತು, ಅವನ ರೂಪದಲ್ಲಿ ಹತ್ತಿರವಾಯಿತು. ಚೆಲುವ ಎನ್ನುವಂತಿಲ್ಲ ಪೆದ್ದನಲ್ಲ ಮಾತುಗಾರ ಅನ್ನುವಂತಿಲ್ಲ ಅವನ ಮೌನ ವಿಶಿಷ್ಟವಾಗಿತ್ತು. ಅವನು ಅವಳ ಬಯಸಿದ, ಅವಳು ನಿರಾಕರಿಸಲಿಲ್ಲ ಅವಳಿಗೆ ಮಳೆಯ ಹಂಗು ಬೇಕಿರಲಿಲ್ಲ ಅವನಲ್ಲಿ ಬೇಡಿಕೆಗಳಿರಲಿಲ್ಲ, ಒಬ್ಬರಿಗೊಬ್ಬರು ಇಷ್ಟವಾದರು. ಹತ್ತಿರವಾದರು.

ಕೈಕೈ ಹಿಡಿದು ಊರುದಾರಿಗಳನ್ನು ಸವೆಸಿದರು. ಷಾಪಿಂಗ್ ಕಾಂಪ್ಲೆಕ್ಸ್ ಮಲ್ಟಿಪ್ಲೆಕ್ಸ್‌ಗಳಲ್ಲಿ ಮನಸ್ಸು ಹಂಚಿಕೊಂಡರು. ಒಬ್ಬರ ಕ್ರೆಡಿಟ್ ಕಾರ್ಡ್ ಉಜ್ಜಿಸಿ ಮತ್ತೊಬ್ಬರು ಬಟ್ಟೆ ಕೊಂಡರು. ಒಂದೇ ಐಸ್ ಕ್ರೀಂ ಇಬ್ಬರಿಗೂ ಸಾಕಾಯಿತು. ಕೊನೆಗೆ ಒಂದೇ 'ಫ್ಲಾಟ್ ನಲ್ಲಿ ಇರಲು ನಿರ್ಧರಿಸಿದರು. ಅವಳಿಗೆ ಅಮ್ಮನ ನೆನಪಾಗದಷ್ಟು ವೇಗವಾಗಿ ಕಾಲ ಓಡುತ್ತಿತ್ತು. ಅವಳು ಅವನ ಪಾಲಿನ ಭೂಗೋಳ, ಚರಿತ್ರೆ, ವರ್ತಮಾನ? ಭವಿಷ್ಯತ್ತು? ಆ ಬಗ್ಗೆ ಇಬ್ಬರೂ ಯೋಚಿಸಲಿಲ್ಲ.

"ಆರು ತಿಂಗಳು ಅಷ್ಟೇ. ಐದು ತಿಂಗಳಿಗೆ ಪ್ರಾಜೆಕ್ಟ್ ಮುಗಿದರೂ ಮುಗಿದೀತು. ಆಮೇಲೆ ಒಂದು ದಿನವೂ ಅಲ್ಲಿರುವುದಿಲ್ಲ ಎಂದು ವಿಮಾನ ಹತ್ತುವ ಮುನ್ನ ಹೇಳಿದ್ದ. ಅಷ್ಟೊಂದು ಸಮಾಧಾನ, ಸಮಜಾಯಿಷಿ ನೀಡುವ ಅಗತ್ಯ ಅವನಿಗಿತ್ತೆ? ಅವನು ವಿಮಾನ ಹತ್ತಿದ ಎರಡು ದಿನಗಳ ನಂತರ ಯೋಚಿಸತೊಡಗಿದಳು.

ನಿರುಪದ್ರವಿ ಹಗಲು ತನ್ನ ಪಾಡಿಗೆ ಕಳೆದುಹೋಗುತ್ತಿತ್ತು. ರಾತ್ರಿ ನಿದ್ದೆಯಿಲ್ಲದೆ ಹೊರಳಾಡುವುದು ಅವಳಿಗೆ ಯಾತನೆ ಅನ್ನಿಸುತ್ತಿತ್ತು. ಒಂದು ರಾತ್ರಿಯಿಡೀ ಹೊರಳಿ ಬೆಳಗ್ಗೆ ಮಂಪರಿಗೆ ಜಾರಿದವಳು ಕನಸು ಕಂಡಳು. ಅವಳು ಮಲಗಿದ್ದ ಮನೆ ಬಯಲಾಗಿ, ಮನೆಯ ಸೂರು ಆಕಾಶವಾಗಿತ್ತು. ಅವನು ಆಕಾಶದಲ್ಲಿ ಮೂಡಿಬಂದ, ಮೋಡವಾದ, ಮಳೆಯಾದ ಹನಿಯಾಗಿ ತನ್ನತ್ತ ಸಾಗಿಬಂದ. ಅಪ್ಪಿಕೊಂಡ. ಮೈಯೆಲ್ಲ ಒದ್ದೆ ಕಚಗುಳಿ. ಕಣ್ಣುಬಿಟ್ಟರೆ ಮನೆ ಗೋಡೆ ಯಾವುದೂ

ಬದಲಾಗಿಲ್ಲ, ಹೊರಗೆ ಸೂರ್ಯ ಬಲಿಯುತ್ತಿದ್ದಾನೆ.

"ಅರೆ, ಹೌದಲ್ಲವಾ, ಅವನೂ ಕೂಡ ಮಳೆಯೇ ಅಲ್ಲವಾ? ಮಳೆಯಿಂದ ದೂರವಾಗು ಹೋಗಿ ಮಳೆಯನ್ನೇ ಕೂಡಿದಂತಾಯಿತು ಅಲ್ಲವಾ?', ಈ ಜಿಜ್ಞಾಸೆಯಲ್ಲೇ ಸಂಜೆಯಾಯಿತು ಕತ್ತಲಾಯಿತು, ಬೆಳಗೂ ಆಯಿತು. ಅದು ಮಳೆಯ ಬೆಳಗಾಗಿತ್ತು. ಸದ್ಯ, ಅದು ವಾರದ ಕೊನೆಯ ದಿನ.

ಈ ಬಾರಿಯೂ ಮಳೆ ಅವಳನ್ನು ಅಂಜಿಸಿತು. ಬಾಗಿಲು ಭದ್ರಪಡಿಸಿದಳು. ಕಿಟಕಿಗಳನ್ನು ಮುಚ್ಚಿದಳು. ಟೀವಿ ವಾಲ್ಯೂಂ ತಾರಕಕ್ಕೇರಿಸಿದಳು. ಊಹುಂ, ಮಳೆಯನ್ನು ನಿರಾಕರಿಸಲಾಗುತ್ತಿಲ್ಲ, ಅವಳು ಹೊಸಿಲು ದಾಟಿದ್ದೇ ಆಗ. ಟೆರೇಸಿಗೆ ಓಡಿದ್ದೇ ಆಗ. ತಾನು 'ಮಳೆಯ ಮಗಳು ಎಂಬುದವಳಿಗೆ ನೆನಪಾದದ್ದೇ ಆಗ.

ಮಳೆಯೇನು ಸುಮ್ಮನೆ ಸುರಿಯಿತಾ? ಆ ಮಳೆಯಲ್ಲಿ ನೆನಪುಗಳಿದ್ದವು. ನೋವುಗಳಿದ್ದವು. ಅಮ್ಮನಿದ್ದಳು. ಅವನೂ ಇದ್ದ ಚಿತ್ರದ ಚೌಕಟ್ಟಿನಿಂದ ಹೊರಬಂದ ಅಮ್ಮ ಹೊಸಬಳಾಗಿ ಕಂಡಿದ್ದಳು. ಅವಳ ಪ್ರೀತಿ ಮಾತ್ರ ಮುಕ್ಕಾಗಿರಲಿಲ್ಲ ಕೊನೆಯವರೆಗೂ, ಬದಲಾದದ್ದು ನಾನು. ಅಮ್ಮನ ವ್ಯಕ್ತಿತ್ವವನ್ನು ನಿರಾಕರಿಸಿದೆ. ಅವಳ ಭಾವನೆಗಳನ್ನು ಅವಮಾನಿಸಿದೆ. ಈ ವಿರೋಧದ ಹಾದಿಯಲ್ಲಿ ನನ್ನ ಸ್ವಾತಂತ್ರ್ಯದ ಪರಿಯ ಅಗಲಿಸಿಕೊಂಡೆ. ಅಮ್ಮನನ್ನು ನಿರಾಕರಿಸುತ್ತ ಅಮ್ಮನೇ ಆಗಿದ್ದೆ. ಅಮ್ಮನ ಸಾವಿಗೆ ಕಾರಣವೂ ಆಗಿದ್ದೆನೇನೊ? ಮಾನಸಿಕವಾಗಿಯಂತೂ ಅವಳನ್ನು ಘಾಸಿಗೊಳಿಸಿದ್ದೆ. ಮಳೆ ಸುರಿಯುತ್ತಿತ್ತು; ನೆನಪುಗಳ ತೊಳೆಯುತ್ತಾ, ಬೆಳಗುತ್ತಾ.

ಫೋನು, ಕಂಪ್ಯೂಟರ್ ಸೊಲ್ಲಡಗಿತ್ತು. ಅವನನ್ನು ಸಂಪರ್ಕಿಸುವ ಎಲ್ಲ ದಾರಿಗಳೂ ಮುಚ್ಚಿಹೋಗಿದ್ದವು. ಮಳೆಯ ಅಬ್ಬರಕ್ಕೆ ನಾಗರಿಕ ಬದುಕು ಬುಡಮೇಲಾಗಿತ್ತು. ಟೀವಿ ಮಾತ್ರ ತನ್ನ ಪಾಡಿಗೆ ತಾನು ಬಣ್ಣಗಳ ಚೆಲ್ಲುತ್ತಿತ್ತು. ಚಾನಲ್‌ನಿಂದ ಚಾನಲ್‌ಗೆ ಜಿಗಿಯುವ ಆಟದಲ್ಲಿ ತೊಡಗಿದಳು. ಸಂಗೀತದ ಅಬ್ಬರಕ್ಕೆ ಉನ್ಮತ್ತಳಾಗಿ ಕುಣಿಯುವ ತನ್ನದೇ ವಯಸ್ಸಿನ ಹುಡುಗಿ–ಹುಡುಗ, ಹೊಂಚುಹಾಕಿ ಜಿಂಕೆಯ ಗೋಣು ಮುರಿಯುವ ಹುಲಿ, ಹತ್ತಿಕ್ಕಿದ ತುಂಟ ಮನಸ್ಸಿನ ಚಿತ್ರಗಳಂತೆ ಕಾಣುವ ಕಾರ್ಟೂನ್ಗಳು, ತೆಂಡೂಲ್ಕರ್ ಬೌಂಡರಿಗೆ ಹುಚ್ಚೆದ್ದು ಕುಣಿಯುವ ಸ್ಟೇಡಿಯಮ್ಮು, ಯಾವುದೋ ಪೋಲಿ ಫಿಲ್ಮು..... ಆಟ

ಕೊನೆಗೊಂಡದ್ದು ಮಳೆಯ ತಾಂಡವ ಕಣ್ಣಿಗೆ ಬಿದ್ದಾಗ ಮಳೆಯ ಕಾವಿಗೆ ಕರಗಿದ ನಗರ ನೀರಾಗಿತ್ತು. ಕರಿ ರಸ್ತೆಗಳು ಜಲರೂಪ ತಾಳಿದ್ದವು. ಸದ್ದಡಗಿದ ವಾಹನಗಳು ನಿಂತಲ್ಲೇ ನಿಂತಿದ್ದವು. ವಾಹನಗಳ ಮಾಲೀಕರು, ಪ್ರಯಾಣಿಕರು ಜೀವ ಉಳಿಸಿಕೊಳ್ಳಲು ಸನಿಹದ ಕಟ್ಟಡಗಳಲ್ಲಿ ಆಸರೆ ಪಡೆದಿದ್ದರು. ವಾಹನಗಳಲ್ಲಿ ಸಿಕ್ಕಿಬಿದ್ದವರನ್ನು ರಕ್ಷಿಸಲು ಒಂದು ಗುಂಪು ಹೆಣಗುತ್ತಿತ್ತು. ಮರಗಳ ಮೇಲೇರಿದ್ದವರನ್ನು ತೆಪ್ಪದ ಮೂಲಕ ಸುರಕ್ಷಿತ ಸ್ಥಳಗಳಿಗೆ ಮುಟ್ಟಿಸಲಾಗುತ್ತಿತ್ತು. ಇದು ಶತಮಾನದ ಮಳೆ ಎಂದು ಹವಾಮಾನ ಇಲಾಖೆ ಅಧಿ ಕಾರಿ ದಾಖಲೆಗಳನ್ನು ಒಪ್ಪಿಸುತ್ತಿದ್ದ, ದೂರವಾಣಿ ಜಾಲದ ನಡು ಮುರಿದಿತ್ತು.

ಆ ಅಮ್ಮನ ಮಗಳು ಕಾಲೇಜಿಗೆ ಹೋಗಿದ್ದಳು. ಆಕೆಯ ಗಂಡ ಕಚೇರಿಗೆ ಹೋಗಿದ್ದ ಬರುವಾಗ ಮಲ್ಲಿಗೆ ತರುತ್ತೇನೆ ಎಂದಿದ್ದ. ಆತನ ಹೆಂಡತಿ ಆಸ್ಪತ್ರೆಯ ಹೆರಿಗೆ ವಾರ್ಡ್‌ನಲ್ಲಿ ನೋವು ತಿನ್ನುತ್ತಿದ್ದಳು. ಊರಿಗೆ ಹೋಗಿದ್ದವರು ಇಂದು ವಾಪಸ್ಸಾಗುವವರಿದ್ದರು. ಕೊಟ್ಟಿಗೆಯಲ್ಲಿ ಕಟ್ಟಿದ ಎಮ್ಮೆ ಹಸುಗಳ ಆರ್ತನಾದ ಮಳೆಯಿಂದಾಗಿ ಮನೆಯೊಳಗೇ ಸಿಕ್ಕುಬಿದ್ದ ಹೆಣ್ಣುಮಗಳ ಜೀವ ಹಿಂಡುತ್ತಿತ್ತು.

ಆತಂಕದ ಕೂಗುಗಳಿಗೆ ಭರವಸೆಯ ಮಿಂಚು ತುಂಬುವವರು ಯಾರು? ಎಲ್ಲೆಡೆ ನೀರು ನೀರು ನೀರು. ಮಳೆ ಜೀವಸೆಲೆಯೂ ಹೌದು; ಮೃತ್ಯುಮುಖಿಯೂ ನಿಜ.

ಟೀವಿಯೂ ಮೌನವಾಯಿತು. ನಗರ ಕತ್ತಲಲ್ಲಿ ಮುಳುಗಿತು. ಮಾನವೀಯತೆ ಮಾತ್ರ ಎಚ್ಚರವಾಗಿತ್ತು.

ಮಳೆಯ ಅಬ್ಬರದಲ್ಲಿ ಒಂದು ಹಗಲು ಒಂದು ಇರುಳು ಕಳೆದುಹೋಗಿದ್ದವು. ಬದುಕು ಮತ್ತೆ ಚೇತರಿಸಿಕೊಳ್ಳತೊಡಗಿತು. ಅಮೃತಹಸ್ತ ಸ್ಪರ್ಶವಾದಂತೆ ಫೋನು ಕಿಂಕಿಣಿಸತೊಡಗಿತು. ಮನೆಗಳಲ್ಲಿ ದೀಪಗಳು ಬೆಳಕು ತುಂಬತೊಡಗಿದವು. ಕಾಲೇಜಿಗೆ ಹೋಗಿದ್ದ ಮಗಳು ಮನೆಗೆ ಮರಳಿದ್ದಳು. ಕಚೇರಿಗೆ ಹೋಗಿದ್ದ ಗಂಡ ಇನ್ನೂ ಬಂದಿರಲಿಲ್ಲ, ಅದು ಸಾವುನೋವಿನ ದಾಖಲಾತಿಯ ಸಮಯ.

ಎಚ್ಚರವಾದವಳೇ ಕಂಪ್ಯೂಟರ್‌ಗೆ ಜೋತುಬಿದ್ದಳು. ಇಮೇಲ್ ಓಪನ್ ಆಗಲಿಲ್ಲ, ಸರ್ವರ್ ಡೌನು. ಅಭ್ಯಾಸಬಲದಂತೆ ತಾನು ನಿತ್ಯ ಓದುವ ವೆಬ್‌ಸೈಟ್ ಓಪನ್ ಮಾಡಿದಳು. ಮಳೆಯದೇ ಸುದ್ದಿ ನಿರಾಸಕ್ತಿಯಿಂದ ಮೌಸ್ ಆಡಿಸುತ್ತಿದವಳ

ಕೈಯನ್ನು ಶೀರ್ಷಿಕೆಯೊಂದು ತಡೆದು ನಿಲ್ಲಿಸಿತು. ಓದುಗರು ಮಹಾಮಳೆಯ ಕುರಿತು ತಮ್ಮ ತವಕ ತಲ್ಲಣಗಳನ್ನು, ಅನುಭವಗಳನ್ನು ಹಂಚಿಕೊಂಡಿದ್ದ ವೇದಿಕೆಯದು.

ಒಬ್ಬಾತ ಸಾವಿನ ಕದ ಮುಟ್ಟಿ ಬಂದಿದ್ದ ಮತ್ತೊಬ್ಬಾತ ರಾತ್ರಿಯಿಡೀ ಮರದ ಮೇಲೆಯೇ ಕುಳಿತಿದ್ದ. ಪ್ರಾಣದ ಹಂಗು ತೊರೆದು ನೀರುಪಾಲಾಗುತ್ತಿದ್ದವರನ್ನು ರಕ್ಷಿಸಿದ ಸ್ವಯಂಸೇವಕರ ಗುಣಗಾನ ಅಲ್ಲಿತ್ತು. ಮಳೆಯ ಹೊತ್ತು ಅನಾವರಣಗೊಂಡ ಮಾನವೀಯತೆಯ ಚಿತ್ರಗಳಿಗೆ ಓರ್ವ ಓದುಗ ಧನ್ಯವಾದ ಅರ್ಪಿಸಿದ್ದ, ನಗರದಲ್ಲಿನ ಹೆತ್ತವರು, ಬಂಧುಗಳ ಕ್ಷೇಮಸಮಾಚಾರದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದ ಅನಿವಾಸಿಗಳ ಪತ್ರಗಳಿದ್ದವು.....

ಸ್ಕ್ರೋಲ್ ಮಾಡುತ್ತಿದ್ದವಳು ಒಮ್ಮೆಗೇ ಕುರ್ಚಿಯ ತುದಿಗೆ ಕೂತಳು. ಕಣ್ಣು ರೆಪ್ಪೆಗಳ ಚಲನೆ ಸ್ತಬ್ಧವಾಯಿತು. ಉಸಿರಾಟ ತೀವ್ರವಾಯಿತು. ಅಲ್ಲಿತ್ತು ಅವನ ಪತ್ರ.

"ನನ್ನ ಪತ್ನಿಯ ಕುರಿತು ಆತಂಕವಾಗಿದೆ. ಅಲ್ಲಿ ಭಾರೀ ಮಳೆ ಸುರಿಯುತ್ತಿದೆಯಂತೆ. ಅವಳು ಒಬ್ಬಳೇ ಇದ್ದಾಳೆ. ಹೇಗಿದ್ದಾಳೋ ಏನೋ? ಫೋನ್ ಸಂಪರ್ಕಕ್ಕೆ ಸಿಗುತ್ತಿಲ್ಲ ಇಮೇಲ್‌ಗಳಿಗೆ ಉತ್ತರಿಸುತ್ತಿಲ್ಲ, ಪರಿಚಯದವರನ್ನು ಸಂಪರ್ಕಿಸಲೂ ನನಗೆ ಸಾಧ್ಯವಾಗುತ್ತಿಲ್ಲ, ಫ್ಲೀಸ್, ಯಾರಾದರೂ ಹೆಲ್ಪ್ ಮಾಡ್ತೀರಾ... ನನ್ನವಳ ಕುಶಲ ತಿಳಿಸ್ತೀರಾ...'

ಕಂಠಪಾಠವಾಗುವಷ್ಟು ಸಾರಿ ಪ್ರಿಂಟ್‌ಔಟ್‌ನಲ್ಲಿನ ಪದಪದಗಳನ್ನು ಓದಿದ್ದಳು. ಸಣ್ಣದಾಗಿ ಮಡಚಿ ರವಿಕೆಯೊಳಗಿಟ್ಟುಕೊಂಡಳು. ಇನ್ನೂ ಮಳೆ ಜಿನುಗುತ್ತಿದೆಯಾ? ಟೆರೇಸಿಗೆ ಓಡಿದಳು ಮಳೆ ನಿಂತಿತ್ತು; ಎದೆಯೊಳಗೆ ಮಳೆ ಸುರಿಯತೊಡಗಿತು.

ಅವನು ಬಂದಮೇಲೆ, ಅವನೊಂದಿಗೆ ಊರಿಗೆ ಹೋಗಿ ನಾಲ್ಕು ದಿನ ಇದ್ದು ಬರಬೇಕು ಎಂದುಕೊಂಡಳು.

## ಓದು ಪಠ್ಯ

# ಮಳೆ ದೇವೇಂದ್ರ

**ಸಂಗ್ರಹ : ಎಚ್.ಎಲ್. ನಾಗೇಗೌಡ**

ಒಂದು ಪಟ್ಣ ಅಂತೆ. ಆ ಪಟ್ಟದಲ್ಲಿ ಒಬ್ಬ ದೊರೆ ಅಂತೆ. ಆ ದೊರಿಗೆ ಆರು ಜನ ಗಂಡು ಮಕ್ಳು ಅಂತೆ. ಆರು ಜನ ಗಂಡುಮಕ್ಳು ಆದ್ರೆ ಒಬ್ಬಳೇ ಒಬ್ಳು ಮಗಳಂತೆ. ಕಡೇವ್ಳು. ಒಬ್ಬಳೇ ಒಬ್ಳು ಮಗಳಾದ್ರೆ ಆ ಮಗಳಿಗೆ, ನರಮನಸ್ರು ನೋಡಂಗಿಲ್ಲ. ಅಯಮ್ನ ನರಮನಸ್ರು ನೋಡಂಗಿಲ್ಲ. ಹನ್ನೆರಡು ಅಂತಸ್ತಿನ ಮಾಡಿ ಮೇಲೆ ಮಡಗ್ನಿಟ್ಟು ರಾಜ್ರು. ಅವಾಗ ರಾಜರು ಮಡಿಗ್ಬಿಟ್ಟು ಮಗಳ, ಹೂವ ಮುಡಿಸೋಕೆ ಒಬ್ರು. ತಲೆ ಬಾಚೋದೆ ಒಬ್ರು. ಊಟ ತಕೊಂದೋಗೋವ್ರೆ ಒಬ್ರು. ಹಾಸಾಕೇ ಒಬ್ರು ಗುಡಿಸಿವ್ರೇ ಒಬ್ರು. ನರಮಾನವ ಸಬ್ದ ಅನ್ನೋದಿಲ್ಲ ಮಗಳಿಗೆ, “ಏನಪ್ಪಾ ಎಷ್ಟು ದಿನ ಆದ್ರೂ ನನ್ನ ಇದೇ ತರ ನೀನು ಹನ್ನೆರೆಡು ಅಂತಸ್ತಿನ ಮಾಡಿ ಮೇಲೆ ನೀನು ಮಡಗ್ಬಿಟ್ರೇ, ನಾನು ನರಮಾನ್ರು ಅನ್ನೋರ ನೋಡಂಗಿಲ್ಲ ಭಾಳ ಬೇಸರಿಕೆ ಆಗ್ತಾ ಐತೆ. ಈ ಊರಲ್ಲಿ ಒಂದು ಕಥೆನಾದ್ರೂ ಮಾಡಿಸಬಾರ್ದಾ ಅಂತ ಮಗಳು ಅಪ್ಪ ಅವರ ಕೇಳಿದ್ಲು, ಅಯಮ್ಮಾ. “ನಾಳೆ ಮಾಡಿಸೋಣ’ ಅಂತ ತಂದೆ ದಾಸ್ರನ್ನ ಕರಿಸ್ಬಿಟ್ಟು ಕಥೆ ಮಾಡಿಸೋಕೆ ಏರ್ಪಾಡು ಮಾಡಿದ್ರು ರಾಜ್ರು.

ರಾಜ್ರ ಮನೆ ಮುಂದೇನೆ ಕಥೆ ಮಾಡಿಸೋವಾಗ ಮಾಡಿಸೋಕೆಲ್ಲಾ ಏರ್ಪಾಟು ಮಾಡಿದ್ರು. ಕಥೆ ಮಾಡೋ ಹೊತ್ತೆ ಇಳಿದು ಬಂದ್ರು. ಹನ್ನೆರಡು ಅಂತಸ್ತಿನಿಂದ, ಮಾಡಿ ಮೇಲಿಂದ ಕೆಳಕ್ಕೆ ಇಳಿದು ಬಂದು ಕುಂತ್ಕಂಡು, ಕುಂತ್ಕಣೋ ವೊತ್ತಿಗೆ ಎಲ್ಲೂ ಇಲ್ಲದ ಮಳೆ ಬಂದ್ದಿತ್ತು. ಎಲ್ಲೂ ಇಲ್ಲದ ಮಳೆ ಬರೋವಾಕ್ಕೇನೆ, ಅಬ್ಬಬ್ಬಾ ಎಷ್ಟೋ ವರ್ಷಗಳಿಂದ ನಾನು ಕಥೆ ಮಾಡೋವಕ್ಕೆ ನಮ್ಮೂರಿಗೆ ದೊಂಬರು ಬಂದು ಎಲ್ಲೂ ಇಲ್ಲದ ಮಳೆ ಬಂದ್ದಿತ್ತು. ಇವತ್ತು ಬರೋ ದೇವೆಂದ್ರರಾಯ ನಾಳೇ ಆದ್ರೂ ಬರಾದ್ದಾಗಿತ್ತಾ, ಅಂತ ಈಯಮ್ಮ ಅಂದ್ಲು ಮಗು, ಅನ್ನೋವಾಕ್ಕೆ ದೊಂಬು, ಕಥೆ ಅಡ್ಮಿಟ್ರು. ಅವತ್ತೂ ದಿನ ಆಗೋಗಿಬಿಟ್ಟು, ಅವತ್ಲೂ ದಿನ ಆಗೋಗಿ ಬಿಟ್ತು. ಆವತ್ತು ದಿನ ಕಥೆ ಆಡಾದ ಮೇಲೆ

ಹೊರಟೋಗಿಬಿಟ್ರು. ಮಗ್ಳು ಹನ್ನೆರಡು ಅಂತಸ್ತಿನ ಮಾಡಿ ಮೇಲಿದ್ದ ಮಗಳಿಗೆ ಮಾರನೇ ರಾತ್ರೆ ವೋಗಿ ದೇವೇಂದ್ರರಾಯ ಬಾಗಿಲು ತಟ್ಟಿದ.

ಏನಪ್ಪ ಇಲ್ಲಿ ನರಮಾನವ್ರ ಸಬ್ಬನೇ ಇಲ್ಲ. ಈವತ್ತು ಬಾಗ್ಲು ತಟ್ರಾ ಅವ್ರ ಅಂದ್ಯಾಟ್ಟು ಯಾರು ನೀವು ? ಅಂತ ಕೇಳಿದ್ದು, ಈವತ್ತು ಬರೋ ದೇವೇಂದ್ರರಾಯ ನಾಳೇ ಬಾ ಅಂದ್ಯಲ್ಲಾ ನಾನು, ಅಂದ್ರು. ಏನಪ್ಪಾ ಈವಾಗ ಮಾಡೋದು? ಒಳ್ಳೆ ಸಿಕ್ಕಾಕ್ಕೊಂಬಿಟ್ನೇ ನಾನು? ಹೇಳೋಳು ಹೇಳ್ಬಿಟ್ಟೆ. ಈವಾಗ ದೇವೇಂದ್ರರಾಯ ಬಂದ್ಬಿಟ್ರು ಕದ ತೆಗಿದೇ ಹೋದ್ರೆ ತಪ್ಪು ನಂದಾಗೋಗ್ಬಿಡ್ತದೆ. ಅಂತ ಯೋಚ್ನೆ ಮಾಡ್ಲಾ ಹತ್ತು ನಿಮಿಷ ನಿಂತ್ಕೋಡ್ಲು. ಆಮೇಲಿಂದ ಮೇಲೆ ಕದತೆಗೆದ್ಲು. ಕದ ತೆಗೆದ ಕೂಡಲೆ ಬಂದ ದೇವೇಂದ್ರರಾಯ ಬಂದು ಬೇಕಾದಂಗೆ ಪಗಡೇ ಆಟಕ್ಕೆ ಕುಂತ್ಕೊಂಡ್ರು. ದಾಯಿ–ಪಗಡೆ ಆಡ್ದ್ರು. ಊಟ ಉಪಚಾರ ಮಾಡಿದ್ರು. ಐದು ಗಂಟೆ ಹೊತ್ತಾಯ್ತು, ಬೆಳಗಿನಜಾವ ಎದ್ಬಿಟ್ಟು ಹೋಗ್ಬಿಟ್ರು.

ಅವ್ರ ದೇಶಕ್ಕೆ ಅವ್ರು. ಇದೇ ರೀತಿ ಮಾಡ್ತಾ ಇದ್ರ. ಇದೇ ರೀತಿ ಫಸ್ಟು ದಿನ ಮಾಡಿ ಆನಂದ ಐಶ್ವರ್ಯದಿಂದ ಇದ್ರು.

ಇರೋ ಹೊತ್ಗೆ "ನೀವೀಗೆ ಇದ್ರೆ ಆಗೋಗ್ಯದ ? ಏನಾನ ನಿಮ್ಮ ದೇಶದ್ದು ನಂಗೊಂದು ಉಡುಗೊರೆ ತಂದ್ಕೊಡ್ಬೇಕು" ಅಂತ ಅಂದ್ಲು. ಏನು ಉಡುಗೊರೆ ತಂದ್ಕೋಡ್ತಿರಿ? ನಿಮ್ಮ ಗುರ್ತು ನಂಗೆ ಬೇಕು ಅನ್ನೋ ಹೊತ್ಗೆ, ಪೀತಾಂಬರದ ರವಿಕೆ ಹೊಲಿಸಿದ್ರು, ಅವ್ರ ದೇಸದಾಗೆ ಹೊಲಸಿಬಿಟ್ಟು, ಟ್ರಂಕನಾಗೆ ಮಡಿಗಿ, ಮಡಚಿ ಬೇರೆ ದೇಶಕ್ಕೆ ಮಳೆ ನಡೆಸಕ್ಕೆ ವೋಗ್ಬಿಟ್ಟು ದೇವೆಂದ್ರ.

ಬೇರೆ ದೇಶಕ್ಕೆ ಮಳೆ ನಡೆಸಕ್ಕೆ ಹೋದಾಗ ಈ ಜಾಕಿಟ್ಟು ಟ್ರಂಕನಲ್ಲಿ ಮಡಗಿದ್ದು ಸೂರ ಚಂದ್ರ ಹೊಳೆದಂಗೆ ಹೊಳೆತಿತ್ತು. ಈಚಕ್ಕೆ ಬೆಳಕು ಹೊಡೀತಾ ಇತ್ತು. ನೋಡಿದ್ರು. ತೆಗ್ದ್ಗ ನೊಡೋವಾಕ್ಕೆ ಅದರೊಳಗೆ ರವಿಕೆ ಇತ್ತು. ಇಷ್ಟು ಪೀತಾಂಬರದ ರವಿಕೆ ಹೊಲಿಬೇಕಾದ್ರೆ ಅವಳು ಇನ್ನೆಷ್ಟು ಸುಂದರವಾಗಿದ್ದೇಕು ಅಂತ ಯೋಚ್ನೆ ಮಾಡ್ಬಿಟ್ಟು ದೇವೇಂದ್ರನ್ ಹೆಂಡ್ತಿ ಆದವ್ಳು.

ದೇವೆಂದ್ರನ ಹೆಂಡ್ತಿ ಯೋಚೆ ಮಾಡಿಟ್ಟು, ವಾದ್ಯದ ಬೀದಿಗೆ ಹೋಗಿ ವಾದ್ಯಾರ ಕರಿ ನಿನಗೆ ಒಂದು ಮರ ಚಿನ್ನ ಕೊಡ್ತೀನಿ, ಒಂದು ಮರ ಬೆಳ್ಳಿ ಕೊಡ್ತೀನಿ, ನಾನು ಹೇಳ್ದಾಗೆ ಸಣ್ಣ ಸೂಜಿ ಅರ್ಧಪಾವು ಸೂಜೀನ ಮಾಡ್ತಿಟ್ಟು

ನೀನು ಈ ರವಿಕೆಗೆ ನೇಯ್ದಿರೋ ನೆಯ್ದೆ ಒಳಗೆಲ್ಲ ಸಸ್ಸು ಬಿಡೋಕು, ಅಂತ ಹೇಳಿದ್ಲು. ಆಯ್ತು ಅದೇ ತರ ಮಾಡಿಕೊಡ್ತೀವಿ. ಸಸ್ಪು ಬಿಟ್ರು. ಸದ್ದು ಬಿಟ್ಟು ಪುನಃ ತಂದು ರವಿಕೇನ ಅದೇ ತರ ಪಟ್ಣ ಕಟ್ಟು ಬಿಟ್ಟು ಟ್ರಂಕಲ್ಲಿ ಅಂಗೇ ಮಡಿಗ್ಬಿಟ್ರು.

ಟ್ರಂಕಲ್ಲಿ ಅಂಗೇ ಮಡಗ್ದಾಗ ಆ ಹೆಂಡ್ತಿ, ಅದೇ ತರ ಮಡಿಗ್ಲಿಟ್ರು ಹೆಂಡ್ತಿ, ಗಂಡಂಗೆ ಗೊತ್ತಾಗ್ದಂಗೆ. ಈ ರವಿಕೆ ಹಿಂಗೆ ಅದಲ್ಲ ರವಿಕೆ ಅಂಗೆ ಪಟ್ಣದಲ್ಲಿದ್ದುದ್ದು ನೋಡ್ಬಿಟ್ಟು ಅರೆರೇ ನಾನು ಕಳಿಸ್ಲೇ ಇಲ್ಲ, ನಾನು ಇಲ್ಲೇ ಇಳ್ಕೊಂಬಿಟ್ಟಿದ್ದೀನ ರವಿಕೇನಾ ಹೊಲ್ಸಿ ಎಷ್ಟೋ ದಿನ ಆಗೋಯ್ತಲ್ಲ ಅಂತ ದೇವೆಂದ್ರ ಏನ್ಮಾಡಿದ್ರು ಬಂದು ರವಿಕೆ ತೆಗ್ದು ಕಾಗೇನ ತರಿಸಿ, ಕಾಗೆ ಕಾಲಿಗೆ ಕಟ್ಟಿ ಇಂಥ ಪಟ್ಣ, ಇಂಥ ರಾಜನ ಮಗ್ಳು, ಇಂಥ ಇದು, ಇಂಗೇ ಹನ್ನೆರಡು ಅಂತಸ್ತಿನ ಮಾಡಿ ಮೇಲೆ ಅವ್ಳೇ, ಕಾರಕಾರನೇ ಹೋಗಿ ನೀನು ಬಡ್ಕೊಂಡು ಅಲ್ಲಿ ಮಾಡಿ ಇಂದ ಕೆಳಗೆ ಬಾಗಿಲತ್ರ ಬಿಟ್ಟು ಬರೇಕು ಈ ಜಾಗಿಟ್ಟು ಅಂತ ಹೇಳಿ ಹೆಸ್ರು ಬರ್ದು ಕಳಿಸ್ಬಿಡ್ತಾನೆ, ದೇವೇಂದ್ರ.

ಇದು ಬಂತು. ಹನ್ನೆರಡು ಅಂತಸ್ತಿನ ಮಾಡಿ ಮೇಲೆ ನಿಂತ್ಕಂತು. ಆ ಪಟ್ಟದೊಳಗೆ ಎಂದು ಕಾರ ಕಾರನೆ ಬಡಕ್ಕೊಳವಾಕ್ಕೆ ಈಚಿಗೆ ಬಾಗಿಲು ತೆಗೆದು ಬಂದ್ಲು. ಏನು ? ಕಾಗೆ

ಇವತ್ತು ಬಡಕ್ಕೊಂತಾ ಅದೇ ಅಂತ ರಾಜನ ಮಗು ಬಂದು ನೋಡಿ. ಪಟ್ಣ ದೊಪ್ಪನೆ ಬಿತ್ತು. ಎಳ್ಕೊಂಡು ನೋಡಿ ಓಹೋ ದೇವೆಂದ್ರ ಕಳಿಸೋದೆ ರವಿಕೆ ಹೇಳೋಗಿದ್ರಲ್ಲ ಉಡುಗೊರೆ ಏನಾರೂ ಕಳಿಸ್ತೀನಿ ಅಂತ. ಇವತ್ತು ಜ್ಞಾಪಕಕ್ಕೆ ಬಂದು ಕಳಿಸಿ ಅಂತ ಹೇಳಿದ್ರು ಹೇಳಿ ತಕ್ಕೊಂಡೋಗಿ ಆ ರವಿಕೇನಾ ಸ್ನಾನ ಮಾಡಿ ಮಡಿಮಾಡಿ ಊಟ ಉಪಚಾರ ತೀರಿಸ್ಕೊಂಡು ರವಿಕೇನ ತೊಳ್ಕೊಂಡ್ರು. ತೊಕ್ಕೊಂಡೋತ್ಗೆ ಮೈಗೆಲ್ಲ ಮೈಯಾದು ಮೈಗೆಲ್ಲ, ಸೂಜಿ ಚುಚೊಂಬಿತ್ತು. ಚುಚೊಂಬಿಟ್ಟು ತೂ ಈಯಮ್ಮನೂಗೆ ಬಾಳ ಕೋಪ ಬಂದ್ಬಿತ್ತು. ದಾದೇರು ನಾಕು ಜನ, ದಾದೇರು ಇದ್ದೋರು ಹತ್ರ ಚಿಮುಟ ತಕೊಂಡು ಎಲ್ಲ ಕೀಳಿಸ್ಬಿಟ್ಟು. ಕೀಳಿಸಿ ಅಳತೆ ಮಾಡೋ ಹೊತ್ತೆ ಅರ್ಧಪಾವು ಸೂಜಿ ಇತ್ತು. ಸೂಜೀನಂಗೆ ತೆಗ್ದು ಬಿಟ್ಟು ಬಲಗಡೆ ಒಳದೊಡೆ ಸೀಳುಬಿಟ್ಟು ಒಳದೊಡೆ ಒಳಗೆ

ಮಡಿಗ್ಬಿಟ್ರು. ಯಾರೂ ಕಾಣ್ಣಂಗೆ, ಗೊತ್ತಾಗ್ದಂಗೆ ದಾರಿದೀರು ಗೊತ್ತಾಗ್ದಂಗೆ.

ಆಮೇಲೆ ಮಾರನೆ ದಿನ ರಾತ್ರಿ ಎಲ್ಲೊ ಯಾವ್ದೋ ದೇಶದಲ್ಲಿ ದೇವೇಂದ್ರ ಮಳೆ ನಡೆಸಿ ವೋಗಿದ್ದ. ಪುನಃ ಬಂದಾ, ಬಂದು ಬಾಗಿಲು ತಟ್ಟೋ ಹೊತ್ತೆ ಬಾಗಿಲು ತೆಗೀಲಿಲ್ಲ. ಒಂದು ಸಲೀ ತಟ್ಟಿದ್ರು ತಗೀಲಿಲ್ಲ, ಎರಡು ಸಲೀ ತಟ್ಟಿದ್ರು ತೆಗೀಲಿಲ್ಲ. ಮೂರನೇ ಸರ್ತಿ ತಟ್ಟಿದ್ರು ತೆಗಿಲಿಲ್ಲ. ಬೇಡ ಅನ್ಯಾಯವಾಗಿ ಕೆಟ್ಟೋಗ್ತಿಯಾ, ಬ್ಯಾಡ ನಾನು ಏನು ಪಾಪ ಮಾಡಿದ್ದು ಬಾಗಿಲು ತೆಗೆದು ಮಾತಾಡೂ ಅಂದ್ರು. ಆದ್ರೂ ತೆಗಿಲಿಲ್ಲ. ಒಂದು ಗುಡುಗು ಗುಡುಗದೇ ಅಂದ್ರೆ ನೀನು ತಲೇ ತಿರಿ ರಪ್ಪನೆ ಬೀಳೋಕು ಅಂದ್ರು. ಅಲ್ಲಿಗೂ ಮಾತಾಡ್ಲಿಲ್ಲ. ಒಂದು ಸಿಡಿಲು ಒಡ್ಡ ಅಂದ್ರೆ ನೀನು ಹನ್ನೆರಡು ಅಂತಸ್ತಿನ ಮಾಡಿ ಮ್ಯಾಗಿರೂ ಗಾಜೆಲ್ಲ ಪುಡಿಪುಡಿ ಆಗ್ಬೇಕು ಅಂದ್ರು. ಆದ್ರೂ ತೆಗಿಲಿಲ್ಲ. ಬ್ಯಾಡ ನಿನ್ನ ನಾಲ್ವರು ಅಣ್ಣ ತಮ್ಮ ದೀರು ಇರೋರು ಜೋಳಿಗೆ ಹೊಡ್ಕೊಂಡು ಹೋಗ್ತಾ ಇದ್ದಾರೆ. ಸಮುದ್ರವಾಗಿ ನೀರು ಹರಿಸೋ ಹಂಗೆ ಮಾಡ್ತೀನಿ ಮಳೆ ಉಕ್ಕಿಸಿ ಅಂದ್ರು. ಅಲ್ಲಿಗೂ ತೆಗೀಲಿಲ್ಲ.

ನಿಮ್ಮ ತಾಯಿ ತಂದೆ ಉಣ್ಣೋ ಊಟದ್ದು ತಟ್ಟೆ ಅರಗಿನ ತಟ್ಟೆ ಗಿಂಡಿ ಚೆಂಬು ಬಂಗಾರ ತೇಳ್ಕೊಂಡು ಹೋಯ್ತಾ ಇದೆ. ಅನ್ಯಾಯವಾಗಿ ಹೋಯ್ತು ಅಂತ ಅವಾಗಾದ್ರೂ ಮಾತಾಡು. ಮಾತಾಡಲ್ಲ.

ನಾಲ್ಕು ಊರಿಂದ ತಿರುಕೊಂಬಂದು, ಊರಿನಾಚೆ ಗುಡಿಸ್ಲು ಹಾಕಿ ಅದರೊಳಗೆ ಭಿಕ್ಷೆ ತಂದು ಇಕ್ಕಿದಿದ್ನೆ ನಾನು ಬಂದು ಕಂಚಿನ ಕೋಳಿ ಬಿಟ್ಟು ಎಗರಿಸೀ ಅಡೀ ಮೇಯಿತಾ ಇರ್ತವೆ. ಆಗಾದ್ರೂ ಮಾತಾಡಲ್ಲ. ಹೋರಿ ಬಿಟ್ಟಿಟ್ಟು ಗುಟ್ಟರಿಕೆ ಹಾಕಿ ನೀವು ಹಾಕಿರೋ ಗುಡಿಸ್ಲನ್ನ ಕೊಂಬು ಒಂದು ಕಡೆ ಒಂದೊಂದು ಗರಿ ಒಂದೊಂದು ಕಡೆ ದಿಕ್ಕಾಪಾಲು ಮಾಡ್ತೀನಿ. ಆಗಾದ್ರೂ ಮಾತಾಡೊಲ್ಲ. ಅಲ್ಲಿಗೂ ಮಾತಾಡ್ಲಿಲ್ಲ. ಎಷ್ಟು ಹೇಳಿದ್ರೂ ಮಾತಾಡ್ಲೆ ಇಲ್ಲ. ಎಷ್ಟು ಹೇಳಿ ಎಷ್ಟು ಕೇಳಿದ್ರು ಮಾತಾಡ್ಲಿಲ್ಲ. ಆಮೇಲೆ ಪುನಃ ದೇವೆಂದ್ರರಾಯ ಶುರು ಮಾಡಿದ್ರು. ಒಂದು ಗುಡುಗುಡುಗಿದ್ರು. ಗರಗರ ತಿರೀ ಕೆಳಗೆ ಬಿದ್ಲು ಈಯಮ್ಮ.

ಒಳಗಡೆನೇ ಒಂದು ಮಿಂಚು ಮಿಂಚಿದ ತಕ್ಷಣವೇ ಹನ್ನೆರಡು ಅಂತಸ್ತಿನ ಮಾಡಿ ಮೇಲೆ ಪಳಪಳನೇ ಉದರೋಗಿ ಬಿಡು. ಒಂದು ಮಿಂಚು ಮಿಂಚ್ತಾನೆ.

ಕೆಳಕ್ಕೆ ಬಿದ್ದೋದ್ರು ಈಯಮ್ಮ. ಬಿದ್ದೋತ್ಲನೇ ಏಕವಾಗಿ ಎಲ್ಲೂ ಇಲ್ಲದ

ಮಳೆ ಬರಿಸ್ಬಿಟ್ಟ. ಮಳೆ ಬರಿದಾಗ ಈಯಮ್ಮನ್ನ ನಾಲ್ಕು ಆಳು ಅಣ್ಣ ತಮ್ಮದೀರು ಜೋಳಿಗೆ ಒಳಗೆ ಕಟ್ಕೊಂಡು ಹೋಗ್ತಾ ಇದ್ದಾರೆ. ಇವರಪ್ಪ ಇವರಮ್ಮ ಊಟ ಮಾಡೋ ಬಂಗಾರದ ತಣಿಗೆ ತೇಲಿಕೊಂಡು ವೋಗ್ತಾ ಇರ್ತದೆ. ಆದ್ರೂ ಮಾತಾಡದೋದ್ಲು.

ಪಕ್ಕದಳ್ಳಿಗೆ ವೋಗಿ ತಿರ್ದು, ಹೊರ್ದು ಅಣ್ಣತಮ್ಮಂದಿರು ತಂದು ದವಸ ರಾಗಿ ಅಕ್ಕಿ ತಂದಿಟ್ಟಿದ್ರೆ, ಕೋಳಿ ಬಿಟ್ಟು ಎಲ್ಲಾ ಚೆಲ್ಲಾಡಿಸಿಬಿಡ್ತಾನೆ, ದೇವೆಂದ್ರರಾಯ. ಅಲ್ಲಿಗೂ ಮಾತಾಡೋದೇ ಇಲ್ಲ. ಆಮೇಲಿಂದ ಪುನಃ ತಿರಾ ಇವು ಹೋರಿಬಿಟ್ಟಟ್ಟು ಗುಟ್ರಕ್ಕೆ ಹಾಕ್ಸಿ ಈ ರೆಕ್ಕೆ ಗರಿಗಳು ದಿಕ್ಕಾಪಾಲು ಆಗೋಗಿ ಬಿಡ್ತವೆ. ಅಲ್ಲಿಗೂ ಮಾತಾಡೋಲ್ಲ.

ಏನ್ಮಾಡಿದ್ರು ಇಷ್ಟಾದ್ರೂ ಮಾತಾಡೇ ಇಲ್ವಲ್ಲ. ಏನೋ ಇರೋದು ಅಂದ್ಬಿಟ್ಟು ಈ ಊರಲ್ಲಿ ಈವತ್ತು ಸಂಭ್ರಮ ಐತೆ. ಪ್ರತಿಯೊಬ್ರು ಬಂದು ಊಟ ಮಾಡೋಕು, ಮಕ್ಕು ಮರಿ ಚಿಕ್ಕವು ದೊಡ್ಡೋರು ಅಂತ ಅನ್ನದ ಸಂತರ್ಪಣೆ ಮಾಡೋ ಏರ್ಪಾಟು ಮಾಡ್ತಾರೆ. ಆಗಾದ್ರೂ ಬಂದು ಊಟ ಮಾಡಲ್ಲ.

ಅಲ್ಲಿಗೂ ಮಾತಾಡೋಲ್ಲ. ನೀನು ಎಷ್ಟು ನಾಕೈದು ದಿನಾ ಊಟ ಮಾಡ್ತೀರಾ ಅಸಿವಾತಲ್ಲ. ಆಗಾದ್ರೂ ಮಾತಾಡೋದಿಲ್ಲ. ಆಗ್ಲೂ ಮಾತಾಡಲ್ಲ ಅಂತ ಹೇಳ್ತಾಳೆ. ಆಮೇಲೆ ಇಷ್ಟು ಮಾಡಿ ಹೇಳಿ ಅದೂನಾ ದೇವೆಂದ್ರ ಮಾತೇ. ಆಡೋದಿಲ್ಲ. ಮಾತಾಡ್ದೆ ಹೋಗ್ಬಿಡ್ತಾರೆ. ಮಾತಾಡೋದೆ ಇಲ್ಲ. ಆಮೇಲೆ ಜನ ಎಲ್ಲಾ ಅಯ್ಯೋ ಯಾವ ಸೀಮೆ ದೊರೆ ಬಂದು ಬೇಕಾದಂಗೆ ನಾವು ಮಕ್ಕು ಮರೀ ಹೋಗಿ ಊಟ ಮಾಡೋಣ ಸಂತುಷ್ಟಿಯಾಗಿ ಅಂತ ಎಲ್ಲಾ ಊಟ ಮಾಡ್ತಾ ಇದ್ದಾರೆ ಸಂಭ್ರಮದಿಂದ ಆಗೂ, ಮಾತಾಡೋದೆ ಇಲ್ಲ ವೋಗೀ.

ಊಟಾನೂ ಮಾಡಲ್ಲ. ವೋಗೋದು ಇಲ್ಲ ಆಮೇಲಿಂದ ಊಟ ಮಾಡ್ಕೊಂಡು ಪುನಃ ಬರ್ತಾ ಇರ್ತಾರೆ. ಆಗೂನಾ ವೋಗೋದಿಲ್ಲ. ಆಮೇಲೆ ದೇವೇಂದ್ರ ಹೇಳ್ತಾರೆ. ಇಷ್ಟು ನೀನು ಹಟ ಮಾಡಿರೋದು ಏನು ? ಅಂತ ಪುನಃ ಬಂದು ಕೇಳೊವಕ್ಕೇ 'ಇಷ್ಟೆಲ್ಲಾ ಆಗೋಯ್ತಲ್ಲ, ಅನಾಹುತ. ಇನ್ನೇನು ತೇಲಾಗೋಯ್ತು, ಹನ್ನೆರಡು ಅಂತಸ್ತಿನ ಮಾಡೀನೂ ಬಿದ್ದಾಗೋಯ್ತು, ನೀನು ಮಾಡಿರೋದು ಈ ತಪ್ಪು ಅಂತ ಒಳದೊಡೇ ಸಿಗ್ದು ತೋರ್ಸ್ತ್ಯಾ ಹೊತ್ಯೆ, ಆಗ

ಅದರಲ್ಲಿ ರೋದು ಸೂಜೀ ನೋಡಿ, ಆಗ ಅವನ ಮನಸ್ಸು ಅವನೇ ತಿಳ್ಕೊಂಡು ಎಂಡ್ರು ಕೊಡಬಾರ್ದು ಕಷ್ಟ ಕೊಟ್ಟವ್ನೇ ಅಂದ್ದಿಟ್ಟು, ಪುನಃ ಅವು ಗಂಡ ಹೆಂಡ್ರು.

ಆ ಹೆಂಡತಿನ ಬಿಟ್ಟು ಬಿಟ್ಟು, ಹನ್ನೆರಡು ಅಂತಸ್ತಿನ ಮಾಡಿ ಹ್ಯಾಗಿತ್ತೊ ಪುನಃ ಅದೇತರ ಮಾಡಿಬಿಟ್ಟು, ಆಗ ಆಕಾಶದಷ್ಟು ಹಸೆ ಉಯ್ಯಿಕ್ಕಿಸಿ ಭೂಮಿ ತಾಯಿಯಷ್ಟು ಚಪ್ಪರ ಹಾಕ್ಸಿ, ಅವಾಗ ಲಗ್ನ ಆಗೋಗ್ತಾರೆ.

ಹೇಳಿದವರು :
ಯಶೋದಮ್ಮ ತಿಪ್ಪಾಪುರ,
ವೀರಪುರ ಅಂಚೆ, ದೊಡ್ಡಬಳ್ಳಾಪುರ ತಾಲ್ಲೂಕು.

## ಸಂಪಾದಕರ ವಿಳಾಸ:

**ಪ್ರೊ. ರೇಣುಕಮ್ಮ ಜೆ.**

ಸಹ ಪ್ರಾಧ್ಯಾಪಕರು, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು
ಯಲಹಂಕ ಉಪನಗರ, ಬೆಂಗಳೂರು,
ಸಂಚಾರಿವಾಣಿ : ೯೯೮೦೫೩೨೦೩೧
ವಿ–ಅಂಚೆ : renukamma@sfgc.ac.in

**ಡಾ. ಆರ್. ವಾದಿರಾಜು**

ಸಹಾಯಕ ಪ್ರಾಧ್ಯಾಪಕರು, ವಿಜಯ ಪದವಿ ಕಾಲೇಜು
ಆರ್.ವಿ.ರಸ್ತೆ, ಬಸವನಗುಡಿ, ಬೆಂಗಳೂರು–೫೬೦೦೦೪
ಸಂಚಾರಿವಾಣಿ : ೯೭೩೧೭೩೩೨೪೫
ವಿ–ಅಂಚೆ : rvrajurao1973@gmail.com

**ಪ್ರೊ. ನಾರಾಯಣ ಸ್ವಾಮಿ ಎಸ್.ಜಿ.**

ಸಹ ಪ್ರಾಧ್ಯಾಪಕರು, ವಿ.ಇ.ಟಿ ಪ್ರಥಮ ದರ್ಜೆ ಕಾಲೇಜು
ಜೆ.ಪಿ.ನಗರ, ಬೆಂಗಳೂರು
ಸಂಚಾರಿವಾಣಿ : ೯೯೦೧೮೪೪೭೦೯
ವಿ–ಅಂಚೆ : dhruthiknswamy@gmail.com